ಸಂಪುಟ: 13 Volume | ಸಂಚಿಕೆ: 321 Issue | ಪುಟಗಳು 08 Pages | ಬುಧವಾರ 11 ಫೆಬ್ರವರಿ 2026 | ₹6 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಅನುಭವವೊಂದು ಅಮೂಲ್ಯ ಅಪೂರ್ವ ವಜ್ರ. ಅದಕ್ಕಾಗಿ ಎಷ್ಟೋ ಜನರು ಬೆವರು, ರಕ್ತ ಸುರಿಸಿದ್ದಾರೆ.

–ಶೇಕ್ಸ್ ಪಿಯರ್

ಮಟಕಾ ಕಿಂಗ್ ಪಿನ್‌ಗಳ ಮನೆಗಳ ಶೋಧ 6 | ವಿದ್ಯಾರ್ಥಿ ಜೀವನದಲ್ಲಿ ಶಿಸ್ತು ಪಾಲನೆ ಅಗತ್ಯ 7 | ರೈತರಿಗೆ ಎಮರ್ಜೆನ್ಸಿ ಸೇವೆ ಕುರಿತು ಜಾಗೃತಿ 8

## ಸಚಿವರ ಕೈ ಚೀಲ ಕಳವು, ನೌಕರ ಸೆರೆ



**ಬೆಂಗಳೂರು:** ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರ ಕಚೇರಿಯಲ್ಲಿ 300 ಗ್ರಾಂ ಚಿನ್ನಾಭರಣ ಹಾಗೂ 1.50 ಲಕ್ಷ ರೂ.ನಗದು ಇದ್ದ ಕೈಚೀಲ ಕಳವಾಗಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಡಿ ಗ್ರೂಪ್ ನೌಕರನನ್ನು ವಿಧಾನಸೌಧ ಪೊಲೀಸರು ಬಂಧಿಸಿದ್ದಾರೆ. ನವೀನ್ ಎಂಬವರು ಕೆಲಸದ ನಿಮಿತ್ತ ಸಚಿವ ಭೈರತಿ ಸುರೇಶ್ ಅವರ ಕಚೇರಿಗೆ ಬಂದಿದ್ದ ವೇಳೆ, ಕೈಚೀಲದಲ್ಲಿದ್ದ 300 ಗ್ರಾಂ ಚಿನ್ನಾಭರಣ ಹಾಗೂ 1.50 ಲಕ್ಷ ನಗದು ಸಹಿತ ಕಚೇರಿಯಲ್ಲೇ ಮರೆತು ಹೊರಟಿದ್ದರು. ಮಾರನೇ ದಿನ ಕಚೇರಿಗೆ ಬಂದು ಪರಿಶೀಲಿಸಿದಾಗ ಕೈಚೀಲ ನಾಪತ್ತೆಯಾಗಿರುವುದು ಗಮನಕ್ಕೆ ಬಂದಿದೆ. ಕಾರ್ಯಾಚರಣೆ ನಡೆಸಿದ ವಿಧಾನಸೌಧ ಪೊಲೀಸರು ಆರೋಪಿ ಡಿ ಗ್ರೂಪ್ ನೌಕರನನ್ನು ಬಂಧಿಸಿದ್ದಾರೆ.

## ಬಿಡಿಎ ಜೊತೆ ಸಮನ್ವಯ ಸಾಧಿಸಿ

**ಬೆಂಗಳೂರು:** ವರ್ತೂರು ಕೆರೆಯನ್ನು ನಗರ ಪಾಲಿಕೆಗೆ ಹಸ್ತಾಂತರ ಪಡೆಯಲು ಬಿ.ಡಿ.ಎ ನೊಂದಿಗೆ ಸಮನ್ವಯ ಸಾಧಿಸಿ ಎಂದು ಡಿ.ಎಸ್. ರಮೇಶ್ ತಿಳಿಸಿದ್ದಾರೆ. ಪೂರ್ವ ನಗರ ಪಾಲಿಕೆ ವ್ಯಾಪ್ತಿಯ ಬೆಳ್ಳಂದೂರು ಹಾಗೂ ವರ್ತೂರು ಕೆರೆಗಳ ಪುನಶ್ಚೇತನ ಕಾಮಗಾರಿಗಳ ಪ್ರಸ್ತುತ ಸ್ಥಿತಿಗತಿ, ಕೆರೆಗಳಿಗೆ ಒಳಬರುವ ಮಲಿನ ನೀರಿನ ನಿಯಂತ್ರಣ ಮತ್ತು ತಡೆ ಕ್ರಮಕ್ಕಾಗಿ ವಿವಿಧ ಇಲಾಖೆಗಳ ನಡುವೆ ಸಮನ್ವಯ ಸಾಧಿಸಲು ನಗರ ಪಾಲಿಕೆ ಇಂಜಿನಿಯರ್, ಬಿಡಿಎ ಇಂಜಿನಿಯರ್, ಬಿ.ಡಬ್ಲ್ಯೂ, ಎಸ್.ಎಸ್.ಬಿ ಇಂಜಿನಿಯರ್ ಹಾಗೂ ಘನ ತ್ಯಾಜ್ಯ ನಿರ್ವಹಣೆ ವಿಭಾಗದ ಅಧಿಕಾರಿಗಳೊಂದಿಗೆ ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್.ರಮೇಶ್ ರವರು ಜಂಟಿ ಪರಿಶೀಲನಾ ಕಾರ್ಯವನ್ನು ನಡೆಸಿದ್ದಾರೆ.

## ತಡೆಯಾಜ್ಞೆ ತೆರವು ಮಾಡಿದ ಕೋರ್ಟ್




**ಬೆಂಗಳೂರು:** ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ, ಬೆಂಗಳೂರು ನಗರ ಘಟಕ ಚುನಾವಣೆಯನ್ನು ನಡೆಸಲು ಗ್ರೀನ್ ಸಿಗ್ನಲ್ ನೀಡಿರುವ ನ್ಯಾಯಾಲಯ, ಚುನಾವಣೆಗೆ ನೀಡಿದ್ದ ತಡೆಯಾಜ್ಞೆ ತೆರವು ಮಾಡಿ ಆದೇಶಿಸಿದೆ. ಒಂದು ತಿಂಗಳೊಳಗಾಗಿ ಅರ್ಜಿದಾರನ ನಾಮಪತ್ರವನ್ನು ಪರಿಗಣಿಸಿ ಚುನಾವಣೆ ನಡೆಸಲು ನ್ಯಾಯಲಯ ಸೂಚಿಸಿದೆ. ಬೆಂಗಳೂರಿನ ನಗರ ಜಿಲ್ಲಾ ಘಟಕದ ಅಧ್ಯಕ್ಷ ಸ್ಥಾನಕ್ಕೆ ಸಲ್ಲಿಸಿದ್ದ ವಾದಿಯ ನಾಮಪತ್ರವನ್ನು ಪರಿಗಣಿಸುವಂತೆ ಸೂಚಿಸಿರುವ ನ್ಯಾಯಾಲಯ, ಚುನಾವಣೆಯನ್ನು ಕ್ಯಾಲೆಂಡರ್ ಪ್ರಕಾರ ಒಂದು ತಿಂಗಳೊಳಗೆ ಪೂರ್ಣಗೊಳಿಸುವಂತೆ ತಿಳಿಸಿದೆ.

ಅಲ್ಲದೆ, ವಾದಿಯು ನ್ಯಾಯಾಲಯದಲ್ಲಿ ದಾಖಲಿಸಿದ್ದ ದಾವವನ್ನು ವಜಾಗೊಳಿಸಿದೆ.

**ನ್ಯಾಯಾಲಯ ತೀರ್ಪಿಗೆ ಸ್ವಾಗತ:** ನ್ಯಾಯಾಲಯ ನೀಡಿರುವ ತೀರ್ಪು ನ್ನು ಸ್ವಾಗತಿಸಿರುವ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ (ಕೆಯುಡಬ್ಲ್ಯೂಜೆ) ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಅವರು, ನಿಯಮಾವಳಿ ಪ್ರಕಾರ ತಿಂಗಳೊಳಗೆ ಚುನಾವಣಾ ಪ್ರಕ್ರಿಯೆ ಪೂರ್ಣಗೊಳಿಸುವುದಾಗಿ ತಿಳಿಸಿದ್ದಾರೆ.

## ಮೈಸೂರ್ ಸೋಪ್ ರಾಯಭಾರಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಸರಕಾರಿ ಸ್ವಾಮ್ಯದ ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಯಮಿತ (ಕೆ.ಎಸ್.ಡಿ.ಎಲ್) ತಯಾರಿಸುವ ಉತ್ಪನ್ನಗಳ ಮಾರುಕಟ್ಟೆ ಬಲವರ್ಧನೆಯ ಅಂಗವಾಗಿ ಖ್ಯಾತ ಹಿಂದಿ ನಟಿ ತಮನ್ನಾ ಭಾಟಿಯಾ ಅವರನ್ನು ಇಂದಿನಿಂದ 2 ವರ್ಷಗಳ ಅವಧಿಗೆ ಪ್ರಚಾರ ರಾಯಭಾರಿಯನ್ನಾಗಿ ನೇಮಿಸಿಕೊಳ್ಳಲಾಗಿದೆ. ಪಾರಂಪರಿಕ ಹೆಮ್ಮೆಯ ಉತ್ಪನ್ನವಾಗಿರುವ ಮೈಸೂರು ಸ್ಯಾಂಡಲ್ ಸೋಪನ್ನು ನವನವೀನ ರೂಪದಿಂದಿಗೆ ಬಿಡುಗಡೆ ಮಾಡಲಾಗುವುದು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ ಬಿ ಪಾಟೀಲ ತಿಳಿಸಿದ್ದಾರೆ.ಸೋಮವಾರ ಈ ಕುರಿತು ಮಾತನಾಡಿರುವ ಸಚಿವ, ಕೆ.ಎಸ್.ಡಿ.ಎಲ್. ಸಂಸ್ಥೆಯ ವಾರ್ಷಿಕ ವಹಿವಾಟನ್ನು 2030ರ ಹೊತ್ತಿಗೆ 5,000 ಕೋಟಿ ರೂ. ಗಳ ಮಟ್ಟಕ್ಕೆ ಬೆಳೆಸುವ ಗುರಿ ಇಟ್ಟುಕೊಳ್ಳಲಾಗಿದೆ ಎಂದಿದ್ದಾರೆ.

## 14ರಂದು ಭೀಮಣ್ಣ ಖಂಡ್ರೆ ನುಡಿನಮನ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಇತ್ತೀಚೆಗೆ ಲಿಂಗೈಕ್ಯರಾದ ಮಾಜಿ ಸಚಿವ ಶತಾಯುಷಿ ಲೋಕನಾಯಕ ಡಾ. ಭೀಮಣ್ಣ ಖಂಡ್ರೆ ಅವರ ಗೌರವಾರ್ಥ ಫೆ.14ರಂದು ನುಡಿನಮನ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ಸಚಿವ ಈಶ್ವರ ಬಿ ಖಂಡ್ರೆ ತಿಳಿಸಿದ್ದಾರೆ.

ಸುದ್ದಿಗಾರರಿಗೆ ವಿವರ ನೀಡಿದ ಅವರು, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮತ್ತು ಭಾಲ್ಕಿಯ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ಆಶ್ರಯದಲ್ಲಿ ಬೆಂಗಳೂರು ಅರಮನೆ ಆವರಣದ ಗೇಟ್ 4ರಲ್ಲಿರುವ ಗಾಯತ್ರಿ ವಿಹಾರದಲ್ಲಿ ಕಾರ್ಯಕ್ರಮ ನಡೆಯಲಿದೆ. ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ಡಾ. ಶಿವಮೂರ್ತಿ ಶಿವಾಚಾರ್ಯರು, ಸಿದ್ದಲಿಂಗ ಮಹಾಸ್ವಾಮೀಜಿ, ಭಾಲ್ಕಿ ಹಿರೇಮಠದ ಡಾ. ಬಸವಲಿಂಗ ಪಟ್ಟದ್ದೇವರು ಸಾನ್ನಿಧ್ಯವಹಿಸಲಿದ್ದಾರೆ ಎಂದು ವಿವರಿಸಿದ್ದಾರೆ. ಪ್ರತಿಪಕ್ಷನಾಯಕ ಮಲ್ಲಿಕಾರ್ಜುನ ಖರ್ಗೆ, ಸಿಎಂ ಸಿದ್ದರಾಮಯ್ಯ, ಸಚಿವ ಡಿ.ಕೆ. ಶಿವಕುಮಾರ್, ಸಭಾಧ್ಯಕ್ಷ ಯು.ಟಿ.ಖಾದರ್, ಸಭಾಪತಿ ಬಸವರಾಜ ಹೊರಟ್ಟಿ, ಕೇಂದ್ರ ಸಚಿವ ವಿ.ಸೋಮಣ್ಣ, ಮಾಜಿ ಸಿಎಂ ಎಂ. ವೀರಪ್ಪಮೊಯ್ಲಿ, ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಭಾಗವಹಿಸಲಿದ್ದಾರೆ ಎಂದಿದ್ದಾರೆ.

# ಡಿಸಿಎಂ ಅಲ್ಲಿ, ಸಿಎಂ ಇಲ್ಲಿ!

### ಸಿಎಂ ಸಿದ್ದರಾಮಯ್ಯ ಅವರಿಂದ ಬಜೆಟ್ ಸಿದ್ದತಾ ಸಭೆ | ಡಿಸಿಎಂ ಡಿಕೆ ಶಿವಕುಮಾರ್ ದಿಢೀರ್ ದೆಹಲಿಗೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಅವರಲ್ಲಿ ಇವರಿಲ್ಲಿ ಎಂಬಂತಾಗಿದೆ ರಾಜ್ಯ ಕಾಂಗ್ರೆಸ್ ಪಕ್ಷದ ಸ್ಥಿತಿ. ಸಿಎಂ ಸಿದ್ದರಾಮಯ್ಯ ಅವರು ಬಜೆಟ್ ಸಿದ್ದತಾ ಸಭೆಯಲ್ಲಿ ತೊಡಗಿಸಿ ಕೊಂಡಿದ್ದಾರೆ. ಈಗಾಗಲೇ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಅವರು ತೊಡಗಿಸಿಕೊಂಡಿದ್ದರು. ಜಲ ಸಂಪನ್ಮೂಲ ಇಲಾಖೆಗೆ ಸೇರಿದ ಸಭೆಯೂ ಇತ್ತು ಆದರೆ ಡಿಸಿಎಂ ಡಿಕೆ ಶಿವಕುಮಾರ್ ಅವರು ಸಭೆಗೆ ಗೈರಾಗಿ ದೆಹಲಿಗೆ ತೆರಳಿದ್ದಾರೆ.

**ಅಂತಿಮ ತೀರ್ಮಾನ..?:** ಪ್ರಿಯಾಂಕಾ ಗಾಂಧಿ ಅಧ್ಯಕ್ಷತೆಯಲ್ಲಿ ನಡೆಯಲಿರುವ ಸಭೆಯಲ್ಲಿ ಭಾಗವಹಿಸಲು ಡಿ.ಕೆ.ಶಿವಕುಮಾರ್ ದೆಹಲಿಗೆ ಹೊರಟಿದ್ದರೂ, ಎರಡು ದಿನಗಳ ಕಾಲ ಅಲ್ಲಿಯೇ ಉಳಿಯಲಿರುವ ಡಿಸಿಎಂ, ಬೇಡಿಕೆ ವಿಚಾರದಲ್ಲಿ ವರಿಷ್ಠರ ಅಂತಿಮ ತೀರ್ಮಾನ ಕೇಳಲು ಬಯಸಿದ್ದಾರೆ ಎಂದು ಮೂಲ ಖಚಿತ ಪಡಿಸಿವೆ.

**ಕೆರಳಿಸಿದ ನಿರ್ಲಿಪ್ತತೆ:** ಸರ್ಕಾರಕ್ಕೆ 2 ವರ್ಷ 8 ತಿಂಗಳು ಮುಗಿದಿದೆ. ಹಕ್ಕೊತ್ತಾಯವನ್ನು ಪದೇಪದೆ ನೆನಪಿಸಿದರೂ ಹೈಕಮಾಂಡ್ ನಿರ್ಲಿಪ್ತವಾಗಿ ಉಳಿದಿರುವುದು ಡಿಸಿಎಂ ಅವರನ್ನು ಕೆರಳಿಸಿದೆ. ಈ ಹಿನ್ನೆಲೆಯಲ್ಲಿ ಈ ಸಲದ ಡಿಸಿಎಂ ದೆಹಲಿ ಪ್ರವಾಸ ಮಹತ್ವ ಪಡೆದುಕೊಂಡಿದೆ.

### ಹೈ ಕಮಾಂಡ್ ಭೇಟಿ..?

ಮುಖ್ಯಮಂತ್ರಿ ಸಿದ್ದರಾಮಯ್ಯ 2026–27ನೇ ಸಾಲಿನ ಬಜೆಟ್ ತಯಾರಿಗೆ ಇಲಾಖಾವಾರು ಪೂರ್ವಭಾವಿ ಸರಣಿ ಸಭೆಗಳನ್ನು ಕೈಗೆತ್ತಿ–ಕೊಂಡಿದ್ದು, ಜಲಸಂಪನ್ಮೂಲ ಇಲಾಖೆ ಸಭೆ ಪೂರ್ವ ನಿಗದಿಯಾಗಿದೆ. ಆದರೆ ಈ ಸಭೆಯಲ್ಲಿ ಪಾಲ್ಗೊಳ್ಳಲು ಇಲಾಖೆ ಅಧಿಕಾರಿಗಳಿಗೆ ಸೂಚಿಸಿರುವ ಡಿಕೆ ಶಿವಕುಮಾರ್, ಹೈಕಮಾಂಡ್ ಭೇಟಿಗೆ ಹೊರಟಿರುವುದು ಗಮನ ಸೆಳೆದಿದೆ.

### ಅವರಿಲ್ಲದೇ ಬಜೆಟ್ ಸಭೆ

ಬಜೆಟ್ ಸಿದ್ಧತಾ ಸಭೆಯಲ್ಲಿ ಡಿಸಿಎಂ ಹಾಜರಾಗುವ ಬಗ್ಗೆ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ಸಿಎಂ, ಅಸ್ಸಾಂ ರಾಜ್ಯದಲ್ಲಿ ಸಭೆಯೊಂದಕ್ಕೆ ಹಾಜರಾಗಬೇಕಾದ ಕಾರಣ ಬಜೆಟ್ ಸಿದ್ಧತೆ ಸಭೆಯಲ್ಲಿ ಭಾಗವಹಿಸಲಾಗುವುದಿಲ್ಲ ಎಂದು ಉಪಮುಖ್ಯಮಂತ್ರಿ ಡಿಕೆಶಿವಕುಮಾರ್ ತಿಳಿಸಿರುವುದಾಗಿ ಹೇಳಿದರು. ಅವರ ಉಪಸ್ಥಿತಿಯಲ್ಲೂ ಬಜೆಟ್ ಸಿದ್ದತಾ ಸಭೆ ನಡೆಸುವುದಾಗಿ ಸ್ಪಷ್ಟಪಡಿಸಿದ್ದಾರೆ.

### ವರಿಷ್ಠರ ಜೊತೆ ಚರ್ಚೆ

ಡಿ.ಕೆ.ಶಿವಕುಮಾರ್ ಅವರು ದೆಹಲಿಗೆ ತೆರಳಿದ್ದು, ಅಲ್ಲಿ ಹೈಕಮಾಂಡ್ ನಾಯಕರ ಜೊತೆ ಚರ್ಚೆ ನಡೆಸಲಿದ್ದಾರೆ ಎಂದು ಮಾಗಡಿ ಕ್ಷೇತ್ರದ ಶಾಸಕ ಎಚ್.ಸಿ.ಬಾಲಕೃಷ್ಣ ಹೇಳಿದ್ದಾರೆ. ಕೆಪಿಸಿಸಿ ಅಧ್ಯಕ್ಷ, ಉಪಮುಖ್ಯಮಂತ್ರಿಯಾಗಿರುವ ಡಿ.ಕೆ.ಶಿವಕುಮಾರ್ ಅವರು ದೆಹಲಿಗೆ ಭೇಟಿ ನೀಡುವುದರಲ್ಲಿ ವಿಶೇಷತೆ ಏನಿಲ್ಲ. ಪಕ್ಷ ಹಾಗೂ ಸರ್ಕಾರದ ಕೆಲಸಗಳಿಗೆ ಭೇಟಿ ನೀಡಿರುತ್ತಾರೆ. ವರಿಷ್ಠರ ಜೊತೆ ಚರ್ಚೆ ಮಾಡುತ್ತಾರೆ ಎಂದಿದ್ದಾರೆ.

### ಬಾಯ್ಮುಚ್ಚೊಂಡಿದ್ದರೆ..!

ಎಲ್ಲರೂ ಬಾಯಿ ಮುಚ್ಚಿಕೊಂಡು ಇದ್ದರೆ ಒಳ್ಳೆಯದು ಎಂದು ಮಲ್ಲಿಕಾರ್ಜುನ ಖರ್ಗೆ ಸಾಹೇಬರು ಹೇಳಿದ್ದಾರೆ. ಅದನ್ನು ನಾವು ಪಾಲನೆ ಮಾಡಬೇಕು ನನ್ನ ಪರ, ವಿರುದ್ಧ ಹೇಳಿಕೆಗಳನ್ನು ಶಾಸಕರು, ಮಂತ್ರಿಗಳು, ಯಾರೇ ನೀಡುತ್ತಿರಬಹುದು. ಈ ಹೇಳಿಕೆಗಳು ಪಕ್ಷಕ್ಕೆ ಹಾನಿ ಮಾಡುವ ಹೇಳಿಕೆಗಳೇ ಹೊರತು ಪಕ್ಷಕ್ಕೆ ಒಳ್ಳೆಯದನ್ನು ಮಾಡುವ ಹೇಳಿಕೆಗಳಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

### ಹೈ ವಿಳಂಬ ಗೊತ್ತಿಲ್ಲ

80 ಶಾಸಕರ ಬೆಂಬಲ ಎಂಬುದು ಪ್ರಶ್ನೆಯಲ್ಲ. ಸಮರ್ಥರಿಗೆ, ಪಕ್ಷವನ್ನು ಮುನ್ನಡೆಸುವ ಸಾಮರ್ಥ್ಯ ಇರುವವರಿಗೆ ಅವಕಾಶ ಸಿಗುತ್ತದೆ. ಕುರ್ಚಿ ಗೊಂದಲ ಶೀಘ್ರ ಬಗೆಹರಿಯುವ ನಿರೀಕ್ಷೆ ಇತ್ತು. ಈ ವಿಚಾರದಲ್ಲಿ ಏಕೆ ವಿಳಂಬವಾಗುತ್ತಿದೆ ಎಂಬುದು ಗೊತ್ತಿಲ್ಲ. ಈ ವಿಚಾರದಲ್ಲಿ ಹೈಕಮಾಂಡ್ ತೀರ್ಮಾನ ಕೈಗೊಳ್ಳಬೇಕು. ಎಂದು ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದ್ದಾರೆ.

## ಪ್ರೀತಂ ಗೌಡ V/S ನಿಖಿಲ್ ಕುಮಾರಸ್ವಾಮಿ

• ಮಲ್ಲಮ್ಮ ನುಡಿ ವಾರ್ತೆ ಹಾಸನ





ಬಿಜೆಪಿ ರಾಷ್ಟ್ರೀಯ ಪಕ್ಷವಾಗಿದ್ದು, ಅಲ್ಲಿನ ಶಿಸ್ತು ಪಾಲನಾ ಸಮಿತಿಯು ಪಕ್ಷದ ಒಳಗಿನ ಬೆಳವಣಿಗೆಗಳ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳುತ್ತದೆ. ಮಿತ್ರಪಕ್ಷಗಳ ಕಾರ್ಯಕರ್ತರು ಬೀದಿಯಲ್ಲಿ ನಿಂತು ಪರಸ್ಪರ ಗೌರವ ಕಳೆದುಕೊಳ್ಳುವಂತೆ ವರ್ತಿಸಬಾರದು ಎಂದು ಜೆಡಿಎಸ್ ರಾಜ್ಯ ಯುವ ಘಟಕ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಿಳಿಸಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡುವ ವೇಳೆ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಬಿಜೆಪಿ ಸ್ವತಂತ್ರ ಸ್ಪರ್ಧೆ ಬಗ್ಗೆ ಬಿಜೆಪಿ ಮಾಜಿ ಶಾಸಕ ಪ್ರೀತಂಗೌಡ ಹೇಳಿಕೆಗೆ ಪ್ರತಿಕ್ರಿಯಿಸಿ, ನಮ್ಮಲ್ಲಿರುವಂತೆ ಶಿಸ್ತುಪಾಲನಾ ಸಮಿತಿಯೂ ಬಿಜೆಪಿಯಲ್ಲೂ ಇದೆ. ಪಕ್ಷದ ವಿರುದ್ಧ ಅಶಿಸ್ತು ತೋರುವವರಿಗೆ, ಬೀದಿ ರಂಪಾಟ ಮಾಡುವವರಿಗೆ ಶಿಸ್ತು ಸಮಿತಿ ತಿದ್ದಿ, ಬುದ್ಧಿ ಹೇಳಲಿದೆ ಅಂದುಕೊಂಡಿದ್ದೇನೆ ಎಂದು ಹೇಳುವ ಮೂಲಕ ತಿರುಗೇಟು ನೀಡಿದ್ದಾರೆ.

## 2 ಲಕ್ಷ 80 ಸಾವಿರ ಹುದ್ದೆಗಳು ಖಾಲಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಮುಖ್ಯಮಂತ್ರಿಗಳೇ, ಎರಡೂವರೆ ವರ್ಷಗಳಿಂದ ಯಾವುದೇ ನೇಮಕಾತಿ ಸರಕಾರದಲ್ಲಿ ಆಗುತ್ತಿಲ್ಲ. 2 ಲಕ್ಷ 80 ಸಾವಿರ ಹುದ್ದೆಗಳು ಖಾಲಿ ಬಿದ್ದಿವೆ. ಒಳ ಮೀಸಲಾತಿ ಕಾಯ್ದೆ ಇನ್ನೂ ಊರ್ಜಿತ ಆಗಿಲ್ಲ. ನೀವು ಮಾಡಿದ್ದೇನು ಎಂದು ಬಿಜೆಪಿ ಧುರೀಣ ಛಲವಾದಿ ನಾರಾಯಣಸ್ವಾಮಿ ಕೇಳಿದ್ದಾರೆ.

ಬಿಜೆಪಿಯ ಮುಖ್ಯಮಂತ್ರಿಗಳಾಗಿದ್ದ ಬಸವರಾಜ ಬೊಮ್ಮಾಯಿಯವರು 15ರಿಂದ 17 ಶೇ, ಎಸ್ಟಿಗಳಿಗೆ 3ರಿಂದ ಶೇ 7 ಮಾಡಿ, ಅವತ್ತೇ ಕಾನೂನು ಮಾಡಿ ಜಾರಿಗೊಳಿಸಿದ್ದರು. ಅದನ್ನು ನೀವು ಊರ್ಜಿತ ಮಾಡಬೇಕಿತ್ತು. ಕೋರ್ಟ್‌ನಲ್ಲಿ ವಾದ ಮಾಡಲು ನೀವು ಅರ್ಜಿಯೂ ಹಾಕಿಲ್ಲ ಎಂದು ಟೀಕಿಸಿದರು. ನೀವು ಬಿಜೆಪಿಯದು ನಾಟಕ ಎಂದವರು ಒಳ ಮೀಸಲಾತಿ ಮಾಡುವಾಗ ಶೇ 17, ಶೇ 7 ರ ಮೇಲೆ ಯಾವ ರೀತಿ ಮಾಡಿದಿರಿ? ನೀವು ಶೆಡ್ಯೂಲ್ 9ಕ್ಕೆ ಸೇರಿಸಿದ್ದೀರಾ ಮುಖ್ಯಮಂತ್ರಿಗಳೇ ಎಂದು ಪ್ರಶ್ನಿಸಿದ್ದಾರೆ.

## ಬೆಳಕಿನ ಕೆಇಬಿ ಇದ್ರೂ ಕತ್ತಲ್ಲಿರುವ ಬಿಳವಾರ

• ಮಲ್ಲಮ್ಮ ನುಡಿ ವಾರ್ತೆ ಯಡ್ರಾಮಿ

ತಾಲೂಕಿನ ಬಿಳವಾರ ಗ್ರಾಮದ ವಾರ್ಡ್ ನಂಬರ್ ಒಂದರ ಈಶ್ವರ್ ದೇವಸ್ಥಾನದ ಮುಂಭಾಗ ಇರುವ ಬೀದಿಯಲ್ಲಿ ಹಲವಾರು ವರ್ಷಗಳಿಂದ ಬೀದಿ ಕಂಬ ಹಾಗೂ ದೀಪದ ಕೊರತೆ ಯಿಂದ ಸಾಮಾನ್ಯ ಜನರು ಪರದಾಡುತ್ತಿದ್ದಾರೆ.

ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವಂತಹ ವಾರ್ಡ್ ನಂಬರ್ 1ರಲ್ಲಿ 15 ವರ್ಷಗಳಿಂದ ವಿದ್ಯುತ್ ಕಂಬ, ಲೈಟಿನ ವ್ಯವಸ್ಥೆ ಇಲ್ಲ.

ಇಲ್ಲಿನ ಹಿರಿಯ ನಾಗರಿಕರು, ಮಹಿಳೆಯರಿಗೆ ಮತ್ತು ಚಿಕ್ಕ ಮಕ್ಕಳಿಗೆ ರಾತ್ರಿಯ ಸಮಯದಲ್ಲಿ ಓಡಾಡಲು ತುಂಬಾ ತೊಂದರೆಯಾಗುತ್ತಿದೆ. ಈ ರಸ್ತೆಯಲ್ಲಿ ಹಾವು ಚೇಳು ಇತ್ಯಾದಿ ಅಪಾಯಕಾರಿ ಜಂತುಗಳಿಂದ ತೊಂದರೆಗೆ ಒಳಗಾಗುತ್ತಿದ್ದಾರೆ. ಈ ವಿಷಯದ ಕುರಿತು ಬಿಳವಾರ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಗಮನಕ್ಕೆ ತಂದರು ಕೂಡ, ಬಿಳವಾರ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿಗಳು ನಿರ್ಲಕ್ಷ ವಹಿಸುತ್ತಿದ್ದಾರೆ. ಪಂಚಾಯಿತಿ ಅಧಿಕಾರಿಗಳು ನಮ್ಮ ಇಲಾಖೆಗೂ ಅದಕ್ಕೂ ಯಾವುದೇ ರೀತಿಯಾದ ಸಂಬಂಧವಿಲ್ಲ ಸಂಬಂಧಪಟ್ಟ ಕೆಇಬಿ ಅಧಿಕಾರಿಗಳಿಗೆ ತಿಳಿಸಿ ಎನ್ನುತ್ತಾರೆ. ಕೆಬಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದೇವೆ ಮನವಿ ಸ್ವೀಕರಿಸಿದ ಅಧಿಕಾರಿಗಳು ನಮಗೆ ಪಂಚಾಯಿತಿಯಿಂದ ಅನುದಾನ ನೀಡಿದರೆ ಮಾತ್ರ ನಾವು




ಕಂಬಗಳನ್ನು ಹಾಗೂ ಲೈಟಿನ ವ್ಯವಸ್ಥೆ ಮಾಡುತ್ತೇವೆ ಎಂದು ಹಿಂಬರ ನೀಡುವ ಮೂಲಕ ತಿಳಿಸಿದ್ದಾರೆ.

### ಅಧಿಕಾರಿಗಳು ನಿರ್ಲಕ್ಷಿಸಿದರೆ ಉಗ್ರ ಹೋರಾಟ

ಎರಡು ಇಲಾಖೆಯಿಂದ ಕಂಗಾಲದ ಜನರು ಯಾರಿಗೆ ಸಂಬಂಧಪಡುತ್ತದೆ ಎನ್ನುವ ವಿಚಾರ ಗೊಂದಲ ಮಾಡಿದೆ ತಕ್ಷಣ ಸಮಸ್ಯೆಯನ್ನು ಪರಿಶೀಲಿಸಿ ಸೂಕ್ತ ವ್ಯವಸ್ಥೆಯನ್ನು ಮಾಡಿಕೊಡಬೇಕು ಎಂದು ಮೆಹಬೂಬ್ ಸಾಬ್ ಚೌದ್ರಿ ವಕೀಲರು ಬಿಳವಾರ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಆಗ್ರಹಿಸಿದ್ದಾರೆ. ಒಂದು ವೇಳೆ ಇದ್ಕೆ ಸಂಬಂಧಪಟ್ಟ ಅಧಿಕಾರಿಗಳು ನಿರ್ಲಕ್ಷ ತೋರಿಸಿದರೆ ಹೋರಾಟ ನಡೆಸುತ್ತೇವೆ ಎಂದು ಎಚ್ಚರಿಸಿದ್ದಾರೆ.

## ಸ್ಪಿರಿಟ್ ಸೇವಿಸಿ 2 ಸಾವು, ಒಬ್ಬ ಗಂಭೀರ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಸಾರಾಯಿ ಎಂದು ಭಾವಿಸಿ ಸ್ಪಿರಿಟ್ ಸೇವಿಸಿದ ಪರಿಣಾಮ ಇಬ್ಬರು ಯುವಕರು ಮೃತಪಟ್ಟಿರುವ ದುರ್ಘಟನೆ ಕೊಪ್ಪಳ ತಾಲೂಕಿನ ಕೂಕನಪಳ್ಳಿ ಗ್ರಾಮದಲ್ಲಿ ನಡೆದಿದೆ. ಮತ್ತೊಬ್ಬ ಯುವಕನ ಸ್ಥಿತಿ ಗಂಭೀರವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಮೃತರನ್ನು ಕೂಕನಪಳ್ಳಿ ಗ್ರಾಮದ ಅಮರಯ್ಯ ಹಿರೇಮಠ (35) ಹಾಗೂ ರಮೇಶ ಹೊಸಹಳ್ಳಿ (25) ಎಂದು ಗುರುತಿಸಲಾಗಿದೆ. ಶರಣಪ್ಪ ಹಂಚಿನಾಳ ಎಂಬ ಯುವಕನಿಗೆ ಗಂಭೀರ ಸ್ಥಿತಿ ಉಂಟಾಗಿದೆ. ಅಮರಯ್ಯ ಜೆಸ್ಕಾಂ ಹೊರಗುತ್ತಿಗೆ ನೌಕರನಾಗಿ ಕೆಲಸ ಮಾಡುತ್ತಿದ್ದರು. ರಮೇಶ ತಂದೆತಾಯಿಗೆ ಒಬ್ಬನೇ ಮಗನಾಗಿದ್ದನೆಂದು ತಿಳಿದುಬಂದಿದೆ. ಘಟನೆಗೆ ಸಂಬಂಧಿಸಿದಂತೆ ಸ್ಪಿರಿಟ್ ತಂದಿದ್ದ ಆರೋಪದ ಮೇಲೆ ಮಾರುತಿ ಬಂಡಿ ಹಾಗೂ ಶರಣಪ್ಪ ಗುರಿಕಾರ ಅವರನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.



### ನಡೆದ ಅಸಲು ಘಟನೆ ಏನು..?

ಕೂಕನಪಳ್ಳಿಯ ಜಮೀನೊಂದರಲ್ಲಿ ಐವರು ಸ್ನೇಹಿತರು ಪಾರ್ಟಿ ಮಾಡಿದ್ದರು. ಈ ವೇಳೆ ದದೇಗಲ್ ಗ್ರಾಮದ ಮಾರುತಿ ಬಂಡಿ ಸಾರಾಯಿ ಎಂದು ಹೇಳಿ ಸ್ಪಿರಿಟ್ ತಂದಿದ್ದಾನೆ ಎಂದು ಆರೋಪಿಸಲಾಗಿದೆ. ಅವನ ಮಾತು ನಂಬಿದ ಅಮರಯ್ಯ ಹಿರೇಮಠ, ರಮೇಶ ಹೊಸಹಳ್ಳಿ ಹಾಗೂ ಶರಣಪ್ಪ ಹಂಚಿನಾಳ ಸ್ಪಿರಿಟ್ ಸೇವಿಸಿದ್ದೇ ಈ ದುರಂತಕ್ಕೆ ಕಾರಣ. ಸ್ಪಿರಿಟ್ ಸೇವಿಸಿದ ಕೆಲವೇ ಸಮಯದಲ್ಲಿ ಮೂವರು ಅಸ್ವಸ್ಥಗೊಂಡಿದ್ದು, ಅವರನ್ನು ಕೊಪ್ಪಳ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ನಂತರ ಅಮರಯ್ಯ ಹಿರೇಮಠ ಹಾಗೂ ಶರಣಪ್ಪ ಹಂಚಿನಾಳ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ರವಾನಿಸಲಾಯಿತು. ಚಿಕಿತ್ಸೆ ಫಲಕಾರಿಯಾಗದೆ ಅಮರಯ್ಯ ಹಿರೇಮಠ ಮೃತಪಟ್ಟಿದ್ದಾರೆ. ಬಳಿಕ ರಮೇಶ ಹೊಸಹಳ್ಳಿ ಕೂಡ ಅಸ್ವಸ್ಥಗೊಂಡು ಚಿಕಿತ್ಸೆ ವೇಳೆ ಸಾವನ್ನಪ್ಪಿದ್ದಾರೆ.

**ಮಾಜಿ ಮುಖ್ಯಮಂತ್ರಿ ದಿ.ಕೆಂಗಲ್ ಹನುಮಂತಯ್ಯನವರು, ರಾಜ್ಯ ಕಂಡ ಪ್ರಾಮಾಣಿಕ ಹಾಗೂ ಧೀಮಂತ ರಾಜಕಾರಣಿ: ಸಿಎಂ ಸಿದ್ದರಾಮಯ್ಯ**

# ಯುವಕ ಕಾಣೆ ಪತ್ತೆಗೆ ಮನವಿ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:

ತಾಲ್ಲೂಕಿನ ಸಂಜೀವರಾಯಕೋಟೆ ಗ್ರಾಮದ 1ನೇ ವಾರ್ಡ್ನ ನಿವಾಸಿ ರಂಗಸ್ವಾಮಿ ಎನ್ನುವ 26 ವರ್ಷದ ಯುವಕಫೆ.07ರಂದು ಕಾಣೆಯಾಗಿರುವ ಕುರಿತು ಬಳ್ಳಾರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪತ್ತೆಗೆ ಸಹಕರಿಸಬೇಕು ಎಂದು ಠಾಣಾಧಿಕಾರಿ ಮನವಿ ಮಾಡಿದ್ದಾರೆ.

ಚಹರೆ ಗುರುತು: ಎತ್ತರ 5.5 ಅಡಿ, ಕೋಲುಮುಖ, ಕಪ್ಪು ಮೈಬಣ್ಣ, ದೃಢವಾದ ಮೈಕಟ್ಟು, ಕಪ್ಪು ಕೂದಲು, ಎಡಗೈಗೆ ಅಮ್ಮ ಎಂದು ಹಚ್ಚೆ ಹಾಕಿಸಿಕೊಂಡಿರುತ್ತಾನೆ.

ಕಾಣೆಯಾದ ಸಂದರ್ಭದಲ್ಲಿ ಕಪ್ಪು ಬಣ್ಣದ ಆಫ್ ಟಿ-ಶರ್ಟ್, ನೀಲಿ ಬಣ್ಣದ ಜೀನ್ಸ್ ಪ್ಯಾಂಟ್, ಧರಿಸಿರುತ್ತಾನೆ. ಕನ್ನಡ, ತೆಲುಗು ಭಾಷೆ ಮಾತನಾಡುತ್ತಾನೆ.

ಯುವಕನ ಬಗ್ಗೆ ಮಾಹಿತಿ ಸಿಕ್ಕಲ್ಲಿ ಬಳ್ಳಾರಿ ಗ್ರಾಮೀಣ ಪೊಲೀಸ್ ಠಾಣೆಯ ದೂ.08392-276461, ಮೊ.9480803049 ಅಥವಾ ಬಳ್ಳಾರಿ ಪೊಲೀಸ್ ಕಂಟ್ರೋಲ್ ರೂಂ ದೂ.08392-258100 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ಕೋರಿದ್ದಾರೆ.

### ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿಂತಾಶ ಸುಧಾರಣೆ ಕಾರ್ಯಗಾರ

# ಪರೀಕ್ಷೆ ಹಬ್ಬದಂತೆ ಸಂಭ್ರಮಿಸಿ : ಸಿ.ಜಿ.ಹಳ್ಳದ



> ಇಂಗ್ಲೀಷ್ ಭಾಷಾ ವಿಷಯ ಸರಳ ವಾಗಿದ್ದು ವಿಧ್ಯಾರ್ಥಿಗಳು ಮನಸಿನಲ್ಲಿಗೊಂದಲ ತಾಳದೆ ಪರೀಕ್ಷೆ ಎದುರಿಸಿದರೆ ಉತ್ತಮ ಫಲಿತಾಂಶ ಪಡೆಯಬಹುದು.
>
> ಶಾಂತಿ ದೇಸಾಯಿ, ಸಂಪನ್ಮೂಲ ವ್ಯಕ್ತಿ, ಆಂಗ್ಲಭಾಷಾ ವಿಷಯ.

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:

ವಿಧ್ಯಾರ್ಥಿಗಳು ಪರೀಕ್ಷೆಗಳನ್ನು ಹಬ್ಬದಂತೆ ಸಂಭ್ರಮಿಸಿ, ಆತ್ಮ ವಿಶ್ವಾಸದಿಂದ ಪರೀಕ್ಷೆ ಎದುರಿಸಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಜಿ.ಹಳ್ಳದ ಹೇಳಿದರು. ಪಟ್ಟಣದ ಪುರಭವನದಲ್ಲಿ ಮಂಗಳವಾರ ನಡೆದ ಎಸ್.ಎಸ್ ಎಲ್.ಸಿ ಪರೀಕ್ಷಾ ಫಲಿತಾಂಶ ಸುಧಾರಣೆ ಕಾರ್ಯಗಾರ ಉದ್ಘಾಟಿಸಿ ಅವರು ಮಾತನಾಡಿದರು. ಕಲ್ಯಾಣ ಕರ್ನಾಟಕ ಅಭಿವೃದ್ಧಿ ಅಡಿಯಲ್ಲಿ 90+ ಫಲಿತಾಂಶ ಪಡೆಯುವ ನಿಟ್ಟಿನಲ್ಲಿ ಕಾರ್ಯಗಾರ ಆಯೋಜಿಸಿದ್ದೇವೆ. ಕಳೆದ ಸಾಲಿನಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ್ರೂ 72% ಫಲಿತಾಂಶ ಮಾತ್ರ ಪಡೆದ್ದಿದ್ದೆವು. ಆದರೆ ಪ್ರಸ್ತುತ ಸಾಲಿನಲ್ಲಿ 90+% ಫಲಿತಾಂಶ ಪಡೆಯಲು ಎಲ್ಲರೂ ಪ್ರಯತ್ನ ಪಡಬೇಕು. ಈ ನಿಟ್ಟಿನಲ್ಲಿ ಕಾರ್ಯಗಾರ ಉತ್ತಮ ವೇದಿಕೆಯಾಗಿದೆ. ವಿಧ್ಯಾರ್ಥಿಗಳು ಶಿಕ್ಷಕರ, ಪಾಲಕರ ವಚನ ಪಾಲಿಸಿ ಉತ್ತಮ ರೀತಿಯಿಂದ ಅಭ್ಯಾಸ ಮಾಡಿ ಉತ್ತಮ ಫಲಿತಾಂಶ ಪಡೆಯಬೇಕು ಎಂದು ಹೇಳಿದರು. ನಿವೃತ್ತ ಮುಖ್ಯ ಶಿಕ್ಷಕ ಜಯರಾಜ್ ಧಾಬಶೆಟ್ಟಿ ಮಾತನಾಡಿ, ವಿಧ್ಯಾರ್ಥಿಗಳು ಆಲಿಸುವ, ಮಾತನಾಡುವ, ಬರೆಯುವ, ಓದುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು. ಪಾಲಕರು ಮನೆಯಲ್ಲಿ ಮಕ್ಕಳನ್ನು ಟಿ. ವಿ ಮತ್ತು ಮೊಬೈಲ ಗಳಿಂದ ದೂರವಿಡಬೇಕು ಎಂದು ಹೇಳಿದರು. ಪ್ರೌಢ ಶಾಲೆ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ದತ್ತು ಕಾಟಕರ ಮಾತನಾಡಿ, ವಿಧ್ಯಾರ್ಥಿಗಳು ಫಲಿತಾಂಶದತ್ತ ಗುರಿ ಇಡಬೇಕು, ಎಸ್.ಎಸ್. ಎಲ್. ಸಿ ಜೀವನ ಬದಲಿಸುವ ಘಟ್ಟ ವಾಗಿದೆ, ಸಮಯ ಪರಿಪಾಲನೆಯಿಂದ ವಿದ್ಯಾಭ್ಯಾಸ ಮಾಡಬೇಕು ಎಂದು ಹೇಳಿದರು. ಎಸ್.ಎಸ್ ಎಲ್.ಸಿ ನೋಡಲ್ ಅಧಿಕಾರಿ ಮಲ್ಲಿಕಾರ್ಜುನ್ ಕನ್ನಾಳೆ ಕಾರ್ಯಾಗಾರದ ಮಹತ್ವದ ಬಗ್ಗೆ ಮಾತನ್ನಾಡಿದರು. ವಿಷಯ ಸಂಪನ್ಮೂಲ ವ್ಯಕ್ತಿ ಶ್ಯಾಂತಿ ದೇಸಾಯಿ ಇಂಗ್ಲೀಷ್ ವಿಷಯದ ಸರಳ ಅಭ್ಯಾಸದ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಅಕ್ಷರ ದಾಸೋಹ ಯೋಜನೆಯ ಸಹಾಯಕ ನಿರ್ದೇಶಕ ಮಲ್ಲಿನಾಥ ಸಜ್ಜನ್, ಶಿಕ್ಷಕ ವಿಜಯಕುಮಾರ್ ಗೌಡಾಗವೆ , ಸಿ.ಆರ್.ಪಿ ಚನ್ನಪ್ಪ ಸೇರಿದಂತೆ ಭಾಲ್ಕಿ ವಲಯದ ನೂರಾರು ವಿಧ್ಯಾರ್ಥಿಗಳು ಹಾಜರಿದ್ದರು.

# ಸಂಪಾದಕೀಯ



ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349

## ರಾಜ್ಯದಲ್ಲಿ ಜಾತಿ ರಾಜಕಾರಣ ನಿಲ್ಲಲಿ, ಒಂದು ಅಗತ್ಯವಿರುವ ಬದಲಾವಣೆ ಬೇಕು

ರಾಜ್ಯದ ರಾಜಕೀಯ ವಾತಾವರಣದಲ್ಲಿ ಜಾತಿ ಆಧಾರಿತ ರಾಜ-ಕಾರಣ ದಿನೇದಿನೇ ಬೇರೂರಿ ಜನತೆಯ ನಿಜವಾದ ಸಮಸ್ಯೆಗಳನ್ನೇ ಮರೆಮಾಡುತ್ತಿರುವುದು ಆತಂಕಕಾರಿ ಸಂಗತಿ. ಅಭಿವೃದ್ಧಿ, ಶಿಕ್ಷಣ, ಉದ್ಯೋಗ, ಆರೋಗ್ಯ ಸೇವೆ ಎಂಬ ಮೂಲಭೂತ ವಿಷಯಗಳು ರಾಜಕೀಯ ಚರ್ಚೆಗಳ ಕೇಂದ್ರವಾಗಬೇಕಾಗಿದ್ದರೆ, ಇಂದು ಜಾತಿ ಸಮೀಕರಣಗಳು ಮತಗಳ ಲೆಕ್ಕಾಚಾರಕ್ಕೆ ಮಾತ್ರ ಸೀಮಿತವಾಗಿವೆ. ಇದರಿಂದ ಸಮಾಜದಲ್ಲಿ ವಿಭಜನೆ ಹೆಚ್ಚುತ್ತಿದೆ; ಒಗ್ಗಟ್ಟಿನ ಬದಲು ಅಸಮಾಧಾನ ಮತ್ತು ಅನುಮಾನಗಳೇ ಬೆಳೆದುಕೊಳ್ಳುತ್ತಿವೆ.

ಜಾತಿ ವ್ಯವಸ್ಥೆ ನಮ್ಮ ಸಮಾಜದ ಒಂದು ಇತಿಹಾಸದ ವಾಸ್ತವಿಕತೆ ಆಗಿದ್ದರೂ, ಅದನ್ನೇ ರಾಜಕೀಯ ಲಾಭಕ್ಕೆ ಬಳಸುವುದು ಪ್ರಗತಿಯ ದಾರಿಗೆ ದೊಡ್ಡ ಅಡ್ಡಿಯಾಗಿದೆ. ಪ್ರತಿ ಚುನಾವಣೆ ಸಂದರ್ಭದಲ್ಲಿ ಕೆಲ ನಾಯಕರು ಜನರನ್ನು ಜಾತಿಯ ಹೆಸರಿನಲ್ಲಿ ಒಡೆದು ತಮ್ಮ ಸ್ವಾರ್ಥ ಸಾಧಿಸಿಕೊಳ್ಳಲು ಪ್ರಯತ್ನಿಸುವುದು ವಿಷಾದಕರ. ಇದರಿಂದ ಯುವಜನತೆಯಲ್ಲಿ ತಪ್ಪು ಸಂದೇಶ ಹೋಗುತ್ತಿದ್ದು, ಸಾಧನೆಗಿಂತ ಗುರುತು ಮುಖ್ಯ ಎನ್ನುವ ಭಾವನೆ ಬೆಳೆದುಕೊಳ್ಳುತ್ತಿದೆ.

ರಾಜಕಾರಣ ಎಂದರೆ ಸೇವೆಯ ವೇದಿಕೆ ಆಗಬೇಕು, ಜಾತಿ ಲೆಕ್ಕಾಚಾರದ ಮಾರುಕಟ್ಟೆಯಲ್ಲ. ರೈತರ ಸಂಕಷ್ಟ, ಗ್ರಾಮೀಣ ಪ್ರದೇಶಗಳ ಮೂಲಸೌಕರ್ಯ ಕೊರತೆ, ನಿರುದ್ಯೋಗ, ಶಿಕ್ಷಣದ ಗುಣಮಟ್ಟ, ಇವುಗಳ ಮೇಲೆ ಗಮನ ಹರಿಸಿದರೆ ಮಾತ್ರ ರಾಜ್ಯದ ನಿಜವಾದ ಅಭಿವೃದ್ಧಿ ಸಾಧ್ಯ. ಆದರೆ ಜಾತಿ ರಾಜಕಾರಣ ಈ ಎಲ್ಲ ವಿಚಾರಗಳನ್ನು ಹಿನ್ನೆಲೆಗೆ ತಳ್ಳುತ್ತಿದೆ.

ಸರ್ಕಾರ ಮತ್ತು ರಾಜಕೀಯ ಪಕ್ಷಗಳು ಜಾತಿ ಸಮತೋಲನದ ಹೆಸರಿನಲ್ಲಿ ಸ್ಥಾನಮಾನ ಹಂಚಿಕೆಯಲ್ಲೇ ಮುಳುಗದೆ, ಅರ್ಹತೆ ಮತ್ತು ಸೇವಾಭಾವನೆಗೆ ಆದ್ಯತೆ ನೀಡಬೇಕು. ಜನತೆಯೂ ಸಹ ಜಾತಿಯ ಆಧಾರದ ಮೇಲೆ ಮತ ಹಾಕುವ ಮನೋಭಾವವನ್ನು ಬಿಟ್ಟು, ಕಾರ್ಯಕ್ಷಮತೆ ಮತ್ತು ನೈತಿಕತೆಗೆ ಮೌಲ್ಯ ನೀಡುವ ಕಾಲ ಬಂದಿದೆ.

ಮಾಧ್ಯಮಗಳ ಪಾತ್ರವೂ ಇಲ್ಲಿ ಮಹತ್ವದ್ದು. ಜಾತಿ ಉಗ್ರತೆಯನ್ನು ಉತ್ತೇಜಿಸುವ ಸುದ್ದಿಗಳಿಗಿಂತ, ಅಭಿವೃದ್ಧಿ ಕೇಂದ್ರೀತ ಚರ್ಚೆಗಳಿಗೆ ವೇದಿಕೆ ನೀಡಬೇಕು. ಸಮಾಜ ಸುಧಾರಕರು, ಶಿಕ್ಷಕರು ಮತ್ತು ಬುದ್ಧಿಜೀವಿಗಳು ಒಗ್ಗಟ್ಟಿನ ಸಂದೇಶವನ್ನು ಬಲವಾಗಿ ಸಾರಬೇಕು. ರಾಜ್ಯವು ನಿಜವಾದ ಪ್ರಗತಿಯತ್ತ ಸಾಗಬೇಕಾದರೆ ಜಾತಿ ರಾಜಕಾರಣಕ್ಕೆ ತೆರೆ ಬೀಳಬೇಕು. ಸಮಾನತೆ, ಸಹೋದರತ್ವ ಮತ್ತು ನ್ಯಾಯ ಎಂಬ ಸಂವಿಧಾನದ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡಾಗ ಮಾತ್ರ ಶಾಂತ, ಶಕ್ತಿಶಾಲಿ ಸಮಾಜ ನಿರ್ಮಾಣ ಸಾಧ್ಯ. ಜಾತಿಯಲ್ಲ, ಸಾಮರ್ಥ್ಯವೇ ಗುರುತು ಆಗಲಿ-ಅದೇ ರಾಜ್ಯದ ಭವಿಷ್ಯಕ್ಕೆ ಬೆಳಕು ನೀಡುವ ದಾರಿ.

### ಜಯಂತಿ ಯಶಸ್ವಿಗೆ ಸಕಲ ಸಹಕಾರ ನೀಡಲು ಸದಾ ಸಿದ್ಧ

# ಶಿವಾಜಿ ಜಯಂತಿ :ಸಚಿವ ಖಂಡ್ರೆಗೆ ಆಮಂತ್ರಣ



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:

ಭಾಲ್ಕಿಯ ಸಚಿವರ ಗೃಹ ಕಛೇರಿಯಲ್ಲಿ ಫೆ.19 ರಂದು ಆಚರಿಸಲ್ಪಡುವ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಉದ್ಘಾಟನೆಗೆ ಆಗಮಿಸುವಂತೆ ಸಚಿವ ಈಶ್ವರ ಖಂಡ್ರೆ ಅವರಿಗೆ ಶಿವ ಜಯಂತಿ ಉತ್ಸವ ಸಮಿತಿಯ ಅಧ್ಯಕ್ಷ ಡಾ.ಗುಂಡೇರಾವ ಶೆಡೋಳೆ ನೇತೃತ್ವದಲ್ಲಿ ಆಮಂತ್ರಣ ಪತ್ರಿಕೆ ನೀಡಿ ಗೌರವಿಸಲಾಯಿತು.

ಪ್ರತಿ ವರ್ಷದಂತೆ ಈ ವರ್ಷವು ಮುಂಜಾನೆ ಭಾಲ್ಕೇಶ್ವರ ಮಂದಿರದಿಂದ ಶಿವಾಜಿ ಮಹಾರಾಜರ ಭಾವಚಿತ್ರದ ಭವ್ಯ ಮೆರವಣಿಗೆ ಆರಂಭಗೊಂಡು ಪ್ರಮುಖ ವೃತ್ತಗಳ ಮೂಲಕ ರೇಲ್ವೆ ಗೇಟ್ ಹತ್ತಿರವಿರುವ ಶಿವಾಜಿ ಚೌಕ್‌ನಲ್ಲಿ ಸಮಾವೇಶಗೊಳ್ಳುವುದು. ಸಾಯಂಕಾಲ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ ಎಂದು ಸಮಿತಿಯವರು ತಿಳಿಸಿದರು.

ಬಳಿಕ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ , ಛತ್ರಪತಿ ಶಿವಾಜಿ ಮಹಾರಾಜರ ಆದರ್ಶ ತತ್ವಸಿದ್ಧಾಂತಗಳು ಇಂದಿನ ಯುವ ಪೀಳಿಗೆಗೆ ತಿಳಿಸುವುದು ಅಗತ್ಯವಾಗಿದೆ. ಅರ್ಥಪೂರ್ಣವಾಗಿ ಶಿವಾಜಿ ಮಹಾರಾಜರ ಜಯಂತಿ ಆಚರಿಸಲು ಸಕಲ ಸಹಕಾರ ನೀಡಲು ಸದಾ ಸಿದ್ಧನಿದ್ದೇನೆ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಸಂಸದ ಸಾಗರ ಖಂಡ್ರೆ ಮತ್ತು ಮಾಜಿ ಶಾಸಕ ಪ್ರಕಾಶ ಖಂಡ್ರೆಗೂ ಆಮಂತ್ರಣ ಪತ್ರಿಕೆ ನೀಡಿ ಆವ್ಹಾನಿಸಲಾಯಿತು. ಈ ಸಂದರ್ಭದಲ್ಲಿ ಮುಖಂಡ ಜನಾರ್ಧನರಾವ ಬಿರಾದಾರ ,ಸಮಿತಿ ಉಪಾಧ್ಯಕ್ಷ ರಾಹುಲ ಸಾವಳೆ ಸೇರಿದಂತೆ ಶಿವಾಜಿ ಅಭಿಮಾನಿ ಬಳಗದವರು ಉಪಸ್ಥಿತರಿದ್ದರು.

# 18 ವರ್ಷದ ಮಕ್ಕಳು ಯಾವುದೇ ಕ್ಷೇತ್ರದಲ್ಲಿ ಕೆಲಸ ಮಾಡಬಾರದು: ನ್ಯಾ.ಬನಸೋಡೆ



• ಮಲ್ಲಮ್ಮ ನುಡಿ ವಾರ್ತೆ ಬೀದರ:

ಹದಿನೆಂಟು ವರ್ಷದ ಮಕ್ಕಳು ಯಾವುದೇ ಕ್ಷೇತ್ರದಲ್ಲಿ ಕೆಲಸ ಮಾಡಬಾರದೆಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರಕಾಶ ಅರ್ಜುನ ಬನಸೋಡೆ ತಿಳಿಸಿದರು. ಅವರು ಸೋಮವಾರ ನಗರದ ನೌಬಾದನ ಶಾರಧಾ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡಿದ್ದ ಬಾಲ ಕಾರ್ಮಿಕ ಪದ್ದತಿ ನಿರ್ಮೂಲನೆ ಹಾಗೂ ಜೀತ ಕಾರ್ಮಿಕ ಪದ್ದತಿ ನಿರ್ಮೂಲನೆ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪಾಲಕರು ತಮ್ಮ ಮಕ್ಕಳನ್ನು ಕೆಲಸಕ್ಕೆ ಕಳಿಸದೆ ಶಾಲೆಗೆ ಕಳುಹಿಸಬೇಕು. ತಮಗೆ ಯಾವುದೇ ಮಗು ಕೆಲಸ ಮಾಡುವುದು ಕಂಡುಬಂದಲ್ಲಿ 1098ಕ್ಕೆ ಕರೆ ಮಾಡಿ ತಿಳಿಸಬೇಕೆಂದರು. ಬೀದರ ಜಿಲ್ಲಾ ಕಾರ್ಮಿಕ ಅಧಿಕಾರಿ ಮಹೇಶ ಲಕ್ಷ್ಮಣ ಕುಳಲಿ ಮಾತನಾಡಿ, ಬಾಲ ಕಾರ್ಮಿಕ ಪದ್ದತಿ ಹಾಗೂ ಜೀತ ಕಾರ್ಮಿಕ ಪದ್ದತಿ ಇದೊಂದು ಅನಿಷ್ಠ ಪದ್ದತಿಯಾಗಿದ್ದು ಇವರ ನಿರ್ಮೂನೆಗಾಗಿ ಎಲ್ಲರು ಕೈಜೋಡಿಸಬೇಗಾಗಿ ಕರೆ ನಿಡೀದರು.

ಬೀದರ ವಕೀಲ ಶಿವಶರಣಪ್ಪ ಪಾಟೀಲ್ ಅವರು ತಮ್ಮ ಉಪನ್ಯಾಸ ನುಡಿಯಲ್ಲಿ ಬಾಲ ಕಾರ್ಮಿಕ ಪದ್ದತಿ ಹಾಗೂ ಜಿತ ಕಾರ್ಮಿಕ ಪದ್ದತಿ ನಿರ್ಮೂಲನೆ ಮಾಡುವದರ ಜೋತೆಗೆ ಪರಿಸರ ರಕ್ಷಣೆ ಬಗ್ಗೆ "ಪರಿಸರ ರಕ್ಷಣೆ ನಮ್ಮ ನಿಮ್ಮೆಲ್ಲ ಹೋಣೆ" ಎಂದು ತಿಳಿಸಿದರು.

ಬೀದರನ ಶಾರಧಾ ಪ್ರೌಢಶಾಲೆಯ ಮುಖ್ಯಗುರುಗಳು ಅನಿತಾ ಬೀರಾದರ ಮಾತನಾಡಿ, ನ್ಯಾಯಧೀಶರ ಹಾಗೂ ಎಲ್ಲಾಗಣ್ಯವ್ಯಕ್ತೀಗಳ ಹಿತನೂಡಿಯನ್ನು ಮಕ್ಕಳು ಪಾಲಿಸಿಕೊಂಡು ತಮ್ಮ ಜಿವನದಲ್ಲಿ ಒಳ್ಳೆವ್ಯಕ್ತೀಗಳಾಗಲು ಸಹಕರಿಯಾಗುವದೆಂದು ತಿಳಿಸಿದರು. ಕಾರ್ಯಕ್ರಮಕ್ಕೂ ಮುಂಚಿತವಾಗಿ ಜಿಲ್ಲಾ ಪ್ರಧಾನ ಸತ್ರ ನ್ಯಾಯಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯರ್ಕ್ಷರು ಹಾಗೂ ಹಿರಿಯ ಸಿವಿಲ್ ನ್ಯಾಯಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರಕಾಶ ಅರ್ಜುನ ಬನಸೋಡೆ ಅವರುಗಳು ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಪದ್ದತಿ ನಿರ್ಮೂಲನೆ ಕುರಿತು, ಹಾಗೂ ಜೀತ ಪದ್ಧತಿ ನಿರ್ಮೂಲನೆ ಕುರಿತು ಆಟೋ ಪ್ರಚಾರ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಬೀದರ ವಕೀಲರ ಸಂಘ, ಜಿಲ್ಲಾ ಕಾರ್ಮಿಕ ಅಧಿಕಾರಿಗಳು, ಯೋಜನಾ ನಿರ್ದೇಶಕರು ಬಾಲ ಕಾರ್ಮಿಕ ಯೋಜನೆ, ಕಾರ್ಮಿಕ ಇಲಾಖೆ ಸಿಬ್ಬಂದಿಗಳು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಬ್ದುಲ ಹಫೀಜ, ವಿಧ್ಯಸಾಗರ ಎಲ್.ಎ.ಡಿ.ಸಿ ವಕೀಲರು, ಸಿಬ್ಬಂದಿಗಳು ಹಾಗೂ ಕಾರ್ಮಿಕ ಇಲಾಖೆ ಸಿಬ್ಬಂಧಿವರ್ಗದವರು ಮತ್ತು ಶಾಲಾ ಮಕ್ಕಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

### ಮಾಜಿ ಕೇಂದ್ರ ಸಚಿವ ಖೂಬಾ ವಿರೂದ್ಧ ವಾಗ್ದಾಳಿ ನಡೆಸಿದ ಮುಧೋಳ

# 10 ವರ್ಷಗಳಲ್ಲಿ ಭಗವಂತ ಖೂಬಾ ಸಾಧನೆ ಶುನ್ಯ: ಆರೋಪ

• ಮಲ್ಲಮ್ಮ ನುಡಿ ವಾರ್ತೆ ಬೀದರ:

10 ವರ್ಷಗಳ ಕಾಲ ಈ ಜಿಲ್ಲೆಯ ಲೋಕಸಭೆ ಸದಸ್ಯರಾಗಿ, ಕೇಂದ್ರ ಸಚಿವರಾಗಿ ಒಳ್ಳೆಯ ಅವಕಾಶ ಸಿಕ್ಕರೂ ಶುನ್ಯ ಸಾಧನೆ ಮಾಡಿದ್ದು, ಈಗ ಯುವಕರಾಗಿರುವ ಸಂಸದ ಸಾಗರ ಖಂಡ್ರೆ ಅವರ ಅಭಿವೃದ್ಧಿ ಕಾರ್ಯ ನೋಡಿ ಸಹಿಸಿಕೊಳ್ಳದೇ ಅವರನ್ನು ಏಕವಚನದಲ್ಲಿ ಸಂಬೋಧಿಸಿ ಮಾತನಾಡುವುದು ಖೂಬಾ ಅವರಿಗೆ ಶೋಭೆ ತಯರುವಂಥದಲ್ಲ ಎಂದು ಕರ್ನಾಟಕ ರಕ್ಷಣಾ ವೇದಿಕೆ(ನಾರಾಯಣಗೌಡ ಬಣ) ಜಿಲ್ಲಾಧ್ಯಕ್ಷ ಸೋಮನಾಥ ಮುಧೋಳ ಆರೋಪಿಸಿದರು.

ಸೋಮವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ಮಾಜಿ ಕೇಂದ್ರ ಸಚಿವ ಭಗವಂತ ಖೂಬಾ ಅವರು, ಶನಿವಾರ ಸಂಸದ ಸಾಗರ ಖಂಡ್ರೆ ಅವರು ಸುಕ್ಷೇತ್ರ ಪಾಪನಶ ದೇವಸ್ಥಾನದ ಅಭಿವೃದ್ಧಿ ಕಾಮಗಾರಿಯ ಚಾಲನೆ ನೀಡುವ ಕಾರ್ಯಕ್ರಮ ಇಟ್ಟುಕೊಂಡಾಗ ಮಾಜಿ ಕೇಂದ್ರ ಸಚಿವ ಖೂಬಾ ಹಾಗೂ ಬಿಜೆಪಿಯ ಶಾಸಕರು ಹಾಗೂ ಕಾರ್ಯಕರ್ತರು ಸೇರಿಕೊಂಡು ಹೋರಾಟ ಮಾಡಿರುವುದು ಒಳ್ಳೆಯ ಬೆಳವಣಿಗೆ ಅಲ್ಲ. ಅಂದೆ ತರಾತುರಿಯಲ್ಲಿ ಪೂಜೆ ಮಾಡುವುದಾಗಿ, ಅಭಿಷಕ ಮಾಡುವ ನೆಪದಲ್ಲಿ ಹೋರಾಟ ಮಾಡುವುದು ಎಷ್ಟರ ಮಟ್ಟಿಗೆ ಸರಿ? ಎಂದು ಮುಧೋಳ ಪ್ರಶ್ನೆ ಮಾಡಿದರು.

ಈಜಿಲ್ಲೆಯಲ್ಲಿ 15 ರೈಲ್ವೆ ನಿಲ್ದಾಣಗಳಿವೆ. ಬೀದರ್ ಹೊರತುಪಡಿಸಿ ಬೇರಾವ ರೈಲ್ವೆ ನಿಲ್ದಾಣಗಳು ಇವರ ಕಾಲದಲ್ಲಿ ಅಭಿವೃದ್ಧಿ ಆಗಲಿಲ್ಲ. ಅವರ ಜನ್ಮಕ್ಷೇತ್ರ ಕಮಲನಗರ ಏಕೈಕ ರೈಲ್ವೆ ನಿಲ್ದಾಣವಾಗಿದ್ದು, ಇವರಿಗೆ ಒಬ್ಬ ಕೇಂದ್ರ ಮಂತ್ರಿಯಾಗಿ ಶಿರಡಿ ಸೇರಿದಂತೆ ಯಾವ ಎಕ್ಸಪ್ರೆಸ್ ರೈಲುಗಳು ನಿಲುಗಡೆ ಮಾಡಲು ಸಾಧ್ಯವಾಗಿಲ್ಲ. ಅಮರೇಶ್ವರ ದೇವಸ್ಥಾನಕ್ಕೆ ಇವರಿಂದ ಒಂದು ನಯಾ ಪೈಸೆ ಕೊಡಲು ಆಗದಿದ್ದಾಗ ಹಾಲಿ ಸಂಸದ ಸಾಗರ ಖಂಡ್ರೆ ಒಂದು ಕೋಟಿ ಅಮರೇಶ್ವರ ಕಲ್ಯಾಣ ಮಂಟಪ ನಿರ್ಮಾಣಕ್ಕೆ ಅನುದಾನ ಒದಗಿಸಿದ್ದಾರೆ. ಇದನ್ನು ಖೂಬಾ ಅರಿತುಕೊಳ್ಳಲಿ ಎಂದರು.

ಬೀದರ್ ರೈಲ್ವೆ ನಿಲ್ದಾಣದಲ್ಲಿ ಕೇವಲ ಒಂದು ರೈಲ್ವೆ ಪೋಲಿಸ್ ಠಾಣೆ ಇದ್ದರೂ ಅದನ್ನು ಒಳಗಡೆ ತರಲು ಇವರಿಂದ ಆಗಲಿಲ್ಲ, ಪಿಟಲೈನ್ ಕಾಮಗಾರಿ ಪೂರ್ಣಗೊಂಡಿಲ್ಲ, ರೈಲ್ವೆ ಪೋಲಿಸರ ವಸತಿ ಗೃಹಗಳ ಕಾಮಗಾರಿ ಮುಗಿಯಲಿಲ್ಲ, ಕಮಲನಗರ ರೈಲ್ವೆ ನಿಲ್ದಾಣಕ್ಕೆ ಹೋಗಲು ರಸ್ತೆ ಮಾಡಲಿಕ್ಕಾಗಲಿಲ್ಲ, ಭಾಲ್ಕಿ ಹಾಗೂ ಕಮಲನಗರಗಳಲ್ಲಿ ರೈಲ್ವೆ ಪೋಲಿಸ್ ಠಾಣೆ ಸ್ಥಾಪಿಸಲು ಆಗಲಿಲ್ಲ, ಸಿಪೆಟ್ ಕಾಮಗಾರಿ ಪೂರ್ಣಗೊಂಡಿಲ್ಲ, ಬಾಂಬೆ, ದೆಹಲಿ ಹಾಗೂ ಪುಣೆ ಇತ್ಯಾದಿ ದೂರದ ಊರುಗಳಿಗೆ ಹೊಸ ರೈಲ್ವೆ ಪ್ರಾರಂಭಿಸಲು ಸಾಧ್ಯವಾಗಿಲ್ಲ, ತಾವು ಕೇಂದ್ರ ಸಚಿವರಿದ್ದಾಗಲೇ ನಾಗರಿಕ ವಿಮಾನಯಾನ ಸ್ಥಗಿ-ತಗೊಂಡಿತ್ತು. ಆದರೆ ಅಸನ್ನು ಪುನಃ ಪ್ರಾರಂಭಿಸಲು ಸಾಧ್ಯವಾಗಿಲ್ಲ;, ಸೋಲಾಪುರ-ಬೀದರ್ ಇಂಟರಸಿಟಿ ರೈಲ್ವೆ ಸ್ಥಾಪಿಸಲು ಸಾಧ್ಯವಾಗಿಲ್ಲ. ಬೀದರ್‌ನಿಂದ ಕಾಶಿಯಾತ್ರೆಗೆ ಹೊರಡಲು ಬೀದರ್-ವಾರಣಾಸಿ ಎಕ್ಸಪ್ರೆಸ್ ರೈಲು ಆರಮಭಿಸದೇ ಇರುವುದು ವಿಪರ್ಯಾಸ. ಒಟ್ಟಾರೆ ಹತ್ತು ವರ್ಷಗಳಲ್ಲಿ ತಾವು ಯಾವ ಕಾರ್ಯ ಪೂರ್ಣಗೊಳಿಸಿದ್ದಿರಿ ಎಂಬುದನ್ನು ಜನರಿಗೆ ಮನವರಿಕೆ ಮಾಡಿಕೊಡಿ. ಆಮೇಲೆ ಸಾಗರ ಖಂಡ್ರೆ ಅವರ ಅಭಿವೃದ್ಧಿ ಕಾಮಹಾರಿಗಳ ಬಗ್ಗೆ ಪ್ರಶ್ನೆ ಮಾಡಿ ಎಂದು ಮುಧೋಳ ಸವಾಲೆಸಿದರು.

ಸಮುಘಟಮನೆಯ ಜಿಲ್ಲಾ ಉಪಾಧ್ಯಕ್ಷರಾದ ಸೋಮಶೇಖರ ಸಜ್ಜನ್, ಮಲ್ಲಿಕಾರ್ಜುನ ಸಿಕೆನಪುರೆ, ಕೈಲಾಸ್ ಕೋಳೇಕರ್, ಬೀದರ್ ತಾಲೂಕಾಧ್ಯಕ್ಷ ವೀರಶೆಟ್ಟಿ ಗೌಸಪುರೆ, ಹುಮನಾಬಾದ್ ತಾಲೂಕಾಧ್ಯಕ್ಷ ವಿರೇಶ ರಡ್ಡಿ, ಮುಖಂಡರಾದ ಮಹೇಶ ಕಾಪಸೆನ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

# ಯುವ ಶಕ್ತಿಯಿಂದಲೇ ಬಲಿಷ್ಠ ಶಕ್ತಿಶಾಲಿ ರಾಷ್ಟ್ರ ನಿರ್ಮಾಣ ಚಂದ್ರಕಾಂತ ತಳವಾಡೆ




• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:

ರಾಷ್ಟ್ರದ ಭವಿಷ್ಯ ಯುವಕರ ಕೈಯಲ್ಲಿದ್ದು, ಸಂಸ್ಕಾರಯುತ ಹಾಗೂ ಜವಾಬ್ದಾರಿಯುತ ಯುವಜನಾಂಗವೇ ಶಕ್ತಿಶಾಲಿ ಭಾರತ ನಿರ್ಮಾಣಕ್ಕೆ ಕಾರಣವಾಗುತ್ತದೆ ಎಂದು ಹೇಳಿದರು.

ತಾಲೂಕಿನ ಮೊರಂಬಿ ಗ್ರಾಮದಲ್ಲಿ ನಡೆದ ಶ್ರೀ ನಂದಿ ಬಸವೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಆಯೋಜಿಸಲಾದ ಯುವ ಸಮಾವೇಶ ಮತ್ತು ರೈತ ಗೋಷ್ಠಿ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ರಾಷ್ಟ್ರ ನಿರ್ಮಾಣದಲ್ಲಿ ಯುವಕರ ಪಾತ್ರ ಅತ್ಯಂತ ಮಹತ್ವದ್ದಾಗಿದ್ದು, ಯುವಕರು ಸಂಸ್ಕಾರಯುತ ಬದುಕನ್ನು ಅಳವಡಿಸಿಕೊಂಡರೆ ಬಲಿಷ್ಠ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ ಎಂದು ಹೇಳಿದರು.

ಯುವಕರು ತಮ್ಮ ಶಕ್ತಿ, ಪ್ರತಿಭೆ ಮತ್ತು ಜವಾಬ್ದಾರಿಯನ್ನು ರಾಷ್ಟ್ರ ಹಾಗೂ ಸಮಾಜದ ಸೇವೆಗೆ ಸಮರ್ಪಿಸಬೇಕು. ಸಂಸ್ಕಾರ, ಶಿಸ್ತು, ಶ್ರದ್ಧೆ ಮತ್ತು ಸೇವಾಭಾವವೇ ಯುವಕರ ಬದುಕಿನ ಮೂಲ ಮೌಲ್ಯಗಳಾಗಬೇಕು ಎಂದು ಅವರು ತಿಳಿಸಿದರು. ಜೊತೆಗೆ ರೈತರು ದೇಶದ ಬೆನ್ನೆಲುಬಾಗಿದ್ದು, ರೈತರ ಶ್ರಮ ಮತ್ತು ತ್ಯಾಗವನ್ನು ಗೌರವಿಸುವ ಮನೋಭಾವ ಯುವ ಪೀಳಿಗೆಯಲ್ಲಿ ಬೆಳೆಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ದಿವ್ಯ ಸಾನಿಧ್ಯ ವಹಿಸಿದ್ದ ಪರಮ ಪೂಜ್ಯಶ್ರೀ ಶಾಂತವೀರ ಶಿವಾಚಾರ್ಯರು ಹಾಗೂ ಪೂಜ್ಯ ಶ್ರೀ ಲೋಕೇಶ ಗುರೂಜಿ ಆಶೀರ್ವಚನ ನೀಡಿ, ಸಂಸ್ಕಾರಯುತ ಯುವಜನಾಂಗವೇ ರಾಷ್ಟ್ರದ ಭವಿಷ್ಯ ಎಂದು ಹೇಳಿದರು.

ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿದ್ದ ಶ್ರೀ ಶಿವಾನಂದ ಮೇತ್ರೆ, ಹುಲಸೂರು ತಾಲೂಕಿನ ತಹಸೀಲ್ದಾರರು ಮಾತನಾಡಿ, ಯುವಕರು ಶಿಕ್ಷಣ, ಕೃಷಿ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಅಭಿವೃದ್ಧಿಯತ್ತ ಸಾಗಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಅನೇಕ ಗಣ್ಯ ನಾಗರಿಕರು, ಯುವಕರು, ರೈತರು, ಶ್ರದ್ಧೆಯ ತಂದೆ-ತಾಯಿಯಂದಿರು ಹಾಗೂ ಯುವ ಸಹೋದರಸಹೋದರಿಯರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.

# ವಕ್ಫ್ ಅಧ್ಯಕ್ಷರು ಮುಖ್ಯಮಂತ್ರಿ ಅವರನ್ನು ಭೇಟಿ: ಪ್ರಮುಖ ವಕ್ಫ್ ವಿಷಯಗಳ ಕುರಿತು ಚರ್ಚೆ



• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು:

ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅಧ್ಯಕ್ಷರಾದ ಡಾ. ಹಫೀಸ್ ಸಯ್ಯದ್ ಮುಹಮ್ಮದ್ ಅಲಿ ಅಲ್ ಹುಸೈನೀ ಅವರು, ಅಲ್ಪಸಂಖ್ಯಾತ ಕಲ್ಯಾಣ ಮತ್ತು ವಕ್ಫ್ ಸಚಿವರಾದ ಬಿ.ಜೆಡ್. ಜಮೀರ್ ಅಹಮದ್ ಖಾನ್ ಅವರೊಂದಿಗೆ ಬೆಂಗಳೂರಿನ ಅಧಿಕೃತ ನಿವಾಸದಲ್ಲಿ ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು.

ಈ ಭೇಟಿಯ ವೇಳೆ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಗೆ ಸಂಬಂಧಿಸಿದ ಹಾಗೂ ವಿಶೇಷವಾಗಿ ಬಜೆಟ್ ಅನುದಾನಗಳು, ಆರ್ಥಿಕ ಯೋಜನೆಗಳು ಹಾಗೂ ರಾಜ್ಯದ ವಕ್ಫ್ ಸಂಸ್ಥೆಗಳ ಆಡಳಿತಾತ್ಮಕ ವಿಚಾರಗಳ ಬಗ್ಗೆ ಚರ್ಚೆ ನಡೆಸಲಾಯಿತು. ಈ ಸಂದರ್ಭದಲ್ಲಿ ಮಾಜಿ ವಕ್ಫ್ ಮಂಡಳಿ ಅಧ್ಯಕ್ಷ ಅನ್ವರ್ ಬಾಷಾ, ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಸಯ್ಯದ್ ಅಕೀಬ್ ಹುಸೈನೀ ಸಾಹೇಬ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಸಂಘ ಸಂಸ್ಥೆಗಳಿಂದ ಅರ್ಜಿ ಆಹ್ವಾನ

ಯಾದಗಿರಿ: ಯಾದಗಿರಿ, ಗುರುಮಠಕಲ್ ತಾಲ್ಲೂಕುನಲ್ಲಿ 2025-26ನೇ ಸಾಲಿನ ವಿಚಾರಗೋಷ್ಠಿ ಮತ್ತು ಕಾರ್ಯಾಗಾರಗಳನ್ನು ನಡೆಸಲು ಸಂಘ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಯಾದಗಿರಿ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಗ್ರೇಡ್-1 ಬೇಬಿ ಉಲಸವಾರ್ ಅವರು ತಿಳಿಸಿದ್ದಾರೆ. ವಿಚಾರಗೋಷ್ಠಿ ಮತ್ತು ಕಾರ್ಯಾಗಾರಗಳನ್ನು ನಡೆಸಲು ಯಾದಗಿರಿ ತಾಲೂಕಿಗೆ ಮತ್ತು ಗುರುಮಠಕಲ್‌ಗೆ 1.50 ಲಕ್ಷ ರೂ.ಗಳ ಅನುದಾನವನ್ನು ಯಾದಗಿರಿ ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರು ನಿಗದಿಪಡಿಸಿರುತ್ತಾರೆ. ಇಚ್ಚೆಯುಳ್ಳ ವಿವಿಧ ಸಂಘ ಸಂಸ್ಥೆಗಳು ಯಾದಗಿರಿ ತಾಲೂಕ ಮತ್ತು ಗುರುಮಠಕಲ್‌ಗೆ ಸಂಬಂಧಪಟ್ಟಂತೆ ಗ್ರಾಮ ಮಟ್ಟದಲ್ಲಿ 20000 ರೂ.ಗಳ ಮಿತಿ ಒಳಗೆ ದೌರ್ಜನ್ಯ ನಿಯಂತ್ರಣ, ಅಸ್ಪೃಶ್ಯತೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಏರ್ಪಡಿಸಲು ಆಸಕ್ತ ಸಂಘಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಆಸಕ್ತರು 2026ರ ಫೆಬ್ರವರಿ 12ರ ಒಳಗೆ ಕಛೇರಿ ಸಮಯದಲ್ಲಿ ಯಾದಗಿರಿ ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಕಾರ್ಯಾಲಯಕ್ಕೆ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸುವ ಸಂಘ ಸಂಸ್ಥೆಗಳು ಈ ಕೆಳಕಂಡ ಷರತ್ತುಗಳು ಪೂರೈಸಬೇಕು.ಷರತ್ತುಗಳು : ಸಂಘ ಸಂಸ್ಥೆಗಳು ಯಾದಗಿರಿ ಮತ್ತು ಗುರುಮಠಕಲ್ ತಾಲೂಕಿಗೆ ಮಾತ್ರ ಸಂಬಂಧಪಟ್ಟಿರಬೇಕು, ಸಂಘ ಸಂಸ್ಥೆಗಳು ಕಳೆದ ಸಾಲಿನ ವಾರ್ಷಿಕ ಅಡಿಟ್ ಮಾಡಿಸಿರಬೇಕು, ಸಂಘ ಸಂಸ್ಥೆಗಳು 2024-25ನೇ ಸಾಲಿಗೆ ಸಹಕಾರ ಇಲಾಖೆಯಿಂದ ನವೀಕರಣ ಮಾಡಿಸಿರಬೇಕು, ಸಂಘ ಸಂಸ್ಥೆಗಳು ಈ ಮುಂಚೆ ಸರ್ಕಾರದಿಂದ ಆಯೋಜಿಸಿದ ಕಾರ್ಯಕ್ರಮಗಳನ್ನು ಮಾಡಿರುವ ಅನುಭವನ ಹೊಂದಿರಬೇಕು. ಒಂದಕ್ಕಿಂತ ಹೆಚ್ಚಿನ ಸಂಘ ಸಂಸ್ಥೆಗಳಿಂದ ಅರ್ಜಿಗಳು ಸಲ್ಲಿಸಕೆಯಾದಲ್ಲಿ ಅನುದಾನದ ಮಿತಿ ಒಳಗೆ ತಹಸೀಲ್ದಾರ ಅಧ್ಯಕ್ಷತೆಯಲ್ಲಿರುವ ಆಯ್ಕೆ ಸಮಿತಿಯಿಂದ ಲಾಟರಿ ಮುಖಾಂತರ ಆಯ್ಕೆ ಪ್ರಕ್ರಿಯೆಯನ್ನು ಮಾಡಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಉಚಿತ ಬಸ್ ಪಾಸ್ ನೀಡಲು ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ಬೀದರ:

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ಮಾಧ್ಯಮ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ತಾಲ್ಲೂಕು ಮಟ್ಟದ ಪತ್ರಕರ್ತರು ತಮ್ಮ ವೃತ್ತಿ ನಿರತ ಚಟುವಟಿಕೆಗಳ ಸಂಬಂಧ ತಮ್ಮ ಜಿಲ್ಲಾದ್ಯಂತ ಉಚಿತವಾಗಿ ಸಂಚರಿಸಲು ಅನುಕೂಲವಾಗುವಂತೆ ಉಚಿತ ಬಸ್ ಪಾಸ್ ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.ಪತ್ರಕರ್ತರು ತಾವು ಕಾರ್ಯನಿರ್ವಹಿಸುತ್ತಿರುವ ಮಾಧ್ಯಮ ಸಂಸ್ಥೆಗಳಿಂದ ಸೇವಾ ಪ್ರಮಾಣಪತ್ರ, ಶಿಫಾರಸ್ಸು ಪತ್ರ ಮತ್ತು 11 ತಿಂಗಳುಗಳ ವೇತನಪತ್ರ (ಲೈನೇಜ್/ಸಂಭಾವನೆ/ಕಮೀಷನ್ ಪಡೆದಿರುವ ದಾಖಲೆ)ಗಳನ್ನು ಅಥವಾ ವೇತನ ಜಮಾ ಆಗಿರುವ ಮಾಹಿತಿ ಇರುವಂತಹ ಬ್ಯಾಂಕ್ ಸ್ಟೇಟಮೆಂಟ್ ಲಗತ್ತಿಸಿ "ಸೇವಾಸಿಂಧು" ಪೋರ್ಟಲ್ (https://sevasindhu.karnataka.gov.in) ಮೂಲಕ ಆನ್ ಲೈನ್ ನಲ್ಲಿ ಅರ್ಜಿಗಳನ್ನು ಸಲ್ಲಿಸಬಹುದು.'ಆನಲೈನ್ ನಲ್ಲಿ ಸಲ್ಲಿಸಲಾದ ಅರ್ಜಿ ಮತ್ತು ಲಗತ್ತಿಸಲಾಗಿರುವ ದಾಖಲೆಗಳ ಒಂದು ಪ್ರತಿಯನ್ನು ಆಯಾ ಜಿಲ್ಲೆಯ ವಾರ್ತಾಧಿಕಾರಿಗಳ ಕಚೇರಿಗೆ ಸಲ್ಲಿಸಬೇಕು. ಸ್ವೀಕೃತ ಅರ್ಜಿಗಳನ್ನು ಆಯ್ಕೆ ಸಮಿತಿಯ ಸಭೆಯಲ್ಲಿ ಪರಿಶೀಲಿಸಿ ಬಸ್ ಪಾಸ್ ಮಂಜೂರು ಮಾಡಲಾಗುತ್ತದೆ.ರಾಜ್ಯದ ಎಲ್ಲ ತಾಲ್ಲೂಕುಗಳ ಅರ್ಹ ಪತ್ರಕರ್ತರು ಕೂಡಲೇ "ಸೇವಾಸಿಂಧು" ಪೋರ್ಟಲ್ ಮೂಲಕ ಅರ್ಜಿಗಳನ್ನು ಸಲ್ಲಿಸುವುದರ ಮೂಲಕ ಈ ಸದುಪಯೋಗ ಪಡೆದುಕೊಳ್ಳಬಹುದು ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾದ ಹೇಮಂತ್ ನಿಂಬಾಳ್ಕರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಗದಂಬಾ ಜಾತ್ರಾ ಮಹೋತ್ಸವ ಆರಂಭ , ಶಾಸಕ ಪ್ರಭು ಚವ್ಹಾಣ ಪೂಜೆ

• **ಮಲ್ಲಮ್ಮ ನುಡಿ ವಾರ್ತೆ ಔರಾದ(ಬಿ):**

ತಾಲ್ಲೂಕಿನ ಘಮಸುಬಾಯಿ ತಾಂಡಾ ಬೋಂತಿ ಗ್ರಾಮದಲ್ಲಿ ಇಚ್ಛಾಪೂರ್ತಿ ಮಾತಾ ಜಗದಂಬಾ ದೇವಿಯ ಜಾತ್ರಾ ಮಹೋತ್ಸವ ಫೆ.10 ರಂದು ಪೂಜೆ, ಅಭಿಷೇಕ, ಹೋಮ–ಹವನ ಹಾಗೂ ವಿವಿಧ ಯಜ್ಞ–ಯಾಗಾದಿಗಳೊಂದಿಗೆ ಆರಂಭಗೊಂಡಿತು.ಈ ಸಂದರ್ಭದಲ್ಲಿ ಮಾಜಿ ಸಚಿವರು ಹಾಗೂ ಔರಾದ(ಬಿ) ಕ್ಷೇತ್ರದ ಶಾಸಕರಾದ ಪ್ರಭು ಬಿ. ಚವ್ಹಾಣ ಅವರು ಕುಟುಂಬಸ್ಥರು, ಗ್ರಾಮಸ್ಥರು ಮತ್ತು ಭಕ್ತರೊಂದಿಗೆ ಜಾತ್ರೆಯಲ್ಲಿ ಭಾಗವಹಿಸಿ, ಇಚ್ಛಾಪೂರ್ತಿ ಮಾತಾ ಜಗದಂಬಾ ದೇವಿ, ಸಂತ ಸೇವಾಲಾಲ ಮಹಾರಾಜರು ಹಾಗೂ ಡಾ.ರಾಮರಾವ ಮಹಾರಾಜರ ದೇವಸ್ಥಾನಗಳಲ್ಲಿ ಭಕ್ತಿಪೂರ್ವಕವಾಗಿ ಪೂಜೆ ಸಲ್ಲಿಸಿದರು.

ಮಹಾಚಂಡಿಕಾ ಯಜ್ಞ, ಅಭಿಷೇಕ, ಹೋಮ–ಹವನ, ವಿಶೇಷ ಪೂಜೆಯಲ್ಲಿ ಭಾಗವಹಿಸಿದ ಶಾಸಕರು, ಕ್ಷೇತ್ರದಲ್ಲಿ ಉತ್ತಮ ಮಳೆ, ಸಮೃದ್ಧ ಬೆಳೆ, ಜನರಿಗೆ ಆರೋಗ್ಯ ಮತ್ತು ಐಶ್ವರ್ಯ ಕರುಣಿಸಲಿ ಎಂದು ಪ್ರಾರ್ಥಿಸಿದರು. ದೇವಸ್ಥಾನದಲ್ಲಿ ಬೆಳಗ್ಗೆಯಿಂದಲೇ ಧಾರ್ಮಿಕ ವಾತಾವರಣ ನಿರ್ಮಾಣಗೊಂಡಿದ್ದು, ಪೂಜೆ–ಕೀರ್ತನೆ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಸಂಜೆವರೆಗೆ ನಿರಂತರವಾಗಿ ನಡೆದವು. ವಿವಿಧೆಡೆಯಿಂದ ಭಕ್ತಾದಿಗಳು ಆಗಮಿಸಿ ದೇವಿಯ ಆಶೀರ್ವಾದ ಪಡೆದರು.



**ಇಂದು ಮಠಾಧೀಶರು, ಗಣ್ಯರ ಭೇಟಿ:** ಫೆ.11 ರಂದು ಬೆಳಗ್ಗೆ 10 ಗಂಟೆಗೆ ಮಂದಿರದ ಆವರಣದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ಬಂಜಾರಾ ಸಮಾಜದ ಧರ್ಮಗುರು, ಮಹಾರಾಷ್ಟ್ರದ ವಿಧಾನ ಪರಿಷತ್ ಸದಸ್ಯರಾದ ಪೂಜ್ಯ ಬಾಬುಸಿಂಗ್ ಮಹಾರಾಜ ಪೌರಾದೇವಿ, ಭಾಲ್ಕಿ ಹಿರೇಮಠ ಸಂಸ್ಥಾನದ ಪೂಜ್ಯ ಡಾ.ಬಸವಲಿಂಗ ಪಟ್ಟದೇವರು, ತಮಲೂರು ಮಠದ ಪೂಜ್ಯ ಶಿವಾನಂದ ಶಿವಾಚಾರ್ಯ ಮಹಾಸ್ವಾಮಿ, ಹೆಡಗಾಪೂರ ಮಠದ ಪೂಜ್ಯ ಶಿವಲಿಂಗೇಶ್ವರ ಶಿವಾಚಾರ್ಯರು, ಭಾಲ್ಕಿ ಹಿರೇಮಠದ ಪೂಜ್ಯ ಗುರುಬಸವ ಪಟ್ಟದೇವರು, ಠಾಣಾ ಕುಶನೂರು ಮಠದ ಪೂಜ್ಯ ಸಿದ್ದಲಿಂಗ ಮಹಾಸ್ವಾಮಿ, ಡೋಣಗಾಂವ ಮಠದ ಪೂಜ್ಯ ಶಂಭುಲಿಂಗ ಶಿವಾಚಾರ್ಯರು, ಗುಡಪಳ್ಳಿ ಮಠದ ಪೂಜ್ಯ ಚಂದ್ರಶೇಖರ ಶಿವಾಚಾರ್ಯರು, ರಕ್ಷ್ಯಾಳ(ಕೆ) ವಿವೇಕಾನಂದ ಆಶ್ರಮದ ಪೂಜ್ಯ ಮುರುಳಿ ಮಹಾರಾಜರು, ಧನ್ನೂರಿನ ಪೂಜ್ಯ ಗೋವಿಂದ ಮಹಾರಾಜರು ಸೇರಿದಂತೆ ವಿವಿಧ ಮಠಾಧೀಶರು, ಜನಪ್ರತಿನಿಧಿಗಳು, ಮುಖಂಡರು ಪಾಲ್ಗೊಳ್ಳುವರು.

**ಇಂದು ಜಾನಪದ ಸಂಭ್ರಮ:** ಜಾತ್ರಾ ಮಹೋತ್ಸವದ ನಿಮಿತ್ತ ಫೆ.11ರ ಬೆಳಗ್ಗೆ 8ರಿಂದ ಸಂಜೆ 5ರ ವರೆಗೆ 'ಜನಪದ ಸಂಭ್ರಮ' ನಡೆಯಲಿದ್ದು, ಜಿಲ್ಲೆ, ತಾಲ್ಲೂಕು ಹಾಗೂ ಕಲ್ಯಾಣ ಕರ್ನಾಟಕ ಭಾಗದ ವಿವಿಧ ಕಲಾವಿದರಿಂದ ಜಾನಪದ ಗಾಯನ, ನೃತ್ಯ, ಭಕ್ತಿಗೀತೆ, ಕೋಲಾಟ, ಭಜನೆ, ಕೀರ್ತನೆಯಂತಹ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ. ಸಂಜೆ 7 ಗಂಟೆಯಿಂದ ರಾತ್ರಿಯಿಡೀ ಬಂಜಾರಾ ಭಜನೆ ನಡೆಯಲಿದ್ದು, ಖ್ಯಾತ ಕಲಾವಿದರಾದ ಬಾಬುಲಾಲ ಮಹಾರಾಜ ಖಾಮಲವಾಡಿ, ಅನೀಲ ಮಹಾರಾಜ ಅಸೋಲಾ, ನರೇಂದ್ರ ಮಹಾರಾಜ ಲಿಂಗಾಪೂರ, ಗಣೇಶ ಮಹಾರಾಜ ಲೋಹಾ, ಉಜ್ವಲಾಬಾಯಿ ಜಾಲನಾ ಹಾಗೂ ಕಲಬುರಗಿಯ ಭೋಟಾ ಮಾರುತಿ ಮಹಾರಾಜರು ಆಗಮಿಸುವರು.

# ಟಿಕೆಟ್ ರಹಿತ ಪ್ರಯಾಣಿಕರಿಂದ ಒಟ್ಟು 12,80,323 ರೂ. ದಂಡ ವಸೂಲಿ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮವು ತನ್ನ ತನಿಖಾ ತಂಡಗಳಿಂದ 2025ರ ಆಗಸ್ಟ್ ದಿಂದ ಡಿಸೆಂಬರ್ ಮಾಹೆಯವರೆಗೆ ತಪಾಸಣಾ ಕಾರ್ಯವನ್ನು ಚುರುಕುಗೊಳಿಸಿ ನಿಗಮದ ವ್ಯಾಪ್ತಿಯಲ್ಲಿ ಸಂಚರಿಸುವ ಒಟ್ಟು 89,951 ವಾಹನಗಳನ್ನು ತನಿಖೆಗೊಳಪಡಿಸಿ 7,634 ಪ್ರಕರಣಗಳನ್ನು ಪತ್ತೆ ಹಚ್ಚಿ, ಒಟ್ಟು 5,920 ಟಿಕೇಟ್ ರಹಿತ ಪ್ರಯಾಣಿಕರಿಂದ ಒಟ್ಟು 12,80,323 ರೂ. ಗಳನ್ನು ದಂಡದ ರೂಪದಲ್ಲಿ ವಸೂಲಿ ಮಾಡಲಾಗಿದೆ.

ನಿಗಮದ ಆದಾಯದಲ್ಲಿ ಸೋರಿಕೆ ಆಗುತ್ತಿದ್ದ ಒಟ್ಟು 2,58,569 ರೂ. ಗಳನ್ನು ತನಿಖಾಧಿಕಾರಿಗಳು ಪತ್ತೆ ಹಚ್ಚಿದ್ದಾರೆ. ಸಾರ್ವಜನಿಕ ಪ್ರಯಾಣಿಕರು ಬಸ್‌ನಲ್ಲಿ ಪ್ರಯಾಣಿಸುವಾಗ ತಪ್ಪದೇ ಟಿಕೇಟ್/ ಪಾಸ್ ಪಡೆದು ಪ್ರಯಾಣಿಸಬೇಕೆಂದು ಕಲಬುರಗಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಮುಖ್ಯ ಸಂಚಾರ ವ್ಯವಸ್ಥಾಪಕರು ತಿಳಿಸಿದ್ದಾರೆ.

# ರಾಷ್ಟ್ರೀಯ ಜಂತುಹುಳು ನಿವಾರಣಾ ಕಾರ್ಯಕ್ರಮಕ್ಕೆ ಚಾಲನೆ



• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು**

ಜಂತುಹುಳು ಬಾಧೆಯಿಂದ ರಕ್ತಹೀನತೆ, ಅಪೌಷ್ಟಿಕತೆ ಉಂಟಾಗಿ ದೈಹಿಕ ಬೆಳವಣಿಗೆ ಕುಂಠಿತವಾಗುವುದರಿಂದ ಜಂತುಹುಳು ದೇಹಕ್ಕೆ ಪ್ರವೇಶವಾಗದಂತೆ ಎಚ್ಚರಿಕೆ ವಹಿಸುವುದು ಅಗತ್ಯ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ ಅವರು ಹೇಳಿದರು.

ಫೆ.10ರ ಮಂಗಳವಾರ ದಂದು ನಗರದ ಕೆ.ಇ.ಬಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತಾಲೂಕಾ ಆರೋಗ್ಯಾಧಿಕಾರಿಗಳ ಕಾರ್ಯಾಲಯ, ರಾಜಮಾನಗಡ್ಡಾ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಸಹಯೋಗದೊಂದಿಗೆ ನಡೆದ ರಾಷ್ಟ್ರೀಯ ಜಂತುಹುಳು ನಿವಾರಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಪ್ರತಿಯೊಬ್ಬರೂ ಆರೋಗ್ಯಯುತವಾಗಿದ್ದಲ್ಲಿ ಸದೃಢ ಸಮಾಜ ಕಾಣಲು ಸಾಧ್ಯ. ಆ ನಿಟ್ಟಿನಲ್ಲಿ ಶುಚಿತ್ವಕ್ಕೆ ಹೆಚ್ಚಿನ ಒತ್ತು ನೀಡಬೇಕಿದೆ. ಜಂತುಹುಳು ದೇಹಕ್ಕೆ ಪ್ರವೇಶಿಸುವುದರಿಂದ ಅನೇಕ ರೋಗಗಳಿಗೆ ತುತ್ತಾಗಬೇಕಾಗುತ್ತದೆ. ಆದ್ದರಿಂದ ಈ ಬಗ್ಗೆ ಎಚ್ಚರಿಕೆ ವಹಿಸಬೇಕಿದೆ. ಈ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ನಾನಾ ಇಲಾಖೆಗಳು ಕೈಜೋಡಿಸಬೇಕೆಂದರು. ರಕ್ತಹೀನತೆ ನಿಯಂತ್ರಣಕ್ಕಾಗಿ ಜಂತುಹುಳುಗಳ ನಿವಾರಣೆಗಾಗಿ ಆಲ್ಬೆಂಡೋಜೋಲ್ ಮಾತ್ರೆಗಳನ್ನು ಶಾಲಾ ಮಕ್ಕಳು, ಅಂಗನವಾಡಿ ಮಕ್ಕಳು ಸೇರಿದಂತೆ ಎಲ್ಲ ಮಕ್ಕಳಿಗೂ ತಪ್ಪದೆ ಚಿಪಿಸುವ ದಿಶೆಯಲ್ಲಿ ನಿಗಾವಹಿಸಬೇಕು ಎಂದರು. ಜಿಲ್ಲೆಯಾದ್ಯಂತ ಐದು ತಾಲೂಕಿನ 2,737

ಅಂಗನವಾಡಿ ಕೇಂದ್ರಗಳು, 2,448 ಶಾಲೆಗಳಲ್ಲಿ, ಕಾಲೇಜು, ತಾಂತ್ರಿಕ ವಿದ್ಯಾಲಯ ಸೇರಿದಂತೆ 1 ವರ್ಷದಿಂದ 19 ವರ್ಷದೊಳಗಿನ 7,33,702 ಮಕ್ಕಳಿಗೆ ಮಾತ್ರೆಗಳನ್ನು ಊಟ ಅಥವಾ ಉಪಹಾರ ಸೇವಿಸಿದ ನಂತರ ತಪ್ಪದೆ ಸೇವಿಸಲು ಆರೋಗ್ಯ ಇಲಾಖೆ ಹಾಗೂ ಮುಂಚೂಣಿ ಇಲಾಖೆಗಳಿಂದ ಜಾಗೃತಿಯನ್ನು ಮೂಡಿಸಲಾಗುತ್ತಿದ್ದು, ಮಾತ್ರೆಗಳನ್ನು ಪ್ರತಿ ಮಗುವು ಚಿಪಿಸಿ ನುಂಗಿಸಲು ಕ್ರಮವಹಿಸಿ ಮಕ್ಕಳಲ್ಲಿಯ ಜಂತುಹುಳು ನಿವಾರಣೆ ಮಾಡುವ ಮೂಲಕ ಜಿಲ್ಲೆಯ ಮಕ್ಕಳು ಆರೋಗ್ಯವಂತರಾಗಲು ಎಲ್ಲರೂ ಶ್ರಮಿಸಬೇಕು. ಅಲ್ಲದೆ ಸಮುದಾಯದಲ್ಲಿ ಜಂತಹುಳು ತಡೆಗೆ ಶೌಚಕ್ಕಾಗಿ ಶೌಚಾಲಯಗಳ ಬಳಕೆ, ಊಟದ ಮೊದಲು ಶೌಚದ ನಂತರ ಕೈಗಳನ್ನು ಸಾಬೂನು ಮತ್ತು ನೀರಿನಿಂದ ತೊಳೆಯುಲು, ನಡೆಯುವಾಗ ಪಾದರಕ್ಷೆ ಬಳಕೆ, ಶುದ್ಧ ನೀರು ಸೇವನೆ, ಹಣ್ಣು ತರಕಾರಿ ಸ್ವಚ್ಛವಾಗಿ ತೊಳೆದು ಬಳಸುವುದು ಪೌಷ್ಟಿಕ ಆಹಾರ ಸೇವಿಸುವುದು ಜಂತುಹುಳು ತಡೆಗೆ ಸಹಕಾರಿಯಾಗಿವೆ ಎಂಬುದನ್ನು ವ್ಯಾಪಕ ಪ್ರಚಾರ ಕೈಗೊಳ್ಳಲು ಸೂಚಿಸಿದರು.

ಇದಕ್ಕೂ ಮುಂಚೆ ಪ್ರಸ್ತಾವಿಕವಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸುರೇಂದ್ರ ಬಾಬು ಅವರು ಮಾತನಾಡಿ, ಜಿಲ್ಲೆಯ ಎಲ್ಲ ವೈದ್ಯಾಧಿಕಾರಿಗಳ ನಿಗಾವಣೆಯಲ್ಲಿ ಆರೋಗ್ಯ ಸಿಬ್ಬಂದಿಯವರು ಮಾತ್ರೆ ಚಿಪಿಸಿ ನುಂಗಿಸುವ ಕಾರ್ಯ ನಿರ್ವಹಿಸುತ್ತಿದ್ದು, ಗೈರುಹಾಜರಿ ಅಥವಾ ಅನಾರೋಗ್ಯದ ಕಾರಣದಿಂದಾಗಿ ಇಂದು ಯಾವುದಾದರೂ ಮಗು ಮಾತ್ರೆಯನ್ನು ತೆಗೆದುಕೊಳ್ಳು ಸಾಧ್ಯವಾಗದಿದ್ದಲ್ಲಿ ಅಂತ ಮಕ್ಕಳಿಗೆ ಫೆಬ್ರವರಿ 16 ರಂದು ಮಾಪ್ ಅಫ್ ದಿನದಂದು ಮಾತ್ರೆಗಳನ್ನು ಚಿಪಿಸಲಾಗುವುದು ಎಂದರು.

ಇದೇ ಸಂದರ್ಭದಲ್ಲಿ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಕೆ.ಡಿ ಬಡಿಗೇರ, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ನಂದಿತಾ ಎಂ.ಎನ್., ಜಿಲ್ಲಾ ಬಿಸಿ ಊಟದ ಅಧಿಕಾರಿ ಪ್ರಭು, ತಾಲೂಕಾರೋಗ್ಯಾಧಿಕಾರಿ ಡಾ.ಅಮೃತ್ ಹುಕ್ಕೇರಿ, ಪ್ರಭಾರಿ ಕ್ಷೇತ್ರ ಶಿಕ್ಷಣಾಧಿಕಾರಿ ಯುನಸ್ ಬಾಬು, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಅಮರೆಗೌಡ, ವೈದ್ಯಾಧಿಕಾರಿಗಳಾದ ಡಾ.ಅಶ್ವಾಕ್ ಹುಸೇನ್, ಡಾ.ಬುದ್ದಾನಂದ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ್ ದಾಸಪ್ಪನವರ, ಡಿವೈಡಿಹೆಚ್‌ಇಓ ಬಸಯ್ಯ, ಮುಖ್ಯೋಪಾಧ್ಯಾಯರಾದ ರಾಜಶೇಖರ್ ಪಾಟೀಲ್, ಡಿಪಿಎಮ್ ನವೀನ್ ಕುಮಾರ, ಆರ್‌ಕೆಎಸ್‌ಕೆ ಸಂಯೋಜಕರಾದ ಜ್ಯೋತಿ ಆಲೂರು, ಕಚೇರಿ ಅಧಿಕ್ಷಕ ವೆಂಕಟೇಶ್, ಹಿರಿಯ ಹೆಚ್‌ಐಓ ಸುರೇಶ್, ಬಿಹೆಚ್‌ಇಓ ಸರೋಜಾ ಕೆ, ಎಫ್‌ಡಿಎ ರಾಘವೇಂದ್ರ, ಸಿಬ್ಬಂದಿಯವರಾದ ಜಮೀಲ, ಅರುಣ್‌ಕುಮಾರ್, ವನೀತಾ, ಬಿಬ್ಲಿ ಬಾಚಯ್ಯ, ಸಿದ್ದಮ್ಮ, ಚಿರಂಜೀವಿ ಸೇರಿದಂತೆ ಶಾಲಾ ಶಿಕ್ಷಕರು, ಆಶಾ ಕಾರ್ಯಕರ್ತೆಯರು, ಶಾಲಾ ಮಕ್ಕಳು ಉಪಸ್ಥಿತರಿದ್ದರು.

# ಅಂತರ್ಜಾಲ ಬಳಕೆಯಲ್ಲಿ ಎಚ್ಚರಿಕೆಯಿರಲಿ : ಅಪರ ಜಿಲ್ಲಾಧಿಕಾರಿ.

• **ಮಲ್ಲಮ್ಮ ನುಡಿ ವಾರ್ತೆ ಕಾರವಾರ:**

ತಂತ್ರಜ್ಞಾನ ಯುಗದಲ್ಲಿ ಅಂತರ್ಜಾಲವನ್ನು ಎಚ್ಚರಿಕೆಯಿಂದ ಬಳಸಬೇಕು ಹಾಗೂ ಅನಾವಶ್ಯಕ ಲಿಂಕ್‌ಗಳನ್ನು ತೆರೆದು ವಂಚನೆಗೆ ಒಳಗಾಗಬಾರದು ಎಂದು ಅಪರ ಜಿಲ್ಲಾಧಿಕಾರಿ ಸಾಜೀದ್ ಮುಲ್ಲಾ ಹೇಳಿದರು. ಅವರು ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಪೊಲೀಸ್ ಇಲಾಖೆ ಹಾಗೂ ಮಾಹಿತಿ ತಂತ್ರಜ್ಞಾನ ಇಲಾಖೆ ಇವರ ಸಯೋಗದಲ್ಲಿ ನಡೆದ ವಿಶ್ವ ಸುರಕ್ಷಿತ ಅಂತರ್ಜಾಲ ದಿನದ ಕಾರ್ಯಾಗಾರದಲ್ಲಿ ಪಾಲ್ಗೊಂಡು ಮಾತನಾಡಿದರು. ಇತ್ತಿಚೀನ ದಿನಗಳಲ್ಲಿ ಪ್ರತಿಯೊಬ್ಬರು ಅಂತರ್ಜಾಲ ಬಳಸುತ್ತಿದ್ದು, ಪ್ರತಿಯೊಬ್ಬರ ಜೀವನದಲ್ಲಿ ಅಂತರ್ಜಾಲ ಅವಿಭಾಜ್ಯ ಅಂಗವಾಗಿದೆ. ಅಂತರ್ಜಾಲ ಬಳಕೆಯಿಂದ ಆಗುವ ಉಪಯೋಗದಕ್ಕಿಂತ ಅದರಿಂದ ಆಗುವ ಅನಾಹುತಗಳೇ ಹೆಚ್ಚಾಗಿವೆ. ಅಂತರ್ಜಾಲ ಬಳಕೆ ಹೆಚ್ಚಾದಂತೆ ಆನ್‌ಲೈನ್ ವಂಚನೆಗಳು ಹೆಚ್ಚಾಗಿದ್ದು, ಬಹುತೇಕ ವಿದ್ಯಾವಂತರೇ ಈ ವಂಚನೆಗಳಿಗೆ ಒಳಗಾಗುತ್ತಿದ್ದಾರೆ. ಎಐ ಯುಗದಲ್ಲಿ ಒಂದು ಚಿಕ್ಕ ವೈಯಕ್ತಿಕ ಮಾಹಿತಿಯು ಜೀವನದ ದಿಕ್ಕು ಬದಲಿಸಬಹುದಾಗಿದ್ದು, ತಂತ್ರಜ್ಞಾನವನ್ನು ಜ್ಞಾನ ವೃದ್ಧಿಗೆ ಬಳಸಬೇಕೆ ಹೊರತು ತಂತ್ರಜ್ಞಾನದ ಬಳಕೆಯಿಂದ ತೊಂದರೆಗೆ ಒಳಗಾಗಬಾರದು ಎಂದರು. ಸೈಬರ್ ಕ್ರೈಂ ವಿಭಾಗದ ಅಧಿಕಾರಿ ಸುದರ್ಶನ ಮಾತನಾಡಿ, ವಿದ್ಯಾವಂತರು ಹೆಚ್ಚಿನ ಸಂಖ್ಯೆಯಲ್ಲಿ ಈ ಸೈಬರ್ ವಂಚನೆಯ ಜಾಲಕ್ಕೆ ಒಳಗಾಗುತ್ತಿದ್ದು, ಸರಿಯಾದ ಜ್ಞಾನ–ತಿಳುವಳಿಕೆ ಇಲ್ಲದೇ ನಾವಾಗಿಯೇ ಅಂತರ್ಜಾಲ ಬಳಕೆ ವೇಳೆ ತಪ್ಪುಗಳನ್ನು ಮಾಡಿ ತೊಂದರೆಗೀಡಾಗುತ್ತೇವೆ. ಆನ್‌ಲೈನ್ ಹೂಡಿಕೆ, ಆಕರ್ಷಕ ಜಾಹೀರಾತುಗಳು ಸೇರಿದಂತೆ ಅನೇಕ ವಂಚನೆಗಳಿಗೆ ಒಳಗಾಗುವ ಯುವ ಜನತೆಗೆ ಪ್ರಾಥಮಿಕ ಮಾಹಿತಿ ಇಲ್ಲದೇ ಇರುವದೇ ಇದಕ್ಕೆ ಕಾರಣವಾಗಿದೆ. ಇ–ಮೇಲ್ ಹಾಗೂ ಮೊಬೈಲ್ ಸಂಖ್ಯೆಗೆ ಬರುವ ಅನವಶ್ಯಕ ಲಿಂಕ್ ಒತ್ತುವ ಮೂಲಕ ತಮ್ಮ ವೈಯಕ್ತಿಕ ಮಾಹಿತಿ ನೀಡುವುದರಿಂದ ವಂಚನೆಗಳು ಹೆಚ್ಚಾಗುತ್ತಿವೆ. ವೈಯಕ್ತಿಕ ಮಾಹಿತಿ, ಒಟಿಪಿ, ಬ್ಯಾಂಕ್ ವಿವರ ಮತ್ತಿತರ ಮಾಹಿತಿಯನ್ನು ಯಾರೊಂದಿಗೂ ಹಂಚಿಕೊಳ್ಳಬಾರದು ಎಂದರು. ಜಿಲ್ಲಾ ಮಾಹಿತಿ ಕೇಂದ್ರದ ಅಧಿಕಾರಿ ಸಾಗರ ಮಾತನಾಡಿ, ಪ್ರತಿ ವರ್ಷ ಫೆಬ್ರವರಿ ತಿಂಗಳ 2ನೇ ಮಂಗಳವಾರ ರಂದು ವಿಶ್ವ ಸುರಕ್ಷಿತ ಅಂತರ್ಜಾಲ ದಿನ ಆಚರಿಸಲಾಗುತ್ತಿದ್ದು, ಇಂಟರ್ನೆಟ್ ಮೂಲಕ ನಡೆಯುವ ಅಪರಾಧಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ಹಾಗೂ ಸುರಕ್ಷಿತ ಅಂತರ್ಜಾಲ ಬಳಕೆಯ ಬಗ್ಗೆ ಅರಿವು ಮೂಡಿಸಲು ಕಾರ್ಯಾಗಾರವನ್ನು ಆಯೋಜಿಸಲಾಗಿದೆ. ಸಾರ್ವಜನಿಕರು ಯಾವುದೇ ರೀತಿಯ ಸೈಬರ್ ವಂಚನೆಯಾದಲ್ಲಿ ಉಚಿತ ದೂರವಾಣಿ ಸಂಖ್ಯೆ 1930 ಸಂಪರ್ಕಿಸುವಂತೆ ತಿಳಿಸಿದರು.

# ಮಾರ್ಚ್ 1 ರಂದು ಶ್ರೀ ರೇಣುಕಾಚಾರ್ಯರ ಜಯಂತಿ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ಕಮಲಾಪುರ ತಾಲೂಕಿನ ರೇವಗ್ಗಿ (ರಟಕಲ್) ಶ್ರೀ ರೇವಣಸಿದ್ದೇಶ್ವರ ದೇವಸ್ಥಾನದಲ್ಲಿ ಮಾರ್ಚ್ 1 ರಂದು ರವಿವಾರ ಸಂಜೆ 5 ಗಂಟೆಗೆ ಜಗದ್ಗುರು ಶ್ರೀ ರೇಣುಕಾಚಾರ್ಯ ಜಯಂತ್ಯೋತ್ಸವ (ಭವ್ಯ ರಥೋತ್ಸವ) ಕಾರ್ಯಕ್ರಮವು ಅತೀ ವಿಜೃಂಭಣೆಯಿಂದ ಜರುಗಲಿದೆ ಎಂದು ರೇವಗ್ಗಿ (ರಟಕಲ್) ಶ್ರೀ ರೇವಣಸಿದ್ದೇಶ್ವರ ದೇವಸ್ಥಾನದ ಆಡಳಿತಾಧಿಕಾರಿಗಳು ತಿಳಿಸಿದ್ದಾರೆ.

ಫೆಬ್ರವರಿ 28 ರಂದು ರಾತ್ರಿ 9 ಗಂಟೆಯಿಂದ ಬೆಳಗಿನ ಜಾವದವರೆಗೆ ಆಕಾಶವಾಣಿ ಕಲಾವಿದರಿಂದ ಸಂಗೀತ ಭಜನೆ, ಮಾರ್ಚ್ 1 ರಂದು ರವಿವಾರ ಬೆಳಿಗ್ಗೆ ಅಮೃತಸಿದ್ಧಿಯೋಗದಲ್ಲಿ ಶ್ರೀ ರೇವಣಸಿದ್ದೇಶ್ವರ ದೇವರಿಗೆ ಮಹಾರುದ್ರಾಭಿಷೇಕ ಹಾಗೂ ಸಹಸ್ರಬಿಲ್ವಾರ್ಚನೆ ತದನಂತರ ಮಹಾ ಮಂಗಳಾರುತಿ, ಬೆಳಿಗ್ಗೆ 8 ಗಂಟೆಗೆ ದೀಕ್ಷಾ, ಕಳಸಾರೋಹಣ, ತೊಟ್ಟಿಲ ಕಾರ್ಯಕ್ರಮ, ನಂತರ ಮಹಾಪ್ರಸಾದ ಹಾಗೂ ಸಂಜೆ 5 ಗಂಟೆಗೆ ಭವ್ಯ ನಂದಿಕೋಲ ಮತ್ತು ಸಕಲ ವಾದ್ಯವೃಂದದೊಂದಿಗೆ "ಭವ್ಯ ರಥೋತ್ಸವ" ಕಾರ್ಯಕ್ರಮ ಜರುಗಲಿದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಅವರು ತಿಳಿಸಿದ್ದಾರೆ.

# ಫೆಬ್ರವರಿ 11 ರಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ವಿಭಾಗದಲ್ಲಿ ಬರುವ 11 ಕೆ.ವಿ. ಉಮರ್ ಕಾಲೋನಿ, ಸಪ್ನಾ ಬೇಕರಿ ಹಾಗೂ ರಾಮಮಂದಿರ ಫೀಡರ್ ವ್ಯಾಪ್ತಿಯಲ್ಲಿ ಜಿ.ಐ.ಎಸ್. ಸ್ಟೇಷನ್‌ನ ನಿರ್ವಹಣಾ ಕಾರ್ಯಕೈಗೊಳ್ಳುವ ಪ್ರಯುಕ್ತ ಫೆಬ್ರವರಿ 11 ರಂದು ಬುಧವಾರ ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ. ಸಾರ್ವಜನಿಕರು ಜೆಸ್ಕಾಂನೊಂದಿಗೆ ಸಹಕರಿಸುವಂತೆ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರರು(ವಿ) ಪ್ರಕಟಣೆಯಲ್ಲಿ ಕೋರಿದ್ದಾರೆ.

ಉಮರ್ ಕಾಲೋನಿ ಫೀಡರ್: ಉಮರ ಕಾಲೋನಿ, ಅಬುಬಕರ್ ಕಾಲೋನಿ, ಆಜಾದಪೂರ ರಸ್ತೆ, ಅಹಮದ ನಗರ್, ಮಕ್ಕಾ ಕಾಲೋನಿ, ಮಹಾರಾಜಾ ಹೋಟೆಲ್, ವಾಟರ್‌ಟ್ಯಾಂಕ್, ಯದ್ದುಲ್ಲಾ ಕಾಲೋನಿ, ಕಮಾಲ ಎ ಮುಜರತ್, ಮಹಬೂಬ ನಗರ, ವೀರಭದ್ರೇಶ್ವರ ದೇವಾಲಯ, ಖಾನ್ ಕಂಪೌಂಡ್, ಟಿಪ್ಪುಸುಲ್ತಾನ ಚೌಕ್, ಸನಾ ಹೋಟೆಲ್, ಅಕಬರ್ ಭಾಗ್, ರಾಮಜೀ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳು. ಸಪ್ನಾ ಬೇಕರಿ ಫೀಡರ್: ಜಮ್‌ಜಮ್ ಕಾಲೋನಿ, ಸಿಟಿ ಸ್ಕೂಲ್ ಏರಿಯಾ, ತಬೇಲಾ, ಮಡ್ ಏರಿಯಾ, ಸೋನಿಯಾ ಗಾಂಧಿ ಕಾಲೋನಿ, ಅಮಾನ್ ನಗರ, ಇತಿಹಾದ್ ಕಾಲೋನಿ, ರೆಹಮತ್ ನಗರ , ಗುಲಶನ್ ಅರಾಫತ್ ಕಾಲೋನಿ, ಅಬುಬಕರ ಕಾಲೋನಿ, ಸಹಾರಾ ಸ್ಕೂಲ್ ಕಾಲೋನಿ, ಗರಿಬ್ ನವಾಜ್ ಕಾಲೋನಿ ನವಾಬ ಮೊಹಲ್ಲಾ ಎಮ್ ಕೆ ನಗರ, ಆರೀಫಖಾನ್ ಲೇಔಟ್, ಸುಗಂಧಿ ಲೇಔಟ್, ಹಾಗರಗಾಕ್ರಾಸ್ ಏರಿಯಾ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ರಾಮನಗರ ಫೀಡರ್: ಆಜಾದಪೂರ ರೋಡ, ಜ್ಞಾನಗಂಗಾ ಕಾಲೋನಿ, ಸಿದ್ದೇಶ್ವರ ಕಾಲೋನಿ, ಹಮ್ಜಾ ಕಾಲೋನಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

# ಭಾರತವನ್ನು ಪ್ರೀತಿಸುವವರೆಲ್ಲ ಹಿಂದೂಗಳು : ದಿಲೀಪ ವರ್ಣೇಕರ




• **ಮಲ್ಲಮ್ಮ ನುಡಿ ವಾರ್ತೆ ಔರಾದ್ :**

ಭಾರತದಲ್ಲಿ ಹುಟ್ಟಿ ಭಾರತವನ್ನು ಪ್ರೀತಿಸುವ ಪ್ರತಿಯೊಬ್ಬರು ಸಹ ಹಿಂದೂಗಳೆ ಎಂದು ಸಾಮಾಜಿಕ ಕಾರ್ಯಕರ್ತ ದಿಲೀಪ ವರ್ಣೇಕರ ಬೆಳಗಾವಿ ಹೇಳಿದರು.

ಪಟ್ಟಣದ ಬಸವೇಶ್ವರ ವೃತ್ತದಲ್ಲಿ ನಡೆದ ಹಿಂದೂ ಸಮ್ಮೇಳನದಲ್ಲಿ ದಿಕ್ಸೂಚಿ ಭಾಷಣ ನೀಡಿದ ಅವರು ಭಾರತವು ಸಾವಿರಾರು ವರ್ಷಗಳ ಇತಿಹಾಸವಿರುವ, ವೇದಗಳು, ಉಪನಿಷತ್ತುಗಳು, ರಾಮಾಯಣ ಮತ್ತು ಮಹಾಭಾರತಗಳ ಭವ್ಯ ಪರಂಪರೆಯನ್ನು ಹೊಂದಿರುವ ಅನನ್ಯ ಸನಾತನ ಸಂಸ್ಕೃತಿಯ ದೇಶವಾಗಿದೆ. ಪ್ರೀತಿ, ಗೌರವ ಮತ್ತು ಶಾಂತಿಯುತ ಸಹಬಾಳ್ವೆಯನ್ನು ಪ್ರತಿಪಾದಿಸುವ, 'ವಸುಧೈವ ಕುಟುಂಬಕಂ' ಎಂಬ ತತ್ವಕ್ಕೆ ಬದ್ಧವಾಗಿದೆ. ನಮ್ಮ ಭಾರತವನ್ನು ಮತ್ತೆ ಪರಮ ವೈಭವ ಸ್ಥಿತಿಗೆ ಕರೆದೊಯ್ಯುವ ಜವಾಬ್ದಾರಿ ನಮ್ಮ ಮೇಲಿದೆ.

ಬ್ರಿಟಿಷರು ವ್ಯಾಪಾರಕ್ಕಾಗಿ ನಮ್ಮಲ್ಲಿ ಬಂದು ನಮ್ಮ ಏಕತೆಯನ್ನು ಒಡೆದು ದೇಶ ಆಳಿದರು, ನಮ್ಮಲ್ಲಿ ಯಾವುದೇ ಜಾತಿ ಇಲ್ಲ ಭಾರತದಲ್ಲಿ ಹುಟ್ಟಿದ ಪ್ರತಿಯೊಬ್ಬರೂ ಕೂಡ ಹಿಂದೂಗಳೆ ಕಾಯಕದಿಂದ ಜಾತಿಗಳು ಹುಟ್ಟಿಕೊಂಡಿದ್ದು, ವಿದೇಶರು ಜಾತಿಗಳ ಹೆಸರನ್ನು ಇಟ್ಟುಕೊಂಡು ಭಾರತವನ್ನು ಒಡೆದು ಆಳಿದರು, ಸ್ವಾಮಿ ವಿವೇಕಾನಂದರು ಛತ್ರಪತಿ ಶಿವಾಜಿ ಮಹಾರಾಜರು ಇಲ್ಲದೆ ಇದ್ದರೆ ನಾವೆಲ್ಲರೂ ಏನಾಗುತ್ತಿದೆಯೋ ಊಹಿಸಲು ಕೂಡ ಆಗದು. ಭಾರತ ಇಡೀ ವಿಶ್ವಕ್ಕೆ ಧರ್ಮವನ್ನು ಕಲಿಸಿಕೊಟ್ಟ ದೇಶ ನಮ್ಮಲ್ಲಿ ಮುಸ್ಲಿಂ ಕ್ರೈಸ್ತ ಎನ್ನುವ ಭೇದವಿಲ್ಲ ಭಾರತದಲ್ಲಿ ಹುಟ್ಟಿ ಭಾರತವನ್ನು ಪ್ರೀತಿಸುವವರನ್ನು ಪೂಜಿಸುವವರನ್ನು ನಾವು ಅಪ್ಪಿಕೊಳ್ಳುತ್ತೇವೆ ನಮ್ಮ ದೇಶದ ಸಂಸ್ಕೃತಿಯನ್ನು ಉಳಿಸುವ ಜೊತೆಗೆ ಪರಿಸರ ಸಂರಕ್ಷಣೆ, ಸ್ವದೇಶಿ ವಸ್ತುಗಳ ಬಳಕೆ ಮಾಡುವ ಮೂಲಕ ಶ್ರೇಷ್ಠ ಭಾರತವನ್ನು ಇನ್ನಷ್ಟು ಶ್ರೇಷ್ಠ ಮಾಡುವ ಕಾರ್ಯ ಪ್ರತಿಯೊಬ್ಬರ ಮಾಡೋಣ ಎಂದು ತಿಳಿಸಿದರು.

ಡೋಣಗಾಂವ ಹಾವಗಿ ಸ್ವಾಮಿ ಮಠದ ಪೂಜ್ಯರಾದ ಷ.ಬ್ರ 108 ಶ್ರೀ ಶಂಭುಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ ಭಾರತೀಯ ಸನಾತನ ಸಂಸ್ಕೃತಿಗೆ ಋಷಿಮುನಿಗಳು, ಸಾಧುಸಂತರು ಭದ್ರ ಬುನಾದಿ ಹಾಕಿದ್ದಾರೆ. ಭಾರತ ವೈವಿಧ್ಯತೆಯಲ್ಲಿ ಏಕತೆ ಹೊಂದಿರುವ ದೇಶ. ವಿಶ್ವದ ಯಾವುದೇ ದೇಶದಲ್ಲಿ ಇಂಥ ಏಕತೆ ಕಾಣಲು ಸಾಧ್ಯವಿಲ್ಲ. ಭಾರತೀಯ ಸನಾತನ ಪರಂಪರೆಯನ್ನು ಅಳಿಸಿ ಹಾಕಲು ಯಾರಿಂದಲೂ ಸಾಧ್ಯವಿಲ್ಲ ಎಂದು ಹೇಳಿದರು.

ಈ ಸಂಧರ್ಭದಲ್ಲಿ ಗುಡಪಳ್ಳಿ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಹೆಡಗಾಪೂರ ಭಾಪಾ ಮಹಾರಾಜ, ಸಮಿತಿ ಅಧ್ಯಕ್ಷ ಡಾ.ವೈಜಿನಾಥ ಬುಟ್ಟೆ, ಶಾಸಕ ಪ್ರಭು ಚವ್ಹಾಣ, ಮಾಜಿ ಶಾಸಕ ಗುಂಡಪ್ಪ ವಕೀಲ, ಶಿವರಾಜ ಅಲ್ಮಾಜೆ, ವಿಠ್ಠಲ ಕೋಳಿ, ಕಲ್ಲಪ್ಪ ದೇಶಮುಖ, ಅಮೃತರಾವ ಬಿರಾದಾರ, ಕಿರಣ ಉಪ್ಪೆ, ಬಸವರಾಜ ಹಳ್ಳೆ, ಅಶೋಕ ಶೆಂಬೆಳ್ಳಿ, ಆನಂದ ದ್ಯಾಡೆ, ಅಮರಸ್ವಾಮಿ ಸ್ಥಾವರಮಠ, ಬಸವ ಚೌಕಂಪಳ್ಳೆ, ಚಂದ್ರಕಾಂತ ಜೋಶಿ, ಕೇಶವ ಹಕ್ಕೆ, ಸಂದೀಪ ಪಾಟೀಲ ಸೇರಿದಂತೆ ಅನೇಕರಿದ್ದರು.

# ಪುರಸಭೆ ಕಾರ್ಯಾಲಯದಲ್ಲಿ ಕಾಯಕ ಶರಣರ ಜಯಂತಿ ಆಚರಣೆ

**ಮಲ್ಲಮ್ಮ ನುಡಿ ವಾರ್ತೆ: ಗುರುಮಠಕಲ್**

ಗುರುಮಠಕಲ್: ಪುರಸಭೆ ಕಾರ್ಯಾಲಯದಲ್ಲಿ ಮಂಗಳವಾರ ಕಾಯಕ ಶರಣರ ಜಯಂತಿ ಆಚರಣೆ ಮಾಡಲಾಯಿತು.



12ನೇ ಶತಮಾನದಲ್ಲಿ ಕಾಯಕ ತತ್ವಸಾರಿದ ಶರಣರಾದ ಮಾದಾರ ಚೆನ್ನಯ್ಯ, ಮಾದಾರ ಧೂಳಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ, ಉರಿಲಿಂಗಪೆದ್ದಿ ಯವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದ ಕಿರಿಯ ಆರೋಗ್ಯ ನಿರೀಕ್ಷಕ ಬಸ್ಸಪ್ಪ ಅವರ ತತ್ವಗಳನ್ನು ಜೀವನದಲ್ಲಿ ಅಳವಡಿಸಿ ಕೊಂಡಾಗ ಮಾತ್ರ ಅವರಿಗೆ ನಾವು ನಿಜವಾದ ಗೌರವ ನೀಡಿದ ಹಾಗೆ ಎಂದು ಹೇಳಿದರು. ಈ ಸಂದರ್ಭದಲ್ಲಿ ವ್ಯವಸ್ಥಾಪಕ ಮಲ್ಲಿಕಾರ್ಜುನ, ಕಿರಿಯ ಆರೋಗ್ಯ ನಿರೀಕ್ಷಕ ಅಶೋಕ್, ಮೇಲ್ವಿಚಾರಕ ಹನಮಂತು, ಸಲ್ಲವುದ್ದಿನ್, ರಾಕೇಶ್, ಮಲ್ಲಯ್ಯ, ಅಂಜಪ್ಪ ಹಾಗೂ ಸಿಬ್ಬಂದಿ ಹಾಜರಿದ್ದರು.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನೀಯರ್, ಕನೀನಿನಿ. ರವರ ಕಛೇರಿ,ಕೆ.ಪಿ.ಸಿ. ವಿಭಾಗ ನಂ–1 ಬೀದರ–585401
No.EE/KNNL/KPC/Dn-1/BDR/PB/TND/2025-26/1901 Dated:07.02.2026
:: "ಇ"ಪ್ರೊಕ್ಯೂರಮೆಂಟ್ ಅಲ್ಪಾವಧಿ ಟೆಂಡರ ಪ್ರಕಟಣೆ ಕರೆ–2 ::
No.EE/KNNL/KPC/Dn-1/BDR/PB/TND/2025-26/1782 Dated:23-01-2026
ವ್ಯವಸ್ಥಾಪಕ ನಿರ್ದೇಶಕರು ಕನೀನಿನಿ. ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕಾರಂಜಾ ಯೋಜನೆಯ 2701 ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಬರುವ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ "ಇ"ಪ್ರೊಕ್ಯೂರಮೆಂಟ್‌ನಲ್ಲಿ [illegible] ಏಕ-ಲಕೋಟೆಯ ಟೆಂಡರ ಕರೆಯಲಾಗಿದ್ದು, ವಿವರ ಈ ಕೆಳಗಿನಂತಿರುತ್ತವೆ. ಇಂಡೆಂಟ್ ಸಂ:3901/call-2 ಈ ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ ರೂ: 8,46,944.00 (ಎಂಟು ಲಕ್ಷದ ನಲವತ್ತಾರು ಸಾವಿರದ ಒಂಬತ್ತು ನೂರಾ ನಲವತ್ತ್ನಾಲ್ಕು ರೂಪಾಯಿ ಮತ್ತು ಸೊನ್ನೆ ಪೈಸೆ ಮಾತ್ರ ಇದ್ದು), ಇ.ಎಂ.ಡಿ. ಮೊತ್ತ ರೂ.21,500/- (ಇಪ್ಪತ್ತೊಂದು ಸಾವಿರದ ಐದ್ನೂರು ಮಾತ್ರ ಇದ್ದು ಕೆಲಸದ ಅವಧಿ ಮಳೆಗಾಲ ಸೇರಿ 1 ತಿಂಗಳು ಇರುತ್ತದೆ. 1)"ಇ"ಪ್ರೊಕ್ಯೂರಮೆಂಟ್‌ನಲ್ಲಿ https://kppp.karnataka.gov.in ಖಾಲಿ ಟೆಂಡರ ಫಾರ್ಮಗೆ ವಿನಂತಿ ಮತ್ತು ದಾಖಲೆಗಳನ್ನು ಡೌನಲೋಡ್ ಮಾಡಿಕೊಳ್ಳುವುದು ಮತ್ತು ಇ-ಪೋರ್ಟಲ್ ಮೂಲಕ ಭರ್ತಿ ಮಾಡಿ ಟೆಂಡರ ಸಲ್ಲಿಸುವ ದಿನಾಂಕ: 07-02-2026 ರಿಂದ 16-02-2026 ರ 16.15 ಘಂಟೆಯವರೆಗೆ. 2) ದಿನಾಂಕ:17-02-2026 ರಂದು 16.15 ಘಂಟೆಯ ನಂತರ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು.
ಸಹಿ/- ಕಾರ್ಯಪಾಲಕ ಅಭಿಯಂತರರು
ಕನೀನಿನಿ., ಕೆ.ಪಿ.ಸಿ.ವಿಭಾಗ ನಂ.1, ಬೀದರ.
ವಾ.ಸಾ.ಸಂ.ಇ/ಬೀದರ/327/ಕೆ.ಎಸ್.ಎಂ.ಸಿ.ಎ/2025-26

# ಫೆಬ್ರವರಿ 11 ರಂದು ಜೀತ ಪದ್ಧತಿ ರದ್ದತಿ ದಿನಾಚರಣೆ ಕಾರ್ಯಕ್ರಮ

**ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ಕಲಬುರಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕಾರ್ಮಿಕ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿವಿಧ ಇಲಾಖೆ ಇವುಗಳ ಸಂಯುಕ್ತಾಶ್ರಯದಲ್ಲಿ ಫೆಬ್ರವರಿ 11 ರಂದು ಬುಧವಾರ ಬೆಳಿಗ್ಗೆ 11.30 ಗಂಟೆಗೆ "ಜೀತ ಪದ್ಧತಿ ರದ್ದತಿ ದಿನಾಚರಣೆ" ಕಾರ್ಯಕ್ರಮವನ್ನು ಕಲಬುರಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಕಚೇರಿಯ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಲಬುರಗಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಶ್ರೀನಿವಾಸ ನವಲೆ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು. ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಅವರು ಕಾರ್ಯಕ್ರಮದ ಅಧ್ಯಕ್ಷತೆವವಹಿಸುವರು.

ಕಲಬುರಗಿ ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪಾ ಎಸ್.ಡಿ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸುಲು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭಂವರ್ ಸಿಂಗ್ ಮೀನಾ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ಕಾರ್ಯಕ್ರಮದಲ್ಲಿ ಕಲಬುರಗಿ ಪ್ರಾದೇಶಿಕ ಉಪ ಕಾರ್ಮಿಕ ಆಯುಕ್ತ ಡಾ. ವೆಂಕಟೇಶ ಎ. ಶಿಂದಿಹಟ್ಟಿ ಅವರು "ಜೀತ ಪದ್ಧತಿ (ನಿರ್ಮೂಲನಾ) ಅಧಿನಿಯಮ, 1976ರ ಕುರಿತು" ವಿಶೇಷ ಉಪನ್ಯಾಸ ನೀಡುವರು.

# ವಿಚಾರಗೋಷ್ಠಿ, ಕಾರ್ಯಾಗಾರ ನಡೆಸಲು ಸಂಘ ಸಂಸ್ಥೆಗಳಿಂದ ಅರ್ಜಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**

ಯಾದಗಿರಿ, ಗುರುಮಠಕಲ್ ತಾಲ್ಲೂಕುನಲ್ಲಿ 2025–26ನೇ ಸಾಲಿನ ವಿಚಾರಗೋಷ್ಠಿ ಮತ್ತು ಕಾರ್ಯಾಗಾರಗಳನ್ನು ನಡೆಸಲು ಸಂಘ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಯಾದಗಿರಿ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಗ್ರೇಡ್–1 ಬೇಬಿ ಉಲಸವಾರ್ ಅವರು ತಿಳಿಸಿದ್ದಾರೆ. ವಿಚಾರಗೋಷ್ಠಿ ಮತ್ತು ಕಾರ್ಯಾಗಾರಗಳನ್ನು ನಡೆಸಲು ಯಾದಗಿರಿ ತಾಲೂಕಿಗೆ ಮತ್ತು ಗುರುಮಠಕಲ್‌ಗೆ 1.50 ಲಕ್ಷ ರೂ.ಗಳ ಅನುದಾನವನ್ನು ಯಾದಗಿರಿ ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರು ನಿಗದಿಪಡಿಸಿರುತ್ತಾರೆ. ಇಚ್ಛೆಯುಳ್ಳ ವಿವಿಧ ಸಂಘ ಸಂಸ್ಥೆಗಳು ಯಾದಗಿರಿ ತಾಲೂಕ ಮತ್ತು ಗುರುಮಠಕಲ್‌ಗೆ ಸಂಬಂಧಪಟ್ಟಂತೆ ಗ್ರಾಮ ಮಟ್ಟದಲ್ಲಿ 20000 ರೂ.ಗಳ ಮಿತಿ ಒಳಗೆ ದೌರ್ಜನ್ಯ ನಿಯಂತ್ರಣ, ಅಸ್ಪೃಶ್ಯತೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಏರ್ಪಡಿಸಲು ಆಸಕ್ತ ಸಂಘಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಆಸಕ್ತರು 2026ರ ಫೆಬ್ರವರಿ 12ರ ಒಳಗೆ ಕಛೇರಿ ಸಮಯದಲ್ಲಿ ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಯಾದಗಿರಿ ಕಾರ್ಯಾಲಯಕ್ಕೆ ಅರ್ಜಿಸಲ್ಲಿಸಬೇಕು. ಅರ್ಜಿಸಲ್ಲಿಸುವ ಸಂಘ ಸಂಸ್ಥೆಗಳು ಈ ಕೆಳಕಂಡ ಷರತ್ತುಗಳು ಪೂರೈಸಬೇಕು. ಷರತ್ತುಗಳು :ಸಂಘ ಸಂಸ್ಥೆಗಳು ಯಾದಗಿರಿ ಮತ್ತು ಗುರುಮಠಕಲ್ ತಾಲೂಕಿಗೆ ಮಾತ್ರ ಸಂಬಂಧಪಟ್ಟಿರಬೇಕು, ಸಂಘ ಸಂಸ್ಥೆಗಳು ಕಳೆದ ಸಾಲಿನ ವಾರ್ಷಿಕ ಅಡಿಟ್ ಮಾಡಿಸಿರಬೇಕು, ಸಂಘ ಸಂಸ್ಥೆಗಳು 2024–25ನೇ ಸಾಲಿಗೆ ಸಹಕಾರ ಇಲಾಖೆಯಿಂದ ನವೀಕರಣ ಮಾಡಿಸಿರಬೇಕು, ಸಂಘ ಸಂಸ್ಥೆಗಳು ಈ ಮುಂಚೆ ಸರ್ಕಾರದಿಂದ ಆಯೋಜಿಸಿದ ಕಾರ್ಯಕ್ರಮಗಳನ್ನು ಮಾಡಿರುವ ಅನುಭವನ ಹೊಂದಿರಬೇಕು. ಒಂದಕ್ಕಿಂತ ಹೆಚ್ಚಿನ ಸಂಘ ಸಂಸ್ಥೆಗಳಿಂದ ಅರ್ಜಿಗಳು ಸಲ್ಲಿಸಕೆಯಾದಲ್ಲಿ ಅನುದಾನದ ಮಿತಿ ಒಳಗೆ ತಹಸೀಲ್ದಾರ ಅಧ್ಯಕ್ಷತೆಯಲ್ಲಿರುವ ಆಯ್ಕೆ ಸಮಿತಿಯಿಂದ ಲಾಟರಿ ಮುಖಾಂತರ ಆಯ್ಕೆ ಪ್ರಕ್ರಿಯೆಯನ್ನು ಮಾಡಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಷ್ಟ್ರೀಯ ಹುಳು ನಿವಾರಣಾ ದಿನದ ಜಾಗೃತಿ



• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**

ಡಾನ್ ಬೋಸ್ಕೋ ಸಮಾಜ ಸೇವ ಕೇಂದ್ರದ ವತಿಯಿಂದ ಫೆಬ್ರವರಿ 10, 2026 ರಂದು ಠಾಣಾಗುಂದಿ ಗ್ರಾಮದಲ್ಲಿ ರಾಷ್ಟ್ರೀಯ ಹುಳು ನಿವಾರಣಾ ದಿನದ ಅಂಗವಾಗಿ ಆರೋಗ್ಯ ಜಾಗೃತಿ ಹಾಗೂ ಪ್ರಾಥಮಿಕ ಆರೋಗ್ಯ ತಪಾಸಣೆ ಕಾರ್ಯಕ್ರಮವನ್ನು ಯಶಸ್ವಿಯಾಗಿ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮವನ್ನು ಡಾನ್ ಬೋಸ್ಕೋ ಸಮಾಜ ಸೇವ ಕೇಂದ್ರದ ನಿರ್ದೇಶಕರಾದ ಫಾದರ್ ಶಾಬು ಫ್ರಾನ್ಸಿಸ್ ಅವರ ನೇತೃತ್ವದಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಭಾಗವಾಗಿ ಡಾನ್ ಬೋಸ್ಕೋ ಮೊಬೈಲ್ ಕ್ಲಿನಿಕ್ ತಂಡವು ಗ್ರಾಮಸ್ಥರಿಗೆ ಹುಳು ಸೋಂಕಿನ ಕುರಿತು ಸಮಗ್ರ ಆರೋಗ್ಯ ಶಿಕ್ಷಣ ನೀಡಿತು. ಹುಳು ಸೋಂಕು ಮಕ್ಕಳ ದೈಹಿಕ ಮತ್ತು ಬೌದ್ಧಿಕ ಬೆಳವಣಿಗೆಗೆ ಹೇಗೆ ಅಡ್ಡಿಯಾಗುತ್ತದೆ, ಅದರ ಪರಿಣಾಮಗಳು ಹಾಗೂ ತಡೆಗಟ್ಟುವ ಕ್ರಮಗಳ ಬಗ್ಗೆ ವಿವರವಾಗಿ ಮಾಹಿತಿ ನೀಡಲಾಯಿತು. ಈ ಜಾಗೃತಿ ಕಾರ್ಯಕ್ರಮದಲ್ಲಿ ಒಟ್ಟು 41 ಜನರು ಭಾಗವಹಿಸಿದರು.

ಅದೇ ಸಂದರ್ಭದಲ್ಲಿ ಪ್ರಾಥಮಿಕ ಆರೋಗ್ಯ ತಪಾಸಣೆಯನ್ನೂ ನಡೆಸಲಾಗಿದ್ದು, ಒಟ್ಟು 54 ಜನರು ಆರೋಗ್ಯ ತಪಾಸಣೆಗೆ ಒಳಪಟ್ಟರು. ಇವರಲ್ಲಿ 41 ಪುರುಷರು ಹಾಗೂ 13 ಮಹಿಳೆಯರು ಇದ್ದರು. ತಪಾಸಣೆಯ ವೇಳೆ ರಕ್ತದೊತ್ತಡ, ರಕ್ತದ ಸಕ್ಕರೆ ಪ್ರಮಾಣ, ತೂಕ ಮತ್ತು ಸಾಮಾನ್ಯ ಆರೋಗ್ಯ ಸ್ಥಿತಿಯನ್ನು ಪರಿಶೀಲಿಸಲಾಯಿತು.

ಕಾರ್ಯಕ್ರಮವನ್ನು ಮೊಬೈಲ್ ಕ್ಲಿನಿಕ್ ತಂಡದ ಸಿಬ್ಬಂದಿಯಾದ ನರ್ಸ್ ಸಿದ್ದಮ್ಮ ಹಾಗೂ ಆರೋಗ್ಯ ಕಾರ್ಯಕರ್ತರಾದ ಮರೆಮ್ಮ ಮತ್ತು ಬಸವರಾಜ ಅವರು ಯಶಸ್ವಿಯಾಗಿ ನಡೆಸಿಕೊಟ್ಟರು. ಗ್ರಾಮಸ್ಥರು ಈ ಕಾರ್ಯಕ್ರಮಕ್ಕೆ ಉತ್ತಮ ಸ್ಪಂದನೆ ನೀಡಿದ್ದು, ಆರೋಗ್ಯ ಜಾಗೃತಿ ಕಾರ್ಯಕ್ರಮಗಳು ಗ್ರಾಮೀಣ ಪ್ರದೇಶಕ್ಕೆ ಅತ್ಯಂತ ಅಗತ್ಯವೆಂದು ಅಭಿಪ್ರಾಯ ವ್ಯಕ್ತಪಡಿಸಿದರು.ಈ ರೀತಿಯ ಆರೋಗ್ಯ ಜಾಗೃತಿ ಹಾಗೂ ತಪಾಸಣಾ ಕಾರ್ಯಕ್ರಮಗಳ ಮೂಲಕ ಗ್ರಾಮೀಣ ಜನರಲ್ಲಿ ಆರೋಗ್ಯ ಅರಿವು ಮೂಡಿಸಿ, ಮಕ್ಕಳ ಹಾಗೂ ಸಾರ್ವಜನಿಕರ ಆರೋಗ್ಯವನ್ನು ಸುಧಾರಿಸುವ ನಿಟ್ಟಿನಲ್ಲಿ ಡಾನ್ ಬೋಸ್ಕೋ ಸಮಾಜ ಸೇವ ಕೇಂದ್ರವು ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ.

# ವಿದ್ಯುತ್ ವ್ಯತ್ಯಯ 12ಕ್ಕೆ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ–1 ರ ವ್ಯಾಪ್ತಿಯ 220/11ಕೆವಿ ಅಲ್ಲಿಪುರ ವಿದ್ಯುತ್ ಉಪ–ಕೇಂದ್ರದಲ್ಲಿ 20ಎಂವಿಎ ಟ್ರಾನ್ಸಫಾರ್ಮರ್ ನ ನಿರ್ವಹಣಾ ಕಾರ್ಯ ಹಾಗೂ ಈ ಉಪಕೇಂದ್ರದಿಂದ ಸರಬರಾಜು ಆಗುವ ವಿದ್ಯುತ್ ಲೈನ್ ಗಳ ನಿರ್ವಹಣೆ ಕಾರ್ಯ ಕೈಗೊಳ್ಳುತ್ತಿರುವುದರಿಂದ ಫೆ.12 ರಂದು ಬೆಳಿಗ್ಗೆ 09 ರಿಂದ ಸಂಜೆ 06 ಗಂಟೆಯವರೆಗೆ ಬಳ್ಳಾರಿ ನಗರದ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

**ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳು:**

ಎಫ್–33 ರ ವ್ಯಾಪ್ತಿಯ ಕೆ.ಚ್.ಬಿ. ಕಾಲೋನಿ, ನೇತಾಜಿ ನಗರ, ಇನ್ನಾರೆಡ್ಡಿ ಲೇಔಟ್, ಇನ್‌ಫ್ಯಾಂಟ್ರ ರೋಡ್, ವಾಸವಿ ಸ್ಕೂಲ್, ಕೊಳಗಲ್ ರೋಡ್, ವಿದ್ಯಾನಗರ, ಕಲ್ಯಾಣಿ ಕಾಲೋನಿ, ಭತ್ರಿ ರೋಡ್, ಭತ್ರಿ, ಗುರು ಕಾಲೋನಿ, ಸತ್ಯವಾಣಿ ನಗರ, ಸಿದ್ದಾರ್ಥ ನಗರ, ವಿಯಾನಿ ಶಾಲೆ. ಎಫ್–34 ರ ವ್ಯಾಪ್ತಿಯ ಫಸ್ಟ್ ಗೇಟ್, ಕೊರಚ ಸ್ಟ್ರೀಟ್, ಉರ್ದು ಟ್ರೈನಿಂಗ್ ಸ್ಕೂಲ್, ಕಡಪಗೇರೆ, ಟೈಲರ್ ಸ್ಟ್ರೀಟ್, ವಡ್ಡೆ ನಾಗಪ್ಪ ಕಾಲೋನಿ, ತಿಲಕ್ ನಗರ, ವಿನಾಯಕ ನಗರ, ಐಶ್ವರ್ಯ ಕಾಲೋನಿ, ಐಟಿಐ ಕಾಲೇಜು, ರೇಡಿಯೋ ಪಾರ್ಕ್, ಕೌಲ್ ಬಜಾರ್ ಮೇನ್ ರೋಡ್. ಎಫ್–35 ವ್ಯಾಪ್ತಿಯ ಜಲ ಶುದ್ಧೀಕರಣ ಕೇಂದ್ರ.ಎಫ್–36 ವ್ಯಾಪ್ತಿಯ ಬಂಡಿಹಟ್ಟಿ, ಆಶ್ರಯ ಕಾಲೋನಿ, ಈದ್ಗ ರೋಡ್, ಟೀರ್ಸ್ ಕಾಲೋನಿ, ಜಾಗೃತಿ ನಗರ ಸರ್ಕಲ್, ಆಜಾದ್ ನಗರ. ಎಫ್–40 ವ್ಯಾಪ್ತಿಯ ಕುವೆಂಪು ನಗರ, ರಾಮಂಜನೇಯ ನಗರ, ಸಿ.ಎಮ್.ಸಿ ಕಾಲೋನಿ, ಎಕ್ಸ್ ಸರ್ವಿಸ್‌ಮೆನ್ ಕಾಲೋನಿ.ಎಫ್–72 ವ್ಯಾಪ್ತಿಯ ಕಾಂಟೋನ್ ಮೆಂಟ್, ಸೂರ್ಯ ಕಾಲೋನಿ, ತಿಲಕ್ ನಗರ, ಸುಧಾ ಕ್ರಾಸ್, ನಂದಿ ಕಾಲೋನಿ, ಹೆಚ್.ಆರ್.ಜಿ ಕಾಲೋನಿ, ಜಯನಗರ, ರಹಿಮಬಾದ್ ಕಾಲೋನಿ, ಸಾರ್ವಜನಿಕರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನವಚೇತನ ಟ್ರಸ್ಟ್ ಗೆಳೆಯರ ಬಳಗದ ರಕ್ತದಾನ ಕಾರ್ಯ ಶ್ಲಾಘನೀಯ: ಡಾ.ರಾಹುಲ್





• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**

ದಾನಗಳಲ್ಲಿಯೇ ರಕ್ತದಾನ ಅತ್ಯಂತ ಶ್ರೇಷ್ಠವಾದದ್ದು ಪ್ರತಿಯೊಬ್ಬರು ರಕ್ತದಾನಕ್ಕೆ ಮುಂದಾಗಬೇಕು ಎಂದು ಯಾದಗಿರಿ ನಗರದ ನಾಯ್ಕೋಡಿ ಆಸ್ಪತ್ರೆಯ ಕಿವಿ ಮೂಗು ಗಂಟಲು ತಜ್ಞ ಡಾ.ರಾಹುಲ್ ಎಸ್ ನಾಯ್ಕೋಡಿ ಹೇಳಿದರು. ವಡಗೇರಾ ಪಟ್ಟಣದ ಅಂಬಾ ಮಹೇಶ್ವರಿ ದೇವಸ್ಥಾನ ಆವರಣದಲ್ಲಿ ಶ್ರೀ ಅಂಬಾಮಹೇಶ್ವರಿ ಜಾತ್ರಾ ಮಹೋತ್ಸವ ಅಂಗವಾಗಿ ನವ ಚೇತನ ಟ್ರಸ್ಟ್ ವಡಗೇರಾ ಗೆಳೆಯರ ಬಳಗ ಮತ್ತು ವೈದ್ಯಕೀಯ ವಿಜ್ಞಾನ ಸಂಸ್ಥೆ ರಕ್ತ ನಿಧಿ ಕೇಂದ್ರದ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡ ಉಚಿತ ರಕ್ತದಾನ ಶಿಬಿರ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ರಕ್ತದಾನದಿಂದ ಯಾವುದೇ ಅಡ್ಡ ಪರಿಣಾಮವಿಲ್ಲ ರಕ್ತದಾನದಿಂದ ಮತ್ತೊಬ್ಬರ ಜೀವ ಉಳಿಸಿದ ಪುಣ್ಯ ಸಿಗುತ್ತದೆ ಉಚಿತ ರಕ್ತದಾನ ಶಿಬಿರ ಹಮ್ಮಿಕೊಂಡಿರುವ ಕಾರ್ಯ ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ತಾಲೂಕು ಪಂಚಾಯಿತಿ ಇಓ ಹಾಗೂ ಪಿಎ ಮೈಬುಬ ಅಲಿ ಸ್ವತಃ ತಾವೇ ರಕ್ತದಾನ ಮಾಡಿ ಚಾಲನೆ ನೀಡಿ ಮಾತನಾಡಿದರು.ಸದೃಢ ಆರೋಗ್ಯಕ್ಕೆ ರಕ್ತದಾನ ಸರ್ವಶ್ರೇಷ್ಠವಾಗಿದ್ದು, ಜಾತ್ರೆ, ಉತ್ಸವ ದಂತಹ ಕಾರ್ಯಕ್ರಮಗಳಲ್ಲಿ, ಆರೋಗ್ಯ ಶಿಬಿರ ಆಯೋಜಿಸುವ ಮೂಲಕ ಇತರರಿಗೆ ಸ್ಪೂರ್ತಿ ಹಾಗೂ ಜೀವ ಉಳಿಸುವ ಕೆಲಸ ಮಾಡುವುದು ಸರ್ವಶ್ರೇಷ್ಠವಾಗಿದೆ ಎಂದರು. ಪಿಎ ಮೈಬುಬ ಅಲಿ ಮಾತನಾಡಿ. ಅನಾರೋಗ್ಯ ಸಂದರ್ಭದಲ್ಲಿ ಎಷ್ಟೋ ಬಡವರು ರಕ್ತಕೊಳ್ಳಲು ಆಗದೆ, ಪ್ರಾಣ ಕಳೆದುಕೊಳ್ಳುವ ಸ್ಥಿತಿಯಲ್ಲಿರುತ್ತಾರೆ, ಬಡವರಿಗೆ ಅನುಕೂಲವಾಗಲು ಆಗಾಗ ಇಂತಹ ಆರೋಗ್ಯ ಶಿಬಿರದಿಂದ ಸಂಗ್ರಹವಾಗುವ ರಕ್ತದಾನ ದಿಂದ ಮತ್ತೊಂದು ಜೀವನ ಉಳಿಸಿದ ಶ್ರೇಯಸ್ಸು ನಿಮ್ಮದಾಗುತ್ತದೆ, ಯಾರು ಕೂಡು ಆತಂಕ, ಭಯ ಪಡದೆ ಆರೋಗ್ಯವಂತರು ರಕ್ತದಾನ ಶಿಬಿರಗಳಲ್ಲಿ ಭಾಗವಹಿಸಿ ರಕ್ತದಾನ ಮಾಡಲು ಸಲಹೆ ನೀಡಿದರು.ನವ ಚೇತನ ಟ್ರಸ್ಟ್ ಅಧ್ಯಕ್ಷ ನಿಂಗಣ್ಣ ಜಡಿ ಪ್ರಸ್ತಾವಿಕವಾಗಿ ಮಾತನಾಡಿದರು.ಇದೆ ಸಮಯದಲ್ಲಿ 65.ಜನ ರಕ್ತದಾನ ಮಾಡಿದರು.ಈ ಸಂದರ್ಭದಲ್ಲಿ ಕಾ.ನಿ ಪತ್ರಕರ್ತ ಸಂಘದ ಜಿಲ್ಲಾಧ್ಯಕ್ಷ ಮಲ್ಲಪ್ಪ ಸಂಕೀನ್,ಡಾ. ಸುಭಾಷ್ ಕರಣಿಗಿ, ಶ್ರೀನಿವಾಸ್ ರಾವ್ ಕುಲಕರ್ಣಿ,ಗೌರಿಶಂಕರ್ ಸ್ವಾಮಿ ಹಿರೇಮಠ್,ಡಾ.ಪ್ರಿಯದರ್ಶಿನಿ,ಮರೇಪ್ಪ ಜಡಿ,ಕಸಾಪ ಅಧ್ಯಕ್ಷ ಮಲ್ಲಿಕಾರ್ಜುನ ಕರಿಕಳ್ಳಿ,ಡಾ.ಸಂಜು ಚೌಕಿಮಠ,ಅಶೋಕ ಮುಸ್ತಾಜೀರ್,ಡಾ.ಮರೇಪ್ಪ ನಾಟೇಕಾರ,ಬಸವರಾಜ್ ನೀಲಹಳ್ಳಿ,ರಾಜಶೇಖರ್ ಕಾಡಂನೋರ,ಶಿವರಾಜ್ ಬಾಗುರ್,ಡಿಡಿಯು ಪ್ರಾಂಶುಪಾಲ ಸಜೀಶ್ ರಾಜ್, ಮಲ್ಲು ಪೊಲೀಸ್ ಪಾಟೀಲ್, ಹಣಮಂತರಾಯ ಜಡಿ, ಸಂಗು ಗೌಡ ಮಾಲಿ ಪಾಟೀಲ್ ಅಬ್ದುಲ್ ಚಿಗಾನೂರ, ಮಲ್ಲಣ್ಣ ನೀಲಳ್ಳಿ, ಮಂಜುನಾಥ್ ರೆಡ್ಡಿ ಚೆನ್ನೂರು,ಈಶಪ್ಪ ವಿಶ್ವಕರ್ಮ ಬ್ಲಡ್ ಬ್ಯಾಂಕ ಹಾಗೂ ಹಾರೋಗ್ಯ ಇಲಾಖೆಯ ಸಿಬ್ಬಂದಿಗಳು ಹಾಗೂ ಗೆಳೆಯರ ಬಳಗದವರು ಪಟ್ಟಣದ ಮುಖಂಡರು ಉಪಸ್ಥಿತರಿದ್ದರು.ಈ ಕಾರ್ಯಕ್ರಮವನ್ನು ನಿವೃತ್ತ ಸಾರಿಗೆ ಕಂಟ್ರೋಲರ್ ಹೊನ್ನಪ್ಪ ವಿಶ್ವಕರ್ಮ ನಿರೂಪಿಸಿ ವಂದಿಸಿದರು.

# ಚಿನ್ನದ ಪದಕ ಗೆದ್ದು ಜಿಲ್ಲೆಯ ಕೀರ್ತಿ ಹೆಚ್ಚಿಸಿದ ನಿಶಿತ, ಪರ್ವೇಜ್



• **ಮಲ್ಲಮ್ಮ ನುಡಿ ವಾರ್ತೆ ಬೀದರ್:**

ಫೆಬ್ರವರಿ 4ರಿಂದ 8ರ ವರೆಗೆ ರಾಷ್ಟ್ರ ರಾಜ್ಯಧಾನಿ ನವದೆಹಲಿಯ ಇಂದಿರಾ ಗಾಂಧಿ ಕ್ರೀಡಾ ಭವನದಲ್ಲಿನ ಕೆ.ಡಿ. ಜ್ಯಾದವ್ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಅಂತರಾಷ್ಟ್ರೀಯ ಕಿಕ್ ಬೊಕ್ಸಿಂಗ್ ಕ್ರೀಡೆ 2026 ಸ್ಪರ್ಧೆಯಲ್ಲಿ ಕರ್ನಾಟಕ ರಾಜ್ಯದಿಂದ ಒಟ್ಟು 16 ಕ್ರೀಡಾಪಟುಗಳು ಭಾಗವಹಿಸಿದ್ದು ಬೀದರ ಜಿಲ್ಲೆಯಿಂದ ಮೊಹ್ಮದ್ ಪರವೇಜ ಖಾನ್ ತಂದೆ ಡಾ. ಮೊಹ್ಮದ್ ಅಯಾಜ ಖಾನ್ ಹಾಗೂ ನಿಶಿತ ಸಾವಳಗಿ ತಂದೆ ದಿ.ರಾಜಶೇಖರ್ ಸಾವಳಗಿ ಇವರು ಭಾಗವಹಿಸಿ ಅಂತರಾಷ್ಟ್ರೀಯ ಮಟ್ಟದಲ್ಲಿ ಬಂಗಾರದ ಪದಕ ಹಾಗೂ ಅಂತರಾಷ್ಟ್ರೀಯ ಬೆಳ್ಳಿ ಪದಕಗಳನ್ನು ತನ್ನದಾಗಿಸಿಕೊಂಡು ಬೀದರ ಜಿಲ್ಲೆಯ ಕೀರ್ತಿ ಹೆಚ್ಚಿಸಿದ್ದಾರೆ ಎಂದು ತಂಡದ ವ್ಯವಸ್ಥಾಪಕರಾದ ಡಾ.ಇಮ್ರಾನ್ ಸಯಿದ್ ಹೇಳಿದ್ದಾರೆ.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಟಿ ಉದ್ದೇಶಿಸಿ ಮಾತನಾಡಿರುವ ಅವರು, ಕ್ರೀಡಾ ಕೋಚ್ ಆಗಿ ಸುವಿತ್ ಎಸ್. ಮೋರೆ ಹಾಗೂ ತಂಡದ ವ್ಯವಸ್ಥಾಪಕರಾಗಿ ತಾನು ಭಾಗವಹಿಸಿದ್ದೇವೆ. ನಿಶಿತ ಸಾವಳಗಿ ಅವರು ಜ್ಯುನಿಯರ್ ಕಿಕ್ ಬಾಕ್ಸಿಂಗ್ ಅಂತರಾಷ್ಟಿಯ ಸ್ಪರ್ಧೆಯಲ್ಲಿ ಬಂಗಾರದ ಪದಕ ಪದಕ ಪಡೆದು ದೇಶದ, ರಾಜ್ಯದ ಹಾಗೂ ಬೀದರ್ ಜಿಲ್ಲೆಯ ಕೀರ್ತಿ ಹೆಚ್ಚಿಸಿದ್ದಾರೆ. ಹಾಗೇ ಪರ್ವೆಜ್ ಖಾನ್ ಇವರು ಸಿನಿಯರ್ ಕಿಕ್ ಬಾಕ್ಸಿಂಗ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಪಡೆಯುವ ಮೂಲಕ ದ್ವಿತೀಯ ಸ್ಥಾನ ಪಡೆದಿರುತ್ತಾರೆ. ಪಾಕಿಸ್ತಾನ ಹೊರತುಪಡಿಸಿ ಸುಮಾರು 12 ದೇಶಗಳ ಕ್ರೀಡಾಪಟುಗಳು ಭಾಗವಹಿಸಿದ್ದರು ಎಂದರು. ಪಂದ್ಯಾಟದ ಕೋಚ್ ಆದ ಡಾ.ಸುವಿತ ಮೋರೆ ಮಾತನಾಡಿ, ಪ್ಯಾಲೆಷ್ಟಿನ್,ತುರ್ಕಿಸ್ತಾನ,ಅಜೇರಿಯಾ, ಇರಾನ್, ತಜಕಿಸ್ತಾನ್, ಈಜಿಪ್ಟ್ ಸೇರಿದಂತೆ 12ಕ್ಕೂ ಅಧಿಕ ದೇಶಗಳ ಕ್ರೀಡಾಪಟುಗಳು ತಮ್ಮ ಅದ್ಭುತ ಪ್ರದರ್ಶನ ಗೈಯ್ಯುವ ಮೂಲಕ ಜಿಲ್ಲೆಯ ಕೀರ್ತಿ ವಿದೇಶದಲ್ಲೂ ಹೆಚ್ಚಿಸಿದ್ದಾರೆ ಎಂದವರು ಹೇಳಿದರು.

ಕ್ರೀಡಾಪಟುಗಳಾದ ಮಹಮ್ಮದ್ ಪರ್ವೆಜ್ ಖಾನ್ ಹಾಗೂ ನಿಶಿತ ಸಾವಳಗಿ ತಮ್ಮ ಸ್ಪರ್ಧೆಯ ಕುರಿತು ಅನುಭವ ಹಂಚಿಕೊಂಡರು. ಪತ್ರಕರ್ತ ಮಮಹಮ್ಮದ್ ಮಸೂದ್, ಕರಾಟೆ ಕೋಚ್ ಆದ ಬಾಲಭವನದ ಸೂರ್ಯಕಾಂತ ಮೋರೆ ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.

# ಮಕ್ಕಳಿಗೆ ಮಹತ್ತರ ಗುರಿಯೊಂದಿಗೆ ಗುಣಮಟ್ಟದ ಶಿಕ್ಷಣ ಕೊಡಿ:ಶಿವಾಜಿ ಆರ್. ಎಚ್



• **ಮಲ್ಲಮ್ಮ ನುಡಿ ವಾರ್ತೆ ಕಮಲನಗರ:**

ಮಕ್ಕಳ ವ್ಯಕ್ತಿತ್ವ ರೂಪಿಸುವಲ್ಲಿ ಶಿಕ್ಷಕರ ಜವಾಬ್ದಾರಿ ಬಹಳ ದೊಡ್ಡದಿದೆ, ಮಹತ್ತರ ಗುರಿಯೊಂದಿಗೆ ಗುಣಮಟ್ಟದ ಶಿಕ್ಷಣ ನೀಡಿ,

ಕೇವಲ ಅಂಕಗಳಿಕೆಯಲ್ಲದೆ, ಉನ್ನತ ಗುರಿ ಮತ್ತು ಉತ್ತಮ ಸಂಸ್ಕಾರದೊಂದಿಗೆ ಶಿಕ್ಷಣ ನೀಡಿದಾಗ ಮಾತ್ರ ಸಮಾಜದಲ್ಲಿ ಪ್ರಗತಿ ಸಾಧ್ಯ, ಎಂದು ಪ್ರಾಂಶುಪಾಲರಾದ ಶಿವಾಜಿ ಆರ್. ಎಚ್ ಅವರು ಅಭಿಪ್ರಾಯಪಟ್ಟರು.

ಪಟ್ಟಣದ ಶರಣಬಸಪ್ಪ ಪಬ್ಲಿಕ್ ಶಾಲೆಯಲ್ಲಿ ಹಮ್ಮಿಕೊಂಡಿದ್ದ ವಾರ್ಷಿಕೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಶಾಂತಿ ವರ್ಧಕ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು ಪಾಲ್ಗೊಂಡು ಅವರು ಮಾತನಾಡುತ್ತಿದ್ದರು.

ಶಿಕ್ಷಣ ಎಂಬುದು ಸಿಂಹದ ಹಾಲು ಕುಡಿದಂತೆ ಬಲಿಷ್ಠವಾಗಿರಬೇಕು ಹಾಗೂ ಶಿಕ್ಷಣ ಜೊತೆಗೆ ಮಕ್ಕಳು ಉತ್ತಮ ಗುಣನಡತೆ ಮತ್ತು ಸಂಸ್ಕಾರವನ್ನು ಮರೆಯಬಾರದು ಎಂದು ಕಿವಿಮಾತು ಹೇಳಿದರು. ಎಸ್. ಏನ್. ಶಿವಣಕರ ಮಕ್ಕಳಿಗೆ ಪ್ರೇರಣಾ ನುಡಿ ಹೇಳಿದರು.ಅಧ್ಯಕ್ಷತೆ: ಸಂಸ್ಥೆಯ ಅಧ್ಯಕ್ಷರಾದ ಶರಣಪ್ಪ ಮಾನಕರಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.ನಂತರ ಮಕ್ಕಳಿಂದ ಸಂಸ್ಕೃತಿಕ ನಾಟಕ, ನ್ರತ್ಯ, ರೂಪಕ ಪ್ರದರ್ಶನ ನಡೆಯಿತು.

ಈ ವೇಳೆ ಪ್ರಾಂಶುಪಾಲರಾದ ಸಂಸ್ಥೆಯ ಟ್ರಸ್ಟ್ ಅಧ್ಯಕ್ಷ ಮಹೇಶ್ ಮಾನಕರಿ, ಪ್ರಮುಖರಾದ ಯಶವಂತ ಬಿರಾದಾರ, ಸತೀಶ್ ಧರೆಗಾವೆ, ಮಡಿವಾಳಪ್ಪ ಮಹಾಜನ, ರಮೇಶ್ ತೋಕರೆ, ರಂಗರಾವ್ ಜಾಧವ, ಲಿಂಗಾನಂದ ಮಹಾಜನ, ಚನ್ನಬಸವ ಫಾಳೆ, ಉದಯಕುಮಾರ್ ಮಾನಕರಿ ಸೇರಿದಂತೆ ಶಾಲಾ ಸಿಬ್ಬಂದಿ ಮತ್ತು ಮಕ್ಕಳು ಉಪಸ್ಥಿತರಿದ್ದರು.

# ಒತ್ತಡ ನಿವಾರಣೆಗೆ ಕ್ರೀಡೆ ಪೂರಕ; ಸಂಕೀನ್



• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ವಾರ್ಷಿಕ ಕ್ರೀಡಾಕೂಟದಲ್ಲಿ ವಿಜೇತರಿಗೆ ಒಟ್ಟು 20,000 ರೂಪಾಯಿ ನಗದು ಬಹುಮಾನ ಮತ್ತು ಟ್ರೋಫಿಗಳನ್ನು ವಿತರಣೆ ಮಾಡಲಾಯಿತು. ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ರವಿವಾರ ಸಂಜೆ ನಡೆದ ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ಸಂಘದ ಜಿಲ್ಲಾಧ್ಯಕ್ಷ ಮಲ್ಲಪ್ಪ ಸಂಕೀನ್ ಅವರು ವಿತರಣೆ ಮಾಡಿದರು.

ಕಬಡ್ಡಿ, ವಾಲಿಬಾಲ್ ಮತ್ತು ಕ್ರಿಕೆಟ್ ನಲ್ಲಿ ವಿಜೇತ ತಂಡಗಳಿಗೆ ತಲಾ 5,000 ರೂಪಾಯಿ ನಗದು ಬಹುಮಾನ ಮತ್ತು ಟ್ರೋಫಿ ನೀಡಲಾಯಿತು. ಸೋತ ತಂಡಗಳಿಗೆ ಮೆಡಲ್ ನೀಡಿ ಗೌರವಿಸಲಾತು.

ನೂರು ಮೀಟರ್ ಓಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಸಲೀಂ ಮತ್ತು ಗುಂಡು ಎಸೆತದಲ್ಲಿ ಪ್ರಥಮ ಸ್ಥಾನ ಪಡೆದ ಮಲ್ಲಾರಾವ್ ಕುಲಕರ್ಣಿ ಅವರಿಗೆ ತಲಾ 1,000 ರೂಪಾಯಿ ನಗದು ಬಹುಮಾನ ಮತ್ತು ಟ್ರೋಫಿ ನೀಡಲಾಯಿತು. ಕೇರಂ ಡಬಲ್ ವಿಭಾಗದ ವಿಜೇತರಾದ ರಾಜು ಕುಂಬಾರ ಮತ್ತು ಸಿದ್ದಲಿಂಗರೆಡ್ಡಿ ಮುನಗಾಲ್ ಹಾಗೂ ಬ್ಯಾಡ್ಮಿಂಟನ್ ಡಬಲ್ ವಿಜೇತರಾದ ಅಮೀನ್ ಹೊಸೂರು ಮತ್ತು ದೇವು ವಡವಟ್ ಮತ್ತು ಬ್ಯಾಡ್ಮಿಂಟನ್ ಸಿಂಗಲ್ ವಿಜೇತ ಭೀಮಣ್ಣ ವಡವಟ್ ತಲಾ 5,00 ರೂಪಾಯಿ ನಗದು ಬಹುಮಾನ ಮತ್ತು ಸೋತ ಆಟಗಾರರಿಗೆ ಮೆಡಲ್ ವಿತರಿಸಲಾತು. ಚೆಸ್ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದ ವಿಜಯಾಚಾರ್ಯ ಪುರೋಹಿತ ಅವರಿಗೆ ನಗದು ಬಹುಮಾನ 500 ರೂಪಾಯಿ ಮತ್ತು ಟ್ರೋಫಿ ನೀಡಿ ಗೌರವಿಸಲಾಯಿತು.

ಇದೇ ವೇಳೆ ಮಾತನಾಡಿದ ಸಂಘದ ಜಿಲ್ಲಾಧ್ಯಕ್ಷ ಮಲ್ಲಪ್ಪ ಸಂಕೀನ್, ಕ್ರೀಡೆಗಳಿಂದ ಉತ್ತಮವಾದ ಆರೋಗ್ಯ ವೃದ್ಧಿಯಾಗುತ್ತದೆ. ದೈಹಿಕವಾಗಿ ಸದೃಢತೆ ಹೊಂದಲು ಕ್ರೀಡೆ ರಾಮಭಾಣವಾಗಿದೆ ಎಂದರು.

ಒತ್ತಡ ನಿವಾರಣೆಗೆ ಕ್ರೀಡೆಗಳು ಪೂರಕವಾಗಿವೆ. ಪತ್ರಕರ್ತರು ವೃತ್ತಿ ಜತೆಗೆ ಆರೋಗ್ಯದ ಕಡೆಗೆ ಒತ್ತು ನೀಡಲು ಕ್ರೀಡೆಗಳಲ್ಲಿ ಭಾಗವಹಿಸಬೇಕು ಎಂದು ತಿಳಿಸಿದರು. ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿದ್ದಪ್ಪ ಲಿಂಗೇರಿ, ರಾಜ್ಯ ಪರಿಷತ್ತು ಸದಸ್ಯ ಸಾಗರ್ ದೇಸಾಯಿ, ಜಿಲ್ಲಾ ಖಜಾಂಚಿ ರಾಜು ನಲ್ಲಿಕರ್ ಸೇರಿದಂತೆ ಇನ್ನಿತರರಿದ್ದರು.

## ಶಾಸಕ ಶರಣಗೌಡ ಕಂದಕೂರ ಅಭಿಮತ ಹೆಡಗಿಮದ್ರಾದಲ್ಲಿ ಧರ್ಮ ಸಾಂಸ್ಕೃತಿಕ ಉತ್ಸವ

# ಮಠಗಳಿಂದ ನಿರಂತರ ಸಾಮಾಜಿಕ ಪ್ರಜ್ಞೆ ಕಾರ್ಯ: ಶರಣಗೌಡ ಕಂದಕೂರ

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**

ನಾಡಿನಲ್ಲಿನ ಇವತ್ತು ಮಠ, ಮಾನ್ಯಗಳು ಕೇವಲ ಧಾರ್ಮಿಕತೆಗೆ ಸೀಮಿತವಾಗದೆ ತ್ರಿವಿಧ ದಾಸೋಹ ನಡೆಸುವ ಮೂಲಕ ಸಾಮಾಜಿಕ ಪ್ರಜ್ಞೆ ಮೆರೆಯುತ್ತಿವೆ ಎಂದು ಗುರಮಠಕಲ್ ಶಾಸಕ ಶರಣಗೌಡ ಕಂದಕೂರ ತಿಳಿಸಿದರು. ತಾಲೂಕಿನ ಹೆಡಗಿಮದ್ರಾ ಗ್ರಾಮದಲ್ಲಿ ಸೋಮವಾರ ಸಂಜೆ ನಡೆದ ಶ್ರೀ ಶಾಂತ ಶಿವಯೋಗಿಗಳ ಜಾತ್ರಾ ಮಹೋತ್ಸವದ ಭವ್ಯ ರಥೋತ್ಸವದ ನಂತರ ಆಯೋಜಿಸಿದ್ದ ಧರ್ಮ ಸಾಂಸ್ಕೃತಿಕ ಉತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಠಗಳು ಮತ್ತು ಮಠಾಧೀಶರು ನಿರಂತರವಾಗಿ ರಾಜಕೀಯ, ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಮಾರ್ಗದರ್ಶನ ಮಾಡುತ್ತಿರುವುದು ಶ್ಲಾಘನೀಯ ಕಾರ್ಯ ಎಂದು ಬಣ್ಣಿಸಿದರು. ಕಲ್ಯಾಣ ಭಾಗದಲ್ಲಿನ ಅನೇಕ ಮಠ, ಮಾನ್ಯಗಳಲ್ಲಿ ಇಂದು ಹೆಡಗಿಮದ್ರಾ ಮಠ ಪ್ರವರ್ಧಮಾನಕ್ಕೆ ಬರುತ್ತಿದೆ. ಇಲ್ಲಿನ ಶ್ರೀಗಳು ಧಾರ್ಮಿಕ ಕೈಂಕರ್ಯದ ಜತೆಯಲ್ಲಿ ಶಿಕ್ಷಣ ಕ್ಷೇತ್ರಕ್ಕೂ ತಮ್ಮ ಕೊಡುಗೆ ನೀಡುತ್ತಿದ್ದಾರೆ. ಅವರ ಕಳಕಳಿ ಮೆಚ್ಚುವಂಥದ್ದು ಎಂದು ಗುಣಗಾನ ಮಾಡಿದರು. ದೇವಾಪುರದ ಶ್ರೀ ಶಿವಮೂರ್ತಿ ಶಿವಾಚಾರ್ಯರು ಮಾತನಾಡಿ, ಶಾಂತ ಶಿವಯೋಗಿಗಳು ಯಾವ ಪವಾಡವನ್ನೂ ಮಾಡದೆ, ತಮ್ಮ ಜೀವನವನ್ನೇ ಒಂದು ಪವಾಡವನ್ನಾಗಿ ಮಾಡಿದ್ದ ಒಬ್ಬ ಸಂತರಾಗಿದ್ದಾರೆ.

> ❝ ಶ್ರೀಮಠಕ್ಕೆ ನಾನು ಎಂದೂ ಒಬ್ಬ ರಾಜಕಾರಣಿಯಾಗಿ ಬಂದಿಲ್ಲ. ಮಠದ ಸದ್ಭಕ್ತರಲ್ಲಿ ನಾನೂ ಸಹ ಒಬ್ಬನಾಗಿ ಬರುತ್ತಿದ್ದೇನೆ ಮತ್ತು ಮುಂದೆಯೂ ಬರುತ್ತೇನೆ. ಮಠದ ಅಭ್ಯುದಯಕ್ಕೆ ನಮ್ಮ ಸಹಕಾರ ಸದಾ ಇರಲಿದೆ.
>
> **ಶರಣಗೌಡ ಕಂದಕೂರ**
>
> **ಗುರಮಠಕಲ್ ಶಾಸಕ.**

ಏನೂ ಇಲ್ಲದ ಈ ಮಠದ ಸರ್ವಾಂಗೀಣ ಅಭಿವೃದ್ಧಿಗೆ ಪೀಠಾಧಿಪತಿಗಳು ಶ್ರಮಿಸುತ್ತಿದ್ದಾರೆ. ಹೀಗಾಗಿ ಹೆಡಗಿಮದ್ರಾ ಮಠ ಜಾತಿ, ಮತ ಮತ್ತು ಪಂಥಗಳನ್ನು ಮೀರಿ ಬೆಳೆಯುತ್ತಿದೆ ಎಂದು ನುಡಿದರು. ಇದಕ್ಕೂ ಮೊದಲು ರಥೋತ್ಸವಕ್ಕೆ ಮುಗುನಾಗವಿ ಅಭಿನವ ಸಿದ್ದಲಿಂಗ ಶಿವಾಚಾರ್ಯ ಸ್ವಾಮಿಗಳು ಮತ್ತು ಶಾಸಕ ಚನ್ನರಡಿಗೌಡ ಪಾಟೀಲ್ ಚಾಲನೆ ನೀಡಿದರು.

ನೇತೃತ್ವ ವಹಿಸಿ ಮಾತನಾಡಿದ ಪೀಠಾಧಿಪತಿ ಶ್ರೀ ಶಾಂತ ಮಲ್ಲಿಕಾರ್ಜುನ ಪಂಡಿತಾರಾಧ್ಯ ಸ್ವಾಮಿಗಳು, ಕಳೆದ ಬಾರಿ ಅತಿವೃಷ್ಠಿ ಹೆಚ್ಚಾಗಿ ರೈತರು ಸಂಕಷ್ಟಕ್ಕೆ ಸಿಲುಕಿದ ಕಾರಣ ಜಾತ್ರೆ ವಿಜೃಂಭಣೆಯಿಂದ ಆಚರಣೆ ಮಾಡುವುದು ಬೇಡ ಎಂಬ ನಿರ್ಧಾರ ಪೂರ್ವಭಾವಿ ಸಭೆಯಲ್ಲಿ ಕೈಗೊಳ್ಳಲಾಗಿತ್ತು. ಹಾಗಾಗಿ ಸರಳವಾಗಿ ಜಾತ್ರೆ ನಡೆಸಿದರೂ ಶಾಂತ ಶಿವಯೋಗಿಗಳ ಸಂಕಲ್ಪದಂತೆ ಕಳೆದ ವರ್ಷಕ್ಕಿಂತ ಭಕ್ತರು ದುಪ್ಪಟ್ಟು ಭಕ್ತರು ಬಂದಿದ್ದಾರೆ. ಮಠಕ್ಕೆ ಭಕ್ತರೇ ಯಾವತ್ತೂ ಜೀವಾಳವಾಗಿದ್ದಾರೆ ಎಂದು ಹೇಳಿದರು.ಬಿಜೆಪಿ ಮುಖಂಡ ರಾಚನಗೌಡ ಮುದ್ನಾಳ್ ಪ್ರಾಸ್ತಾವಿಕ ಮಾತನಾಡಿ, ಕಳೆದ 40 ವರ್ಷಗಳಿಂದಲೂ ನಾವು ಈ ಜಾತ್ರೆ ನೋಡುತ್ತಾ ಬರುತ್ತಿದ್ದೇವೆ. ಮಠದ ಜವಾಬ್ದಾರಿಯನ್ನು ಶ್ರೀಗಳು ವಹಿಸಿಕೊಂಡ ನಂತರ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದ್ದು, ನಿಜಕ್ಕೂ ನಾವೆಲ್ಲರೂ ಧನ್ಯರು ಎಂದರು. ವೇದಿಕೆ ಮೇಲೆ ಅಭಿನವ ಸಿದ್ಧಲಿಂಗ ಶಿವಾಚಾರ್ಯರು,



ಶ್ರೀ ರಾಜಶೇಖರ ಶಿವಾಚಾರ್ಯರು, ಶ್ರೀ ಸಿದ್ದ–ರೇಣುಕಾ ಶಿವಾಚಾರ್ಯರು, ಪ್ರಮುಖರಾದ ಮಹೇಶರಡ್ಡಿ ಮುದ್ನಾಳ್, ನಾಗರತ್ನ ಕುಪ್ಪಿ, ಸಿದ್ದಪ್ಪ ಹೊಟ್ಟಿ, ರಾಮರಡ್ಡಿ ತಂಗಡಗಿ, ಮಹಾಂತಯ್ಯಾ ಸ್ವಾಮಿ ಹೀರೇಮಠ,

ಸುಭಾಶ್ಚಂದ್ರ ಕಟಕಟಿ, ಅನಿಲಕುಮಾರ ಹೆಡಗಿಮದ್ರಾ, ಡಾ.ಸಿಎಂ ಪಾಟೀಲ್ ಡಾ.ಶರಣಬಸವಪ್ಪ ಕಾಮರಡ್ಡಿ ಇದ್ದರು.

ಗಿರೀಶಗೌಡ ಪಾಟೀಲ್ ಸ್ವಾಗತಿಸಿದರು. ಅಮರಯ್ಯಾ ಸ್ವಾಮಿ ಜಾಲಿಬೆಂಚಿ ನಿರೂಪಿಸಿದರು.

# ಎಪಿಎಂಸಿ ಮಾರುಕಟ್ಟೆಯಲ್ಲಿ ರೈತರಿಗೆ 112 ಪೊಲೀಸ್ ಎಮರ್ಜೆನ್ಸಿ ಸೇವೆ ಕುರಿತು ಜಾಗೃತಿ



• **ಮಲ್ಲಮ್ಮ ನುಡಿ ವಾರ್ತೆ ಕುಕನೂರ:**

ಪಟ್ಟಣದ ಎಪಿಎಂಸಿ ಮಾರುಕಟ್ಟೆ ಆವರಣದಲ್ಲಿ ರೈತರು ಹಾಗೂ ವ್ಯಾಪಾರಸ್ಥರಿಗೆ 112 ಪೊಲೀಸ್ ಎಮರ್ಜೆನ್ಸಿಸೇವೆಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಯಲಬುರ್ಗಾ ಪೊಲೀಸ್ ಠಾಣೆಯ ಮಾರುತಿ ಎ. (ಹೆಡ್ ಕಾನ್ಸ್ಟೇಬಲ್) ಮಾತನಾಡಿ, ಸಾರ್ವಜನಿಕ ಸುರಕ್ಷತೆಯಲ್ಲಿ 112 ತುರ್ತು ಸೇವೆಯ ಮಹತ್ವವನ್ನು ವಿವರಿಸಿದರು. ಅಗ್ನಿ ಅವಘಡ, ಕಳ್ಳತನ, ಅಪಘಾತ, ಗಲಾಟೆ ಸೇರಿದಂತೆ ಯಾವುದೇ ತರಹದ ತುರ್ತು ಪರಿಸ್ಥಿತಿ ಸಂಭವಿಸಿದಲ್ಲಿ ವಿಳಂಬ ಮಾಡದೇ 112ಕ್ಕೆ ಕರೆ ಮಾಡಿ ಪೊಲೀಸ್ ಸಹಾಯ ಪಡೆಯಬೇಕೆಂದು ಅವರು ಸಲಹೆ ನೀಡಿದರು.

112 ಸೇವೆಯ ಮೂಲಕ ತಕ್ಷಣ ಸ್ಪಂದನೆ ಲಭ್ಯವಾಗುತ್ತದೆ ಎಂಬುದನ್ನು ಅವರು ರೈತರಿಗೆ ಮನವರಿಕೆ ಮಾಡಿದರು.

ಇದೇ ಸಂದರ್ಭದಲ್ಲಿ ಅಕ್ರಮ ಗೋ ಸಾಗಾಣಿಕೆ, ಅಸ್ಪೃಶ್ಯತೆ, ಕೋಮು ಗಲಭೆ, ಮಾದಕ ದ್ರವ್ಯಗಳಾದ ಡ್ರಗ್ಸ್ ಹಾಗೂ ಆಫೀಮು ಮಾರಾಟಸೇವನೆ, ಓಸಿಇಸ್ಪೀಟ್ ಜೂಜಾಟ, ಅಕ್ರಮ ಮದ್ಯ ಮಾರಾಟ, ಅಕ್ರಮ ಮರಳು ಸಾಗಣೆ ಸೇರಿದಂತೆ ಯಾವುದೇ ಕಾನೂನುಬಾಹಿರ ಚಟುವಟಿಕೆಗಳ ಬಗ್ಗೆ ಮಾಹಿತಿ ದೊರೆತಲ್ಲಿ ತಕ್ಷಣ 112ಕ್ಕೆ ಕರೆ ಮಾಡುವಂತೆ ತಿಳಿಸಲಾಯಿತು.

ಇತ್ತೀಚೆಗೆ 5ಜಿ ಸೇವೆ ಆರಂಭವಾಗಿದೆ ಎಂದು ಹೇಳಿ, ಸಿಮ್ ಅನ್ನು 4ಜಿನಿಂದ 5ಜಿಗೆ ಅಪ್‌ಡೇಟ್ ಮಾಡುವುದಾಗಿ ಕರೆ ಮಾಡಿ ಮೊಬೈಲ್‌ಗೆ ಬರುವ OTP ಕೇಳುವ ವಂಚನೆ ಪ್ರಕರಣಗಳು ಹೆಚ್ಚುತ್ತಿದ್ದು, ಯಾವುದೇ ಕಾರಣಕ್ಕೂ ಔಖಿಕ ನೀಡಬಾರದು ಎಂದು ಸಾರ್ವಜನಿಕರಿಗೆ ಎಚ್ಚರಿಕೆ ನೀಡಲಾಯಿತು.

ಅಲ್ಲದೆ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ಇನ್‌ಸ್ಟಾಗ್ರಾಂ ಹಾಗೂ ಟ್ವಿಟರ್‌ನಲ್ಲಿ 112 ಕೊಪ್ಪಳ ಪುಟವನ್ನು ಫಾಲೋ ಮಾಡಿ, ಲೈಕ್ ಹಾಗೂ ಶೇರ್ ಮಾಡುವಂತೆ ಸಲಹೆ ನೀಡಲಾಯಿತು.

ಯಲಬುರ್ಗಾ ಕುಕನೂರ ಇಖಖಖ 112 ಪೊಲೀಸ್ ಸಿಬ್ಬಂದಿ ಮಾರುತಿ ಅವರ ನೇತೃತ್ವದಲ್ಲಿ ಈ ಜಾಗೃತಿ ಕಾರ್ಯ ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ಬೆಣಕಲ್ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಗವಿಸಿದ್ದಪ್ಪ ಲೇಬಗೇರಿ, ಪಾಲಕ್ಷಪ್ಪ ಬೆಣಕಲ್ ಸೇರಿದಂತೆ ಅನೇಕ ರೈತರು ಉಪಸ್ಥಿತರಿದ್ದು, ಜಾಗೃತಿ ಕಾರ್ಯಕ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

# ನೀರಿಗಾಗಿ ಅನುದಾನ ನೀಡಲು ಸಿ.ಎಂಗೆ ಮನವಿ



• **ಮಲ್ಲಮ್ಮ ನುಡಿ ವಾರ್ತೆ ಮುದಗಲ್ :**

ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ವಿಧಾನಪರಿಷತ್ ಸದಸ್ಯ ಶರಣಗೌಡ ಪಾಟೀಲ್ ಬಯ್ಯಾಪುರ ನೇತೃತ್ವದಲ್ಲಿ, ಮುದಗಲ್ ಪಟ್ಟಣದಲ್ಲಿ ಬಹು ವರ್ಷದಿಂದ ಅರೆಬರೆಯಾಗಿರುವ ಕುಡಿಯುವ ನೀರಿನ ತೊಟ್ಟಿ ಪೂರ್ಣಗೊಳಿಸಲು ಅನುದಾನ ನೀಡುವಂತೆ ಮನವಿ ಸಲ್ಲಿಸಿ ಒತ್ತಾಯಿಸಿದರು.

ಕುಷ್ಟಗಿ ಮಾಜಿ ಶಾಸಕ ಅಮರೇಗೌಡ ಪಾಟೀಲ್ ಬಯ್ಯಾಪುರ ಮೊಮ್ಮಗನ ವಿವಾಹ ಕಾರ್ಯಕ್ರಮಕ್ಕೆ ಲಿಂಗಸಗೂರುಗೆ ಆಗಮಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಮುದ್ಗಲ್ ಪಟ್ಟಣದಲ್ಲಿ 15 ದಿನದೊಮ್ಮೆ ನೀರು ಪೂರೈಕೆಯಾಗುತ್ತಿದೆ. ಬಹು ವರ್ಷಗಳಿಂದ 24*7 ಕುಡಿಯುವ ನೀರಿನ ಕಾಮಗಾರಿ ಅರೆ ಬರೆ-ಯಾಗಿರುತ್ತದೆ. 33 ಕೋಟಿ ವೆಚ್ಚದಲ್ಲಿ ಕುಡಿಯುವ ನೀರಿನ ಯೋಜನೆ ಕೈಗೆತ್ತಿಕೊಳ್ಳಲಾಗಿತ್ತು. ಗುತ್ತಿಗೆದಾರ ನಿರ್ಲಕ್ಷತನದಿಂದ ಕಾಮಗಾರಿ ಅರೆಬರಿಯಾಗಿರುವದನ್ನು ತಿಳಿಸಿದ ಬಳಿಕ ಸಮರ್ಪಕ ಕುಡಿಯುವ ನೀರು ಯೋಜನೆ ಕಾಮಗಾರಿ ಪೂರ್ಣಗೊಳ್ಳಲು 50 ಕೋಟಿ ಅನುದಾನದ ಕೊರತೆ ಇದೆ. ಕೂಡಲೇ ಅನುದಾನ ನೀಡಿ ಪಟ್ಟಣದ ಸಾರ್ವಜನಿಕರಿಗೆ ಬೇಕಾಗಿರುವ ಕುಡಿಯುವ ನೀರಿನ ಸಮಸ್ಯೆ ಇತ್ಯರ್ಥ ಮಾಡಬೇಕು. ಮುದುಗಲ್ ಪಟ್ಟಣದ ಕೋಟೆ ಉತ್ಸವ ಹಾಗೂ ತಾಲೂಕು ಕೇಂದ್ರವನ್ನಾಗಿ ಘೋಷಿಸಬೇಕು ಎಂದು ಮನವಿ ಪತ್ರವನ್ನು ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಹಾಗೂ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಅವರಿಗೆ ಮನವಿ ಸಲ್ಲಿಸಿ ಒತ್ತಾಯ ಮಾಡಿದರು.

ವಿಧಾನ ಪರಿಷತ್ ಸದಸ್ಯ ಶಿವನಗೌಡ ಪಾಟೀಲ್ ಬಯ್ಯಾಪುರ, ಪುರಸಭೆ ಮಾಜಿ ಅಧ್ಯಕ್ಷ ಅಶೋಕ್ ಗೌಡ ಪಾಟೀಲ್, ಆದಾಪುರ್, ಪತ್ತಿನ ಬ್ಯಾಂಕ್ ವ್ಯವಸ್ಥಾಪಕ ಅನಿಲ್ ಬಶೆಟ್ಟಿ ಸೇರಿದಂತೆ ಇತರರಿದ್ದರು.

# ಜಾತ್ರೆಗಳು ಸಾಮರಸ್ಯ ಪ್ರತೀಕ



• **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ.:**

ಜಾತ್ರೆಗಳು ಸಾಮರಸ್ಯ ಪ್ರತೀಕ ವಾಗಿವೆ ಎಂದು ಸಾಹಿತಿ ಬಸವರಾಜ್ ಬಲ್ಲೂರ ಹೇಳಿದರು. ತಾಲುಕಿನ ಧನ್ನೂರ(ಹೆಚ್) ಗ್ರಾಮದ ವೀರಭದ್ರೇಶ್ವರ ಜಾತ್ರೆ ಮಹೋತ್ಸವ ನಿಮಿತ್ಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ, ಕಲ್ಯಾಣ ಕುವರ ಕಲ್ಚರಲ್ ಟ್ರಸ್ಟವತಿಯಿಂದ ಆಯೋಜಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಎಲ್ಲರನ್ನೂ ಒಟ್ಟುಗೂಡಿಸುವ ಕಾರ್ಯ ಜಾತ್ರೆಗಳಿಂದ ನಡೆಯುತ್ತಿವೆ. ಜಾತ್ರೆ ಸಾಮರಸ್ಯ ಪ್ರತೀಕ ವಾಗಿದ್ದು, ಎಲ್ಲರಲ್ಲಿ ಸ್ನೇಹತ್ವ ಬೆಳೆಸಲು ಜಾತ್ರಾ ಮಹೋತ್ಸವ ಅತಿಮುಖ್ಯ ವಾಗಿವೆ ಎಂದು ಹೇಳಿದರು. ಕುವೆಂಪು ವಿಶ್ವವಿದ್ಯಾಲಯ ಮೈಸೂರು ವತಿಯಿಂದ ಗೌರವ ಡಾಕ್ಟರೇಟ್ ಪದವಿ ಪಡೆದ ಸಾಹಿತಿ ಶಿವಶಂಕರ ಟೋಕರೆ ಮಾತನಾಡಿ, ಎಲ್ಲರಲ್ಲಿಯೂ ಒಂದೆನ್ನುವ ಭಾವ ಮೂಡಿಸಲು ಇಂತಹ ಸಾಂಸ್ಕೃತಿಕ ಕಾರ್ಯಕ್ರಮದ ವೇದಿಕೆಗಳು ಗ್ರಾಮೀಣ ಭಾಗದಲ್ಲಿ ಉತ್ತಮ ಶ್ನೇಹತ್ವ ಬೆಳೆಸುತ್ತಿವೆ. ಕನ್ನಡ ಕುವರ ಕಲ್ಚರಲ್ ಟ್ರಸ್ಟ ಅಧ್ಯಕ್ಷ ವಿಷ್ಣುಕಾಂತ ಬಿ. ಜೇ ಯವರು ತಮ್ಮ ಹುಟ್ಟೂರಿನಲ್ಲಿ ಇಂತಹ ಕಾರ್ಯಕ್ರಮಗಳ ಜೊತೆಗೆ ಚಲನ ಚಿತ್ರ ನಿರ್ಮಾಣ ಮಾಡುತ್ತಿರುವುದು ಉತ್ತಮ ಕಾರ್ಯವಾಗಿದೆ ಎಂದು ಹೇಳಿದರು. ಕನ್ನಡ ಕುವರ ಕಲ್ಚರಲ್ ಟ್ರಸ್ಟ ಅಧ್ಯಕ್ಷ ವಿಶ್ನುಕಾಂತ ಬೀ.ಜೇ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ನಿರ್ದೇಶಕ ಬಾಬು ದಾನಿ ಪ್ರಾಸ್ತಾವಿಕ ಮಾತನಾಡಿದರು. ಇದೇವೇಳೆ ಜಗನ್ಮಾತೆ ಅಕ್ಕಮಹಾದೇವಿ ಚಲನ ಚಿತ್ರ ನಟಿ ಸುಲಕ್ಷ ಕೈರಾ ರವರಿಗೆ ಕಲ್ಯಾಣ ಕುವರ ಕಲ್ಚರಲ್ ಟ್ರಸ್ಟ ವತಿಯಿಂದ ಉತ್ತಮ ನಟಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಗೌರವ ಡಾಕ್ಟರೇಟ್ ಪ್ರಶಸ್ತಿ ಪುರಸ್ಕೃತ ಡಾ. ಶಿವಶಂಕರ್ ಟೋಕರೇ ರವರಿಗೆ ಗೌರವ ಪ್ರಶಸ್ತಿ ನೀಡಲಾಯಿತು. ನೃತ್ಯ ಕಲಾವಿದೆ ಸ್ನೇಹಾ ಜಗದೀಶ್ ರವರಿಗೆ ನಾಟ್ಯ ಮಯೂರಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಅಲ್ಲದೆ ವಿಷ್ಣು. ಬೀ ಜೇ ನಿರ್ದೇಶನದ ಪ್ರೊಡಕ್ಷನ್ 6 ಚಲನ ಚಿತ್ರಕ್ಕೆ ಚಾಲನೆ ನೀಡಲಾಯಿತು. ಮತ್ತು ಕಳ್ಳಗುರು ಸುಳ್ಳ ಶಿಷ್ಯ ನಾಟಕ ಪ್ರದರ್ಶನ ಮಾಡಲಾಯಿತು. ಕಾರ್ಯಕ್ರಮದಲ್ಲಿ ಗ್ರಾಂ ಪಂ ಮಾಜಿ ಅಧ್ಯಕ್ಷ ಪರಮೇಶ್ವರ ಪಾಟೀಲ್, ಶ್ರೀಕಾಂತ್ ದಾನಿ, ನಟಿ ಗೌರಿ ವಿಶ್ಣುಕಾಂತ, ಗಣಪತಿ ಬೋಚರೆ, ಜಯರಾಜ್ ಧಾಬಶೆಟ್ಟಿ, ಶರಣಬಸವ ಪಾಟೀಲ್ ಉಪಸ್ತಿತರಿದ್ದರು. ಬಸವರಾಜ್ ಹಾಳೆ ಸ್ವಾಗತಿಸಿದರು. ನಟ ವೈಜಿನಾಥ ಬಿರಾದಾರ ನಿರೂಪಿಸಿದರು. ಅಮಿತ ದಾನಿ ವಂದಿಸಿದರು.

# ಸೂಫಿ ಸಂತ ದರ್ವೇಶರವರಿಗೆ ಸರ್ಕಾರ ಕಡೆಗಣನೆ: ಸುಮನ್




• **ಮಲ್ಲಮ್ಮ ನುಡಿ ವಾರ್ತೆ ಹುಣಸೂರು:**

ಸೂಫಿ ಝುಂ ಸಂತರಿಗೆ ಹಾಗೂ ದುರ್ವೇಶ್ ಸರ್ಕಾರದಿಂದ ಯಾವುದೇ ಅನುದಾನಗಳು ನಮಗೆ ಇನ್ನೂವರೆಗೂ ನಮ್ಮ ಕೈಗೆ ತಲುಪುತ್ತಿಲ್ಲ ಎಂದು ಸರ್ಕಾರ ಬರುವ ಸೌಲತ್ತುಗಳು ಸಂಪೂರ್ಣ ನಮಗೆ ನಿರ್ಲಕ್ಷತೆಯನ್ನು ತೋರಿಸುತ್ತಿದ್ದಾರೆ ಎಂದು ಸೂಫಿ ಝುಂ ಸಂತ ರಿಗೆ ಕಮಿಟಿಯ ತಾಲೂಕು ಅಧ್ಯಕ್ಷರಾದ ಸುಮನ್. ಬಲೆನಹಳ್ಳಿ ನುಮನ್ನ Noman ತಿಳಿಸಿದ್ದಾರೆ

ನಗರದ ಪತ್ರಕರ್ತರ ಸಂಘದ ಕಚೇರಿಯಲ್ಲಿ ಕರೆಯಲಾಗಿದೆ ಮಾತನಾಡಿ ನಮಗೆ ಸೂಫಿ ಝುಂ ಹಾಗೂ ದೃವೇಶ್ ಡಿ ದೇವರಾಜ ಅರಸು ರವರ ಕಾಲದಿಂದಲೂ ನಮಗೆ ಗುರುತಿಸಿ ಸರ್ಕಾರದಿಂದ ಒಂದು ನಮಗೆ ಗುರುತಿನ ಚೀಟಿ ನೀಡಿದ್ದರು ಅದರಲ್ಲಿ ಸರ್ಕಾರದ ಸವಲತ್ತುಗಳು ಸರ್ಕಾರದ ನಮಗೆ ಸಿಗುತ್ತಿತ್ತು ಆ ಸವಲತ್ತಿನಲ್ಲಿ ನಮ್ಮ ಮಕ್ಕಳಿಗೆ ಶಿಕ್ಷಣ ಆರೋಗ್ಯ ಬಸ್ ಪಾಸ್ ಇನ್ನಿತರ ಸೌಲತ್ತುಗಳು ಕೂಡ ನಾವು ಪಡಿತಿದ್ದೆ ಆದರೆ ನಂತರ ಬಿಜೆಪಿ ಸರ್ಕಾರ ಯಡಿಯೂರಪ್ಪ ಆಡಳಿತದ ಅವಧಿಯಲ್ಲಿ ಅದನ್ನು ಸಂಪೂರ್ಣ ರದ್ದುಪಡಿಸಿದ್ದಾರೆ ಅದ ನಂತರ ನಮಗೆ ಯಾವುದೇ ಸರ್ಕಾರ ಆಡಳಿತದಲ್ಲಿ ಇದ್ದರೂ ಕೂಡ ನಮಗೆ ಸೌಲತ್ತುಗಳು ನೀಡುವುದರಲ್ಲಿ ಸಂಪೂರ್ಣವಾಗಿ ವಿಫಲವರಾಗಿದ್ದಾರೆ.

ರಾಜ್ಯ ಕಾಂಗ್ರೆಸ್ ಸರ್ಕಾರ ಆಡಳಿತದಲ್ಲಿ ಇರುವುದರಿಂದ ನಮಗೆ ಮುಂದಿನ ಬಜೆಟ್ಟಿನಲ್ಲಿ ಸವಲತ್ತುಗಳನ್ನು ಮಂಡಿಸುವುದರಲ್ಲಿ ಸರ್ಕಾರಕ್ಕೆ ನಾವು ಗಮನ ಸೆಳೆತಿದ್ದೇವೆ ಎಂದು ತಿಳಿಸಿದರು ಉಪಾಧ್ಯಕ್ಷರಾದ ಸೈಯದ್ ಅಬ್ಬಾಸ್ ಮಾತನಾಡಿ ಹಿಂದೆ ಇದ್ದಂತ ಸರ್ಕಾರದಲ್ಲಿ ಶ್ರೀರಂಗಪಟ್ಟಣದಲ್ಲಿ ಮುಸ್ಲಿಮ್ಸ್ ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕೆಂದು ವಿರೋಧ ವ್ಯಕ್ತಪಡಿಸಿದ್ದರು ಈಗ ಆಡಳಿತ ಮಾಡುತ್ತಿರುವ ಸರ್ಕಾರಗಳು ಅದನ್ನು ಪುನ ವರ್ತನೆ ಮಾಡಿ ಮತ್ತೊಮ್ಮೆ ಶ್ರೀರಂಗಪಟ್ಟಣ ವಿಶ್ವವಿದ್ಯಾಲಯ ಸ್ಥಾಪಿಸಿ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರ ಹೆಸರನ್ನು ಇಡಬೇಕು ಎಂದು ನಾವು ಒತ್ತಾಯಿಸುತ್ತೇವೆ ಸರ್ಕಾರಕ್ಕೆ ಬಂದಂತ ಸವಲತ್ತುಗಳು ಬಡವರ ಸೂರಿಗೆ ಫಲಾನುಭವಿಗಳಿಗೆ ಮನೆ ನಿರ್ಮಿಸಿ ಅನುದಾನ ಇನ್ನುವರೆಗೂ ಬರದೆ ಇರುವ ಕಾದು ಕುಳಿತಿರುವ ಫಲಾನುಭವಿಗಳಿಗೆ ತುರ್ತಾಗಿ ಸರ್ಕಾರ ಹಣ ತಡೆದಿರುವ ಅನುದಾನವನ್ನು ಬಿಡುಗಡೆ ಮಾಡಿಕೊಡಬೇಕು ಎಂದ ತಿಳಿಸಿದರು. ಉಪಾಧ್ಯಕ್ಷರು ಫಯಾಜ್ ಅಹ್ಮದ್ ಮಾತನಾಡಿ ತಾಲೂಕಿನಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಉರ್ದು ಶಾಲೆಯಲ್ಲಿ ಒಂದರಿಂದ ಐದನೇ ತರಗತಿವರೆಗೂ ಉರ್ದು ವಿದ್ಯಾಭ್ಯಾಸ ತಲುಪುತ್ತಿದೆ ಅದಾದ ನಂತರ ನಮ್ಮ ಸಮುದಾಯಕ್ಕೆ ಉರ್ದು ಭಾಷೆಯ ವಿದ್ಯಾಭ್ಯಾಸ ಮಾಡಿದಂತ ವಿದ್ಯಾರ್ಥಿಗಳಿಗೆ ಶಿಕ್ಷಣ ಸಿಗುತ್ತಿಲ್ಲ ಆದ್ದರಿಂದ ಆಡಳಿತ ಮಾಡುತ್ತಿರುವ ಸರ್ಕಾರಗಳು ಈಗಾಗಲೇ ಸಂಪೂರ್ಣವಾಗಿ ಉರ್ದು ಶಾಲೆಯನ್ನು ಬಂದ್ ಮಾಡುತ್ತಿದ್ದಾರೆ ಆದ್ದರಿಂದ ಮುಂದಿನ ಆರನೆಯ ತರಗತಿಯ ಉರ್ದು ಶಿಕ್ಷಣ ವಿದ್ಯಾಭ್ಯಾಸಕ್ಕೆ ಅನುಗುಣವಾಗಿ ಮುಂದುವರಿಸಿ ಕೊಡಬೇಕು ಎಂದು ಸರ್ಕಾರಕ್ಕೆ ನಾವು ಒತ್ತಾಯಿಸುತಿದ್ದೇವೆ ಅಂದರು. ಸುದ್ದಿಗೋಷ್ಠಿಯಲ್ಲಿ ರೋಷನ್ ಅಲಿ ಗಫರ್ ಮಾತನಾಡಿದ್ದಾರೆ ಕಾರ್ಯದರ್ಶಿ ಸನಾವುಲ್ಲ ಮುಖ್ಯಸ್ಥರಾದ ಕಲಂದರ್ ಹಾಗೂ ಇನ್ನಿತರ ಹಾಜರಿದ್ದರು

# ಬಳ್ಳಾರಿಗೆ 350 ಕೋಟಿ ರೂ. ಹೊಸ ಯುಜಿಡಿ ವ್ಯವಸ್ಥೆ




• **ಮಲ್ಲಮ್ಮ ನುಡಿ ಬಳ್ಳಾರಿ:**

ನಗರದಲ್ಲಿ ಹಲವು ದಶಕಗಳ ಹಳೆಯದಾದ ಒಳ ಚರಂಡಿ ವ್ಯವಸ್ಥೆ ಇದೆ. ಅದು ಸರಿಯಾಗಿ ಇಲ್ಲದ ಕಾರಣ ನಗರಕ್ಕೆ ಹೊಸದಾಗಿ ಒಳಚರಂಡಿ (ಯುಜಿಡಿ) ವ್ಯವಸ್ಥೆ ಬರಲಿದೆಂದು ಪಾಲಿಕೆ ಆಯುಕ್ತ ಪಿ.ಎಸ್. ಮಂಜುನಾಥ ಹೇಳಿದ್ದಾರೆ.

ಅವರು ಇಂದು ಇಲ್ಲಿನ ಚೇಂಬರ್ ಆಫ್ ಕಾಮರ್ಸ್ ಸಭಾಂಗಣದಲ್ಲಿ ಬಳ್ಳಾರಿ ಕೈಗಾರಿಕಾ ಮತ್ತು ನಗರದ ಕುಂದುಕೊರತೆಗಳ ಬಗ್ಗೆ ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

ನಗರದಲ್ಲಿ ಪರಿಸರ ಮಾಲಿನ್ಯ ಆಗುತ್ತಿರುವುದು ನೆರೆಯ ಕೈಗಾರಿಕೆಗಳಿಂದ ಆಗುತ್ತಿದೆ. ನಗರದಲ್ಲಿ ಪರಿಸರ ರಕ್ಷಣೆಗೆ ಗಿಡಗಳನ್ನು ನೆಡುವ ಕಾರ್ಯ ಮಾಡಲಿದೆ.

ಬಿ.ಖಾತಾ ಮಾಡಿಕೊಂಡುವುದು ತೆರಿಗೆ ಕಟ್ಟಲಷ್ಟೇ, ಮಾರಾಟ ಮಾಡಲು ಬರಲ್ಲ. ಬಿ.ಖಾತಾವನ್ನು ಏ ಖಾತಾ ಮಾಡಲು ಸೂಚಿಸಿದೆ. ಆದರೂ ಬುಡಾ ಪರವಾನಿಗೆ ಪಡೆದರೆ ಮಾತ್ರ ಮಾಡಲಿದೆಂದು. ಬಿ.ಖಾತಾಗಳನ್ನು ಸಹ ನೋಂದಣೆ ಮಾಡಿದ್ದಾರೆ ಅದು ತಪ್ಪು. ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ಸರಿಪಡಿಸಲು ಮನವಿ ಮಾಡಿದೆ ಎಂದು ಆಯುಕ್ತ ಮಂಜುನಾಥ ಹೇಳಿದರು.

30*40 ನಿವೇಶನದಲ್ಲಿ ಶೇ.15 ರಷ್ಟು ನಿಯಮ ಮೀರಿ ನಿರ್ಮಾಣ ಮಾಡಿದ್ದರೆ ಓಸಿ ಸಿಸಿ ನೀಡಲ್ಲ. ಅದರೊಳಗೆ ಇದ್ದರೆ ದಂಡ ಕಟ್ಟಿದರೆ ಮಾತ್ರ ನೀಡಲಿದೆ.

ನಗರದ ರಸ್ತೆಗಳ ಅತಿಕ್ರಮಣದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಮೇಯರ್ ಪಿ.ಗಾದೆಪ್ಪ ಮಾಸ್ಟರ್ ಪ್ಲಾನ್ ರೋಡ್ ಗೆ ಈ ತಿಂಗಳ ಅವಧಿಯಲ್ಲಿ ಟೆಂಡರ್ ಆಗಲಿದೆಂದರು.

ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಅವ್ವಾರು ಮಂಜುನಾಥ ಮೇಯರ್ ಮತ್ತು ಆಯುಕ್ತರಿಗೆ. .ಎ ಮತ್ತು ಬಿ ಖಾತೆ ನವೀಕರಣ ಸುಲಭಗೊಳಿಸಬೇಕು. ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ವಾರ್ಡ್ ವಾರು ತಂಡ ರಚಿಸಿ. ಬೀದಿ ದೀಪಗಳು ಹಗಲು ವೇಳೆ ಉರಿಯುತ್ತಿವೆ ಇದನ್ನು ನಿಯಂತ್ರಿಸಬೇಕು.

ಚೇಂಬರ್ ಕಟ್ಟಡದ ಮುಂದಿನ ರಸ್ತೆ ಅಭಿವೃದ್ಧಿ ಪಡಿಸಿ. ಕೈಗಾರಿಕಾ ಪ್ರದೇಶದಲ್ಲಿ ನೀರು, ಬೀದಿ ದೀಪ ಸೌಲಭ್ಯ ಒದಗಿಸಿ. ತೆರಿಗೆ ಕೇಳುವುದಷ್ಟೇ ಅಲ್ಲ. ಸೌಲಭ್ಯ ಸಹ ನೀಡಿ. ಆಸ್ತಿ, ಕುಡಿಯುವ ನೀರು, ಒಳ ಚರಂಡಿ ತೆರಿಗೆ ಪಾವತಿಯನ್ನು ಆನ್ ಲೈನ್ ನಲ್ಲಿ ಮಾಡಲು ಅವಕಾಶ ಕಲ್ಪಿಸಿ ಎಂದು ಮನವಿ ಮಾಡಿದರು.

ಕೈಗಾರಿಕಾ ಸಮಿತಿಯ ಅಧ್ಯಕ್ಷ ವಿ.ರಾಮಚಂದ್ರ ಮಾತನಾಡಿ, ಕೈಗಾರಿಕಾ ಪ್ರದೇಶದಲ್ಲಿ ಒಂದು ಹನಿ ನೀರಿಲ್ಲ. ಗುಗ್ಗರಹಟ್ಟಿಯಿಂದ ಕಾಲಯವೆ ವರೆಗೆ ಬೀದಿ ದೀಪ ಇಲ್ಲ. ಹಲವು ರಸ್ತೆಗಳು ಹಾಳಾಗಿದ್ದರೂ ದುರಸ್ಥಿ ಮಾಡಿಲ್ಲ. ತೆರಿಗೆ ಕಟ್ಟಿ ಎಲ್ಲಾ ಸೌಲಭ್ಯ ಕೊಡುವುದಾಗಿ ಹೇಳಿತ್ತು. ಆದರೆ ಏನೂ ಮಾಡಲಿಲ್ಲ ಎಂದರು.

ಕೆ.ಎಂ.ಶಿವಮೂರ್ತಿ ಮಾತನಾಡಿ, ಕಳೆದ 40 ವರ್ಷದಿಂದ ಕೈಗಾರಿಕಾ ಪ್ರದೇಶಕ್ಕೆ ನೀರಿನ ಸರಬಾರು ಏಕಿಲ್ಲ. ನಮ್ಮದು ಪಾಲಿಕೆಗೆ ಹಣ ನೀಡುವ ಮರ ಆದರೆ ಅದಕ್ಕೆ ನೀರಿಲ್ಲ ಎಂದರೆ ಹೇಗೆಂದರು. ಅಲ್ಲದೆ ಇಲ್ಲಿ ಒಂದು ಫೈರ್ ಸ್ಟೇಷನ್ ಆಗಬೇಕು ಎಂದರು.

ಹಿರಿಯ ಉಪಾಧ್ಯಕ್ಷ ಎಸ್.ದೊಡ್ಡನಗೌಡ ಮಾತನಾಡಿ. ಕೈಗಾರಿಕಾ ಪ್ರದೇಶದಲ್ಲಿ ಓವರ್ ಹೆಡ್ ಟ್ಯಾಂಕ್ ಇದೆ ಆದರೆ ನೀರಿಲ್ಲ ಎಂದರು. ಪ್ರತಿ ಕೈಗಾರಿಕೆಯಿಂದ 3 ರಿಂದ 5 ಲಕ್ಷ ರೂ ತೆರಿಗೆ ಕೊಟ್ಟರೂ ಪಾರಂ 2 ಮಾತ್ರ ಕಳೆದ ಐದು ವರ್ಷದಿಂದ ಕೇಳಿದರೂ ಯಾಕೆ ಕೊಡಲ್ಲ ಎಂದರು.

# ಕ್ರಿಕೆಟ್ ಪಂದ್ಯಾವಳಿ ಉದ್ಘಾಟನೆ: ಮಾದಕ ವಸ್ತು ಮುಕ್ತ ಜಾಗೃತಿ ಅಭಿಯಾನ




• **ಮಲ್ಲಮ್ಮ ನುಡಿ ವಾರ್ತೆ ಕಮಲನಗರ:**

ತಾಲೂಕಿನ ತೋರಣಾ ಗ್ರಾಮದಲ್ಲಿ ಕ್ರಿಕೆಟ್ ಪಂದ್ಯಾವಳಿ ಉದ್ಘಾಟನೆ ಹಾಗೂ ಮಾದಕ ವಸ್ತು ಮುಕ್ತ ಸಮಾಜಕ್ಕಾಗಿ ಜಾಗೃತಿ ಅಭಿಯಾನಕ್ಕೆ ಕಮಲನಗರ ಸಿ.ಪಿ.ಐ ಶ್ರೀಕಾಂತ ಅಲ್ಲಾಪುರೆ ಅವರು ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು ಯುವಜನತೆ ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರ ಜೊತೆಗೆ ಮಾದಕ ವ್ಯಸನಗಳಂತಹ ಸಾಮಾಜಿಕ ಪಿಡುಗುಗಳಿಂದ ದೂರವಿರಬೇಕು.

ಇಂದಿನ ಯುವ ಪೀಳಿಗೆಯು ಮಾದಕ ದ್ರವ್ಯಗಳ ದಾಸರಾಗಿ ತಮ್ಮ ಭವಿಷ್ಯವನ್ನು ಹಾಳುಮಾಡಿಕೊಳ್ಳುತ್ತಿದ್ದಾರೆ. ಸದೃಢ ಸಮಾಜದ ನಿರ್ಮಾಣಕ್ಕಾಗಿ ಪ್ರತಿಯೊಬ್ಬರೂ ಮಾದಕ ವಸ್ತುಗಳ ವಿರುದ್ಧ ಧ್ವನಿ ಎತ್ತಬೇಕು ಎಂದು ಸಿ.ಐ.ಪಿ ಹೇಳಿದರು.

ಎಸ್.ಪಿ.ಐ ಆಶಾ ರಾಠೋಡ ಮಾತನಾಡಿ, ಕ್ರೀಡೆ ಯಿಂದ ನಮ್ಮ ಶರೀರ ಅರೋಗ್ಯ ವಾಗಿ ಇರುತ್ತದೆ. ಮತ್ತು ನಮ್ಮ ಆರೋಗ್ಯ ಯಾವಾಗೂ ಚೆನ್ನಾಗಿ ಇರಬೇಕೆಂದರೆ ಮಾದಕ ವ್ಯಸನಗಳಂತಹ ಸಾಮಾಜಿಕ ಪಿಡುಗುಗಳಿಂದ ದೂರವಿರಬೇಕು ಎಂದು ಹೇಳಿದರು.

ಗ್ರಾಮ ಪಂಚಾಯತ್ ಅಧ್ಯಕ್ಷರು ಸುನಿಲ ಶೀಗರೆ ಅಧ್ಯಕ್ಷ ಭಾಷಣ ನೀಡಿದರು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿ ಮಲ್ಲೇಶ ಹಾಗೂ ಗ್ರಾಮ ಪಂಚಾಯತ ಸದಸ್ಯರು, ಪಂದ್ಯಾವಳಿ ಆಯೋಜಕರಾದ ನಾಮದೇವ ಪಾಂಚವಾರೆ, ಸುನಿಲ ಶೀಗರೆ, ಚಂದ್ರಕಾಂತ ಕಾಳೆ, ಪವನ ಪಾಂಚವಾರೆ, ವಿಜಯಕುಮಾರ ತೇಗಂಪುರೆ, ಸೇರಿದಂತೆ ಗ್ರಾಮಸ್ಥರು, ಕ್ರೀಡಾ ಪ್ರೇಮಿಗಳು ಸೇರಿದರು.

# ವಿವಿಧ ಕಾಮಗಾರಿಗಳಿಗೆ ಶಾಸಕ ನಾರಾ ಭರತ್ ರೆಡ್ಡಿ ಚಾಲನೆ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ನಗರ ಶಾಸಕ ನಾರಾ ಭರತ್ ರೆಡ್ಡಿಯವರು ಬಸವೇಶ್ವರ ನಗರದ ಸಂಗಮೇಶ್ವರ ದೇವಸ್ಥಾನದ ಅಭಿವೃದ್ಧಿ ಹಾಗೂ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಅಂದಾಜು 95 ಲಕ್ಷ ರೂ.ಗಳ ಅನುದಾನದಡಿ ನಿನ್ನೆ ಭೂಮಿ ಪೂಜೆ ನೆರವೇರಿಸಿದರು.

ವಿ. ವಿ. ಸಂಘದ ಜಂಟಿ ಕಾರ್ಯದರ್ಶಿ ಯಾಳ್ಪಿ ಪಂಪನಗೌಡ, ಕೆರನಹಳ್ಳಿ ಚಂದ್ರಶೇಖರ್, ಸಂಗಮೇಶ್ವರ ದೇವಸ್ಥಾನದ ಕಮಿಟಿಯ ಚಿದಾನಂದಪ್ಪ, ಕಟ್ಟೆಗೌಡ, ಚಂದ್ರಮೌಳಿ, ಮಹೇಶ್, ಜಯದೇವಗೌಡ, ಸುರೇಶ್ ಸ್ವಾಮಿ, ವಾಸು ರೆಡ್ಡಿ, ಗುರುಸಿದ್ಧ, ಸುರೇಖಾ ಮಲ್ಲನಗೌಡ, ಎಸ್. ಮಲ್ಲನಗೌಡ, ಮಾಜಿ ಮೇಯರ್ ರಾಜೇಶ್ವರಿ, ಪಾಲಿಕೆಯ ಸದಸ್ಯರಾದ ಮಿಂಚು ಸೀನ ಮತ್ತಿತರರು ಹಾಜರಿದ್ದರು. ಅದೇ ರೀತಿ ವಾರ್ಡ್ ಸಂಖ್ಯೆ 8ರ ವ್ಯಾಪ್ತಿಯಲ್ಲಿ 34.52 ಕೋಟಿ ರೂ.ಗಳ ವೆಚ್ಚದಲ್ಲಿ ಕಲ್ಯಾಣದುರ್ಗ ರಸ್ತೆಯ ಸಿಸಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು. ಈ ಸಂದರ್ಭ ವಾರ್ಡಿನ ಸದಸ್ಯ ರಾಮಾಂಜನೇಯ ಮಾಜಿ ಮೇಯರ್ ಎಂ.ರಾಜೇಶ್ವರಿ, ಮುಲ್ಲಂಗಿ ನಂದೀಶ್, ಪಾಲಿಕೆಯ ಸದಸ್ಯರಾದ ಮಿಂಚು ಸೀನಾ, ಎಂ.ಪ್ರಭಂಜನಕುಮಾರ್, ವೆಂಕಟೇಶ ಹೆಗಡೆ, ಹೊನ್ನಪ್ಪ. ಮತ್ತಿತರರು ಇದ್ದರು. ಮಹಾನಂದಿಕೊಟ್ಟಂನಲ್ಲಿ 50 ಲಕ್ಷ ರೂ.ಗಳ ಅನುದಾನದಡಿ ಸಮುದಾಯ ಭವನ ನಿರ್ಮಾಣ ಕಾಮಗಾರಿಗೂ ಸಹ ಭರತ್ ರೆಡ್ಡಿಯವರು ಭೂಮಿ ಪೂಜೆ ನೆರವೇರಿಸಿದರು. ಈ ವೇಳೆ ಮೇಯರ್ ಪಿ.ಗಾದೆಪ್ಪ ಮತ್ತಿತರರು ಇದ್ದರು ಬಳಿಕ ಬಳ್ಳಾರಿ ಜಿಲ್ಲಾ ಖನಿಜ ಪ್ರತಿಷ್ಠಾನದಿಂದ ಬಳ್ಳಾರಿ ನಗರದ ಮುನಿಸಿಪಲ್ ಕಾಲೇಜು ಆವರಣದಲ್ಲಿ ನಿರ್ಮಿಸಲಾಗಿರುವ ನಾಲ್ಕು ಶಾಲಾ ಕೊಠಡಿಗಳನ್ನು ಉದ್ಘಾಟಿಸಿದರು. ಈ ವೇಳೆ ಕಾಲೇಜು ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಲಕ್ಷ್ಮಣ ಹಳ್ಳದಮನಿ, ಪ್ರಾಂಶುಪಾಲ ಸುಂಕಪ್ಪ ಮೊದಲಾದವರು ಇದ್ದರು.

## ಎನ್.ಎಸ್.ಎಸ್ ರಾಜ್ಯಮಟ್ಟದ ಯುವಜನೋತ್ಸವ

# ಯುವಶಕ್ತಿಯಿಂದಲೇ ಸಂಸ್ಕೃತಿಯ ಉಳಿವು: ಸಂಜೀವ ಚವ್ಹಾಣ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಭಾರತೀಯ ಸಂಸ್ಕೃತಿ ಜಗತ್ತಿನಲ್ಲಿಯೇ ಶ್ರೀಮಂತ ಸಂಸ್ಕೃತಿಯಾಗಿದ್ದು, ಪರಂಪರೆ, ಸಂಸ್ಕೃತಿ ಉಳಿಸುವ ಜವಾಬ್ದಾರಿ ಯುವ ಶಕ್ತಿಯ ಮೇಲಿದೆ ಎಂದು ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಜಂಟಿ ನಿರ್ದೇಶಕ ಸಂಜೀವ ಚವ್ಹಾಣ ಹೇಳಿದರು.

ರಾಷ್ಟ್ರೀಯ ಸೇವಾ ಯೋಜನಾ ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ತಾಂತ್ರಿಕ ಶಿಕ್ಷಣ ಇಲಾಖೆ ಹಾಗೂ ಬಿ.ವಿ.ವಿ.ಎಸ್ ಪಾಲಿಟೆಕ್ನಿಕ್ ಸಂಸ್ಥೆ ಸಹಯೋಗದಲ್ಲಿ ಮಂಗಳವಾರ ಬಿ.ವಿ.ವಿ.ಸಂಘದ ನೂತನ ಸಭಾಭವನದಲ್ಲಿ ನಡೆದ ರಾಷ್ಟ್ರೀಯ ಸೇವಾ ಯೋಜನೆಯ ರಾಜ್ಯಮಟ್ಟದ ಯುವಜನೋತ್ಸವಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಇತ್ತಿಚಿನ ದಿನಗಳಲ್ಲಿ ಸೋಷಿಯಲ್ ಮಿಡಿಯಾ ಹಾಗೂ ಮೊಬೈಲ ಹಾವಳಿಯಿಂದ ಯುವ ಜನತೆ ದಾರಿ ತಪ್ಪುತ್ತಿದ್ದಾರೆ, ಪಾಶ್ಚಿಮಾತ್ಯರು ಭಾರತೀಯ ಸಂಸ್ಕೃತಿಯನ್ನು ಮೆಚ್ಚಿಕೊಂಡು ಪ್ರೀತಿಸಿ ನಮ್ಮ ಸಂಸ್ಕೃತಿಯನ್ನೆ ಆಚರಿಸುತ್ತಿರುವ ಸಂದರ್ಭದಲ್ಲಿ ಭಾರತಿಯರು ಪಾಶ್ಚಿಮಾತ್ಯತೆಯನ್ನು ಅಳವಡಿಸಿಕೊಳ್ಳುತ್ತಿರುವುದು ವಿಷಾದದ ಸಂಗತಿ ಎಂದರು.

ಮುಖ್ಯ ಅತಿಥಿ ಭಾರತ ಸರಕಾರದ ಎನ್.ಎಸ್.ಎಸ್, ಪ್ರಾಂತಿಯ ನಿರ್ದೇಶಕ ಗಿರಿಧರ ಉಪಾಧ್ಯಯ ಮಾತನಾಡಿ, ಸಮಾಜ ಸೇವೆಯ ಮುಖಾಂತರ ಮಾನವನ ವ್ಯಕ್ತಿತ್ವ ವಿಕಸನಗೊಳಿಸುವದೇ ಎನ್.ಎಸ್.ಎಸ್ ನ ಉದ್ದೇಶವಾಗಿದೆ. ಇದಕ್ಕೆ ಎಲ್ಲರ ಭಾಗವಹಿಸುವಿಕೆ ಮುಖ್ಯವಾಗಿದೆ ಎಂದರು.

ರಾಜ್ಯ ಎನ್.ಎಸ್.ಎಸ್.ಅಧಿಕಾರಿ ಡಾ.ಪ್ರತಾಪ ಲಿಂಗಯ್ಯ ಮಾತನಾಡಿ, ಶಿಕ್ಷಣದ ಜೊತೆ ಸೇವೆ, ಸೇವೆ ಜೊತೆಗೆ ವ್ಯಕ್ತಿತ್ವ ವಿಕಸನ ಎಂಬ ದ್ಯೇಯೋದ್ದೇಶವನ್ನು ಇಟ್ಟುಕೊಂಡು 1969 ರಲ್ಲಿ ಸ್ಥಾಪಿತವಾದ ಎನ್.ಎಸ್.ಎಸ್ ಇಡೀ ದೇಶದಲ್ಲಿ ಇಂದು ಇಡಿ ದೇಶದಲ್ಲಿ 45 ಲಕ್ಷಕ್ಕೂ ಅಧಿಕ ಸ್ವಯಂ ಸೇವಕರನ್ನು ಹೊಂದಿದ ಸಂಘಟನೆಯಾಗಿದೆ.

ಕರ್ನಾಟಕದಲ್ಲಿ 6.50 ಲಕ್ಷ ಸ್ವಯಂ ಸೇವಕರನ್ನು ಹೊಂದಿದೆ ಎಂದು ಹೇಳಿದರು.

ಅಧ್ಯಕ್ಷತೆವಹಸಿ ಮಾತನಾಡಿದ ಬಿವಿವಿ ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ, ಶಿಕ್ಷಣವೇ ಬಾಳಿನ ಬೆಳಕು. ನಮ್ಮ ಪರಿಸರ, ನಮ್ಮ ಗ್ರಾಮವನ್ನು ಶುಚಿಯಾಗಿಟ್ಟುಕೊಂಡು ಆರೋಗ್ಯಪೂರ್ಣವಾಗಿ ಬಾಳುವಂತೆ ಪ್ರಜ್ಞೆ ಮೂಡಿಸಲು ಸಿಕ್ಕಿರುವ ಸದಾವಕಾಶ ಈ ಶಿಬಿರವಾಗಿದೆ. ಸಮೃದ್ಧ ಭಾರತ ನಿರ್ಮಾಣದಲ್ಲಿ ಎಲ್ಲರೂ ಕೈಜೋಡಿಸಬೇಕು ಎಂದರು.

ರಾಷ್ಟ್ರೀಯ ಸೇವಾ ಯೋಜನೆಯ ರಾಜ್ಯಸಂಯೋಜಕ ಡಾ.ಗುರುಪ್ರಸಾದ ಹೂಗಾರ, ಸಂಘದ ಆಡಳಿತಾಧಿಕಾರಿ ಪ್ರೊ.ವಿ.ಆರ್.ಶಿರೋಳ, ಪ್ರಾಚಾರ್ಯ ಎಸ್.ಎಸ್.ಹುಬ್ಬಳ್ಳಿ, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿಗಳಾದ ಶ್ರೀನಿವಾಸ ಎಂ ಹಾಗೂ ಸುನೀಲ ರಾಠೋಡ ವೇದಿಕೆ ಮೇಲೆ ಇದ್ದರು.

ಸಮೃದ್ಧಿ ಹಾಗೂ ಸೃಷ್ಟಿ ಪ್ರಾರ್ಥಿಸಿದರು, ಪ್ರತಿಕ್ಷಾ ಉಗರಗೋಳ ಎನ್.ಎಸ್.ಎಸ್ ಗೀತೆ ಪ್ರಸ್ತುತ ಪಡಿಸಿದರು. ಸ್ಮಿತಾ ಪೂಜಾರ ವಂದಿಸಿದರು. ಎಲ್.ಜಿ.ವೈದ್ಯ ಹಾಗೂ ಸಂಗೀತಾ ಶೆಟ್ಟರ ನಿರೂಪಿಸಿದರು.

ಯುವಜನೋತ್ಸವದಲ್ಲಿ ರಾಜ್ಯದ ವಿವಿಧ 12 ವಿಶ್ವವಿದ್ಯಾಲಯಗಳಿಂದ ಆಯ್ದ 115 ವಿದ್ಯಾರ್ಥಿಗಳು ಮತ್ತು 10 ಜನ ಎನ್.ಎಸ್.ಎಸ್.ಅಧಿಕಾರಿಗಳು ಭಾಗವಹಿಸಿದ್ದಾರೆ. ನಾಲ್ಕು ದಿನಗಳ ಯುವಜನೋತ್ಸವದಲ್ಲಿ ಶ್ರಮದಾನ, ವಿಶೇಷ ಉಪನ್ಯಾಸ, ಸಂಸ್ಕೃತಿಕ, ಸಾಹಿತ್ಯಿಕ, ಸಂಗೀತ, ಮೌಲ್ಯಮಾಪನ ಕಾರ್ಯಕ್ರಮಗಳು ಜರುಗಲಿವೆ.

## ಉಪ ಚುನಾವಣೆ, ಮತಗಟ್ಟೆ ಅಧಿಕಾರಿಗಳ ಸಭೆ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ಉಪ ಚುನಾವಣೆಗೆ ಸಂಬಂಧಿಸಿದಂತೆ, ಜಿಲ್ಲಾ ಚುನಾವಣಾಧಿಕಾರಿಗಳೂ ಆಗಿರುವ ಜಿಲ್ಲಾಧಿಕಾರಿ ಸಂಗಪ್ಪ ಅವರ ಅಧ್ಯಕ್ಷತೆಯಲ್ಲಿ ನವನಗರದ ಡಾ.ಬಿ.ಆರ್.ಅಂಬೇಡ್ಕರ ಭವನದಲ್ಲಿ ಮತಗಟ್ಟೆ ಮಟ್ಟದ ಅಧಿಕಾರಿಗಳ ಸಭೆ ಜರುಗಿತು.

ಜಿಲ್ಲಾ ಚುನಾವಣಾಧಿಕಾರಿಗಳು ಮತದಾರರ ಪಟ್ಟಿಯಲ್ಲಿ ಯಾವುದೇ ಲೋಪದೋಷಗಳು ಇಲ್ಲದಂತೆ ಮತದಾರಪಟ್ಟಿಯನ್ನು ಪರಿಶೀಲಿಸಬೇಕು. ಮತಗಟ್ಟೆ ಅಧಿಕಾರಿಗಳು ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಅಚ್ಚುಕಟ್ಟಾಗಿ ಕಾರ್ಯವನ್ನು ನಿರ್ವಹಿಸಬೇಕು. ಮತದಾರರ ಮಟ್ಟಿಯಲ್ಲಿ ಮರಣ ಹೊಂದಿದವರ ವಿವರಗಳನ್ನು ಪರಿಶೀಲಿಸುವ ಕಾರ್ಯವಾಗಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಮತದಾರರ ಪಟ್ಟಿಯಲ್ಲಿ 85ಕ್ಕಿಂತ ಹೆಚ್ಚಿನ ಹಾಗೂ 100 ವಯಸ್ಸಿನ ಮತದಾರರನ್ನು ಪರಿಶೀಲಿಸುವುದರ ಜೊತೆಗೆ ಮತದಾರರ ಪಟ್ಟಿಯಲ್ಲಿ ಮತದಾರರ ವಿವರಗಳನ್ನು ಮ್ಯಾಪಿಂಗ್ ಮಾಡುವ ಕುರಿತು ಕ್ರಮವಹಿಸಬೇಕು. ಮತಗಟ್ಟೆ ಮಟ್ಟದ ಅಧಿಕಾರಿಗಳು ಚುನಾವಣಾ ಪ್ರಕ್ರಿಯೆಯ ಒಂದು ಅಂಗವಾಗಿರುವದರಿಂದ ಸದರಿ ಅಧಿಕಾರಿಗಳು ಚುನಾವಣೆಯಲ್ಲಿ ಮಹತ್ವದ ಕಾರ್ಯವನ್ನು ನಿರ್ವಹಿಸುತ್ತಿದ್ದು, ಚುನಾವಣೆಯು ಸುಗಮವಾಗಿ ಸಾಗಲು ತಮ್ಮ ಪಾತ್ರ ಸಹ ಮಹತ್ವವಾಗಿದೆ. ಯಾವುದೇ ರೀತಿಯಲ್ಲಿ ಲೋಪವಾಗದಂತೆ ಕ್ರಮವಹಿಸಲು ಸೂಚಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎ.ಸಿ.ಮನ್ನಿಕೇರಿ, ತಹಶೀಲ್ದಾರ ವಾಸುದೇವಸ್ವಾಮಿ.ಕ್ಷೇತ್ರಶಿಕ್ಷಣಾಧಿಕಾರಿ ಜಾಸ್ಮೀನ್ ಕಿಲ್ಲೇದಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಶಿಕ್ಷಣ ವ್ಯಾಪಾರೀಕರಣವಾಗದಿರಲಿ: ಅರವಿಂದ ಲಿಂಬಾವಳಿ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಇಂದುಶಿಕ್ಷಣವ್ಯಾಪಾರೀಕರಣವಾಗುತ್ತಿರುವುದರಿಂದ ಬಡ ವಿದ್ಯಾರ್ಥಿಗಳು ಅವಕಾಶಗಳಿಂದ ವಂಚಿತರಾಗುತ್ತಿದ್ದಾರೆ. ಆದರೆ ಇಲ್ಲಿನ ಸಕ್ರಿ ಹೈಸ್ಕೂಲ ಇದಕ್ಕೊಂದು ಅಪವಾದ. ಅದು ತನ್ನ ಶ್ರೇಷ್ಠ ಗುಣಮಟ್ಟದ ಶಿಕ್ಷಣದಿಂದ ನಾಡಿನ ಗಮನ ಸೆಳೆದ ಶಾಲೆಯಾಗಿದೆ ಎಂದು ಮಾಜಿ ಸಚಿವ ಹಾಗೂ ಶಾಲೆಯ ಹಳೆಯ ವಿದ್ಯಾರ್ಥಿ ಅರವಿಂದ ಲಿಂಬಾವಳಿ ಹೇಳಿದರು.

ನವನಗರದ ಡಾ.ಎಚ್.ಎಂ.ಶಿರೂರ ಶಿಕ್ಷಣ ಕೇಂದ್ರದ ಆವರಣದಲ್ಲಿನ ವಿದ್ಯಾ ಪ್ರಸಾರಕ ಮಂಡಳದ ಅಮೃತಾ ಇಂಟರನ್ಯಾಶನಲ್ ಸ್ಕೂಲನಲ್ಲಿ ದಿ.ಭೀಮಾಬಾಯಿ ಮತ್ತು ದಿ.ವೆಂಕಟರಾವ್ ಲಿಂಬಾವಳಿ ಸ್ಮರಣಾರ್ಥ ನೂತನ ಕಟ್ಟಡದ ಭೂಮಿಪೂಜೆ ಹಾಗೂ ಅಡಿಗಲ್ಲು ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಅನ್ನ ದಾನ ಮತ್ತು ವಿದ್ಯಾದಾನ ವ್ಯಾಪಾರವಾಗಬಾರದು ಎಂಬುದು ನಮ್ಮ ಸಂಸ್ಕೃತಿಯಲ್ಲಿದೆ. ಅದಕ್ಕನುಗುಣವಾಗಿ ವಿದ್ಯಾ ಪ್ರಸಾರಕ ಮಂಡಳವು ವಿದ್ಯಾರ್ಥಿಗಳ ಮೇಲೆ ಹಣಕಾಸಿನ ಹೊರೆ ಹಾಕದೇ ದಾನಿಗಳ ಮೂಲಕ ಅಭಿವೃದ್ಧಿ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಿರುವುದು ಶ್ಲಾಘನೀಯ ಎಂದರು.

ತಾವು ತಮ್ಮ ತಂದೆ–ತಾಯಿಯವರ ನೆನೆಪಿನಲ್ಲಿ ತಾವು ಕಲಿತ ಶಾಲೆಗೆನೇ ದಾನ ಮಾಡಿದರೆ ಅದರ ಫಲ ಕೊನೆಯ ವ್ಯಕ್ತಿಗೂ ತಲುಪಬಲ್ಲದು ಎಂಬ ವಿಶ್ವಾಸದಿಂದ ಈ ನಿಯೋಜಿತ ಕಟ್ಟಡಕ್ಕೆ ದಾನ ನೀಡುತ್ತಿರುವುದಾಗಿ ಲಿಂಬಾವಳಿ ತಿಳಿಸಿದರು.

ಇಂದು ಸಮಾಜದಲ್ಲಿ ಶಿಕ್ಷಣಕ್ಕೆ ನೆರವು ನೀಡುವವರು ಸಾಕಷ್ಟು ಜನರಿದ್ದಾರೆ. ಒಳ್ಳೆ ಸಂಸ್ಥೆ ಎಂಬುದು ಗೊತ್ತಾದರೆ ಸಹಜವಾಗಿಯೇ ಆರ್ಥಿಕ ನೆರವು ನೀಡಲು ಮುಂದೆ ಬರುತ್ತಾರೆ. ಅಂತವರನ್ನೂ ಸಂಪರ್ಕಿಸುವಂತೆ ಸಚಿವ ಲಿಂಬಾವಳಿ ಸಂಸ್ಥೆಗೆ ಸಲಹೆ ನೀಡಿದರು.




ಪಂ.ಬಿಂದುಮಾಧವಾಚಾರ್ಯನಾಗಸಂಪಿಗೆ ಮತ್ತು ಪಂ.ಭೀಮಸೇನಾಚಾರ್ಯ ಪಾಂಡುರಂಗಿ, ಲಿಂಬಾವಳಿಯವರ ಸಮಾಜಮುಖಿ ಕಾರ್ಯ, ತಂದೆ–ತಾಯಿಯ ಸ್ಮರಣಾರ್ಥ ಕಲಿತ ಶಾಲೆಗೆ ನೀಡಿದದಾನ ಶ್ರೇಷ್ಠ ಕಾರ್ಯವಾಗಿದೆ ಎಂದು ಬಣ್ಣಿಸಿದರು.

ವಿದ್ಯಾ ಪ್ರಸಾರಕ ಮಂಡಳ ನಡೆದು ಬಂದದಾರಿ ಮತ್ತು ಸಕ್ರಿ ಶಾಲೆಯಲ್ಲಿನ ಲಿಂಬಾವಳಿಯವರ ಜೊತೆಗಿನ 'ಒಡನಾಟವನ್ನು ಮೆಲಕು ಹಾಕಿದ ಪದವಿ ಕಾಲೇಜಿನ ಪ್ರಾಚಾರ್ಯ ಶ್ರೀನಿವಾಸ ನರಗುಂದ,

ಶಿಕ್ಷಣದ ಉನ್ನತಿ ಹಾಗೂ ಪ್ರಗತಿಯ ಬಗೆಗಿನ ಕಾಳಜಿಯ ಪ್ರತೀಕವಾಗಿರುವ ಹಳೆಯ ವಿದ್ಯಾರ್ಥಿಗಳ ಧನ ಸಹಾಯ ಇನ್ನಷ್ಟು ಉತ್ತಮ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸುವಲ್ಲಿ ಸಹಕಾರಿಯಾಗುತ್ತದೆ ಎಂದರು.

ಗೌರವ ಕಾರ್ಯದರ್ಶಿ ಡಾ.ಗಿರೀಶ ಮಸೂರಕರ ಸ್ವಾಗತಿಸಿದರು. ಸದಸ್ಯ ಡಾ.ಪಿ.ಆರ್.ಜೋಶಿ ವಂದಿಸಿದರು. ಸಂಸ್ಥೆಯ ಅಧ್ಯಕ್ಷ ವಿ.ವಾಯ್. ಕವಠೇಕರ, ಹಿತೇಶ ಪಟೇಲ ವೇದಿಕೆ ಮೇಲಿದ್ದರು. ಪಂ. ಆದಿಶೇಷಾಚಾರ್ಯ ಯಲಗೂರ, ಸದಸ್ಯರಾದ ಎಸ್.ಕೆ.ಕುಲಕರ್ಣಿ, ಜಿ.ಆರ್.ದೇಶಪಾಂಡೆ, ಡಾ.ಜೆ.ಎಸ್. ದೇಶಪಾಂಡೆ, ವಿ.ಆರ್.ಬುರ್ಲಿ, ಜ್ಯೋತಿಕಿರಣ ದಾಸ, ಡಾ.ಸಂದೀಪ ಹುಯಿಲಗೋಳ, ಡಾ.ಮೀನಾ ಚಂದಾವರಕರ, ಪಿ.ಎ.ಪರ್ವತೀಕರ, ಹಳೆಯ ವಿದ್ಯಾರ್ಥಿಗಳು, ಹಿತೈಷಿಗಳು ಪಾಲ್ಗೊಂಡಿದ್ದರು.

## ವಿದ್ಯಾರ್ಥಿ ಜೀವನದಲ್ಲಿ ಶಿಸ್ತು ಪಾಲನೆ ಅಗತ್ಯ: ಸುತಾರ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ವಿದ್ಯಾರ್ಥಿಗಳು ದೈನಂದಿನ ವಿದ್ಯಾಭ್ಯಾಸದ ಜೊತೆಗೆ ಶಿಸ್ತು ಪರಿಪಾಲನೆ ಮಾಡುವುದು ಅತ್ಯಗತ್ಯವಾಗಿದ್ದು ಇದು ಮುಂದಿನ ಜೀವನಕ್ಕೆ ಸಹಕಾರಿಯಾಗುತ್ತದೆ ಎಂದು ಬಾಗಲಕೋಟೆ ಡಿವೈಎಸ್ಪಿ ಗಜಾನನ ಸುತಾರ ಹೇಳಿದರು.

ಶಿಗಿಕೇರಿ ಕ್ರಾಸ್‌ನಲ್ಲಿರುವ ದೇವಿಬಾಯಿ ಐಟಿಐ ಕಾಲೇಜು ಮತ್ತು ಧರ್ತಿ ಪಬ್ಲಿಕ್ ಶಾಲೆಯಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಯುವಕರು ಕೆಟ್ಟ ವ್ಯಸನಗಳಿಗೆ ಬಲಿಯಾಗದೆ ತಂದೆ ತಾಯಿಗಳಿಗೆ ಒಳ್ಳೆಯ ಹೆಸರು ತರಲು ಶ್ರಮಿಸಬೇಕಾಗಿದೆ ಎಂದರು.

ವಿದ್ಯಾಭ್ಯಾಸ ಬಿಟ್ಟು ಬರೀ ಮೊಬೈಲ್ ದಾಸರಾಗಬಾರದು. ತಂದೆ ತಾಯಿಗಳು ಕಷ್ಟಪಟ್ಟು ತಮ್ಮನ್ನು ಓದಿಸುತ್ತಿರುವುದನ್ನು ಅರ್ಥ ಮಾಡಿಕೊಂಡು ಕಲಿಯಬೇಕು. ಅಂದಾಗ ಮಾತ್ರ ಅವರ ಬೆವರಿನ ಶ್ರಮಕ್ಕೆ ಪ್ರತಿಫಲ ದೊರೆಯುತ್ತದೆ ಎಂದ ಸುತಾರ, ವಿದ್ಯಾರ್ಥಿಗಳು ಸಂಚಾರದ ವೇಳೆ ಸಂಚಾರಿ ನಿಯಮಗಳನ್ನು ಪಾಲಿಸಬೇಕು, ಹೆಲ್ಮೆಟ್, ಸೀಟ್‌ಬೆಲ್ಟ್ ಧರಿಸಿ ತಮ್ಮ ಪ್ರಾಣವನ್ನು ಉಳಿಸಿಕೊಳ್ಳಬೇಕು ಎಂದು ಹೇಳಿದರು.

ಐಟಿಐ ಕಾಲೇಜು ಮತ್ತು ಧರ್ತಿ ಪಬ್ಲಿಕ್ ಶಾಲೆಯಲ್ಲಿನ ಸ್ವಚ್ಛತೆ, ಸುರಕ್ಷತೆ ಹಾಗೂ ವಿದ್ಯಾರ್ಥಿಗಳ ಶಿಸ್ತನ್ನು ಕಂಡು ಸುತಾರ ಮೆಚ್ಚುಗೆ ವ್ಯಕ್ತಪಡಿಸಿದರು. ಈ ವೇಳೆ ಸಂಸ್ಥೆಯ ಅಧ್ಯಕ್ಷ ಎಸ್.ಆರ್.ರಾಠೋಡ, ಉಪಾಧ್ಯಕ್ಷ ಅರ್ಜುನ್ ಚವ್ಹಾಣ, ಕಾರ್ಯದರ್ಶಿ ಸಂತೋಷ ಲಮಾಣಿ, ಐಟಿಐ ಕಾಲೇಜಿನ ಪ್ರಾಂಶುಪಾಲ ರವಿ ಲಮಾಣಿ, ಧರ್ತಿ ಪಬ್ಲಿಕ್ ಶಾಲೆಯ ಮುಖ್ಯಗುರುಮಾತೆ ಚಂದ್ರಕಲಾ ರಾಠೋಡ ಸೇರಿದಂತೆ ಶಿಕ್ಷಕರು ಸಿಬ್ಬಂದಿ ವರ್ಗದವರು ಇದ್ದರು.

## ಗ್ರಾಮೀಣ ವ್ಯಾಪ್ತಿಯ ವಿದ್ಯುತ್ ವ್ಯತ್ಯಯ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಬಳ್ಳಾರಿ ಗ್ರಾಮೀಣ ಜೆಸ್ಕಾಂ ವ್ಯಾಪ್ತಿಯ 220/110/11 ಕೆ.ವಿ ಅಲ್ಲೀಪುರ ಸ್ವೀಕರಣಾ ಕೇಂದ್ರದಲ್ಲಿ ಶಿಥಿಲಗೊಂಡ ಜಿ.ಒ.ಎಸ್ ಬದಲಾಯಿಸುವ ಕಾರ್ಯ ತುರ್ತಾಗಿ ಕೈಗೊಂಡಿರುವುದರಿಂದ ಫೆ.12 ರಂದು ಬೆಳಗ್ಗೆ 09 ಸಂಜೆ 06 ಗಂಟೆಯ ರವರೆಗೆ ಬಳ್ಳಾರಿ ಗ್ರಾಮೀಣ ವ್ಯಾಪ್ತಿಯಲ್ಲಿ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

*ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳಿವು:ಎಫ್–31 ಅಲ್ಲೀಪುರ ನಗರ ಪ್ರದೇಶ ಫೀಡರ್ ಮಾರ್ಗದ ಅಲ್ಲಿಪುರ, ರಾಮೇಶ್ವರಿ ನಗರ, ಬೈಪಾಸ್ ರಸ್ತೆ. ಎಫ್–32 ಐ.ಪಿ ಸೆಟ್ ಫೀಡರ್ ಮಾರ್ಗದ ಬೆಳಗಲ್ಲು, ಬೆಳಗಲ್ಲು ತಾಂಡ, ಜಾನೆಕುಂಟೆ, ಜಾನೆಕುಂಟೆ ತಾಂಡ, ಹರಗಿನದೋಣಿ, ಅಲ್ಲೀಪುರ ಕೃಷಿ ಪ್ರದೇಶಗಳು.ಎಫ್–37 ಮತ್ತು 38 ಬೆಳಗಲ್ಲು ತಾಂಡ ಕೈಗಾರಿಕೆ ಪ್ರದೇಶ ಫೀಡರ್ ಮಾರ್ಗದ ಬೆಳಗಲ್ಲು, ಬೆಳಗಲ್ಲು ತಾಂಡ, ಜಾನೆಕುಂಟೆ, ಜಾನೆಕುಂಟೆ ತಾಂಡ, ಕೈಗಾರಿಕೆ ಪ್ರದೇಶ. ಎಫ್–71 ಹರಗಿನದೋಣಿ ಎನ್.ಜೆ.ವೈ ಫೀಡರ್ ಮಾರ್ಗದ ಬೆಳಗಲ್ಲು, ಬೆಳಗಲ್ಲು ತಾಂಡ, ಜಾನೆಕುಂಟೆ, ಜಾನೆಕುಂಟೆ ತಾಂಡ, ಹರಗಿನದೋಣಿ, ಹೊನ್ನಾಳ್ಳಿ, ಹೊನ್ನಳ್ಳಿ ತಾಂಡ ಮುಂತಾದ ಗ್ರಾಮಗಳು. ಎಫ್–74 ಗೌತಮ್ ನಗರ ಎನ್.ಜೆ.ವೈ ಫೀಡರ್ ಮಾರ್ಗದ ಡಿಸಿ ನಗರ, ಶಾಂತ ನಗರ, ಆಲದಹಳ್ಳಿ, ಗೌತಮ್ ನಗರ, ಹೌಸಿಂಗ್ ಬೋರ್ಡ್ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಮತ್ತು ವಿದ್ಯುತ್ ಗ್ರಾಹಕರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕುರುಗೋಡು ಉತ್ಸವಕ್ಕೆ ಕೋಟಿಗಟ್ಟಲೆ ಹಣ ಖರ್ಚು

• **ಮಲ್ಲಮ್ಮ ನುಡಿ ವಾರ್ತೆ ಕುರುಗೋಡು(ಬಳ್ಳಾರಿ)**

ಸರ್ಕಾರದವತಿಯಿಂದ ನಡೆಯಬೇಕಾದ ಕುರುಗೋಡು ಉತ್ಸವ ಇದೀಗ ನಿಜವಾದ ಸಾರ್ವಜನಿಕ ಹಬ್ಬವಾಗದೆ, ರಾಜಕೀಯ ಪ್ರಚಾರದ ವೇದಿಕೆಯಾಗುತ್ತಿದೆಯೇ ಎಂಬ ಗಂಭೀರ ಅನುಮಾನಗಳು ಸಾರ್ವಜನಿಕರಲ್ಲಿ ಮೂಡಿವೆ. ಈ ತಿಂಗಳ 15 ಮತ್ತು 16ರಂದು ನಡೆಯಲಿರುವ ಕುರುಗೋಡು ಉತ್ಸವಕ್ಕೆ ಕೋಟಿಗಟ್ಟಲೆ ಹಣ ಖರ್ಚು ಮಾಡಲಾಗುತ್ತಿದೆ ಎನ್ನಲಾಗುತ್ತಿದ್ದರೂ, ಜನರನ್ನು ಆಹ್ವಾನಿಸುವ ವಿಚಾರದಲ್ಲಿ ಮಾತ್ರ ಅತೀ ಹಾಸ್ಯಾಸ್ಪದ ಹಾಗೂ ಅವಮಾನಕಾರಿ ಕ್ರಮ ಅನುಸ'ರಿಸಲಾಗುತ್ತಿದೆ ಎಂಬ ಗಂಭೀರ ಆರೋಪಗಳು ಕೇಳಿಬರುತ್ತಿವೆ.

5 ಗುಲಾಬಿ ಹೂವು 10 ಕರಪತ್ರ ಇದೇ ಸರ್ಕಾರದ ಆಹ್ವಾನವೇ?

ಸರ್ಕಾರಿ ಉತ್ಸವಕ್ಕೆ ಜನರನ್ನು ಕರೆತರಲು ಅಂಗನವಾಡಿ ಕಾರ್ಯಕರ್ತೆಯರನ್ನು ಬಳಸಿಕೊಂಡು, ಕೇವಲ 5 ಗುಲಾಬಿ ಹೂವು ಮತ್ತು 10 ಕರಪತ್ರಗಳನ್ನು ಹಿಡಿದು ಮನೆಮನೆಗೆ ತೆರಳಿ ಆಹ್ವಾನಿಸುವಂತೆ ಮೇಲಧಿಕಾರಿಗಳು ಒತ್ತಡ ಹೇರುತ್ತಿದ್ದಾರೆ ಎನ್ನುವುದು ಆಘಾತಕಾರಿ ಸಂಗತಿ. ಅನೇಕ ರಾಜಕೀಯ ಪಕ್ಷಗಳ ದಿಂದ ಮನೆ ಮನೆಗೆ ಒಬ್ಬರು ರಾಜಕೀಯ ನಾಯಕರು ಇರುವುದರಿಂದ 5 ಗುಲಾಬಿ ಹೂವು 10 ಕರಪತ್ರಗಳನ್ನು ತೆಗೆದು–ಕೊಂಡು ಹೋಗಿ ಕಾರ್ಯಕ್ರಮಕ್ಕೆ ಅವಹ್ವಾನಿಸಲು ಕಾರ್ಯಕರ್ತರಿಗೆ ತುಂಬಾ ತಲೆ ಬಿಸಿಯಾಗಿದೆ ಎಂದು ಆರೋಪ ಕೇಳಿ ಬರುತ್ತದೆ. ಒಬ್ಬರಿಗೆ ಕೊಟ್ಟು ಇನ್ನೊಬ್ಬರಿಗೆ ಕೊಟ್ಟಿಲ್ಲ ಅಂ–ದರೆ ಸ್ಥಳೀಯವಾಗಿ ನಮಗೆ ತುಂಬಾ ತೊಂದರೆ ಆಗುತ್ತದೆ ಎಂದು ಆರೋಪ ಸಾರ್ವಜನಿಕರಲ್ಲಿ ಹೇಳಿ ಬರುತ್ತದೆ.

ಇದು ಸರ್ಕಾರದ ಗೌರವಯುತ ಆಹ್ವಾನವೋ, ಅಥವಾ ಸಾರ್ವಜನಿಕರನ್ನು ತಿರಸ್ಕರಿಸುವ ನಡೆವೋ ಎಂಬ ಪ್ರಶ್ನೆ ಇದೀಗ ಎಲ್ಲೆಡೆ ಕೇಳಿಬರುತ್ತಿದೆ. ಮಹಿಳಾ ಮತ್ತು ಮಕ್ಕಳ ಇಲಾಖೆಯನ್ನು ರಾಜಕೀಯ ಸಾಧನವಾಗಿಸಲಾಗುತ್ತಿದೆಯೇ ಮಹಿಳಾ ಮತ್ತು ಮಕ್ಕಳ ಇಲಾಖೆಯ ಅಡಿಯಲ್ಲಿ ಬರುವ ಅಂಗನವಾಡಿ ಕಾರ್ಯಕರ್ತರು, ಸಹಾಯಕರು ಹಾಗೂ ಅಧಿಕಾರಿಗಳನ್ನು ಮರುಮರು ಸಭೆಗಳಿಗೆ ಕರೆದು, ಉತ್ಸವಕ್ಕೆ ಹೆಚ್ಚಿನ ಜನರನ್ನು ತರಬೇಕೆಂದು ಒತ್ತಡ ಹಾಕಲಾಗುತ್ತಿದೆ ಎಂಬ ಆರೋಪಗಳು ಕೇಳಿ ಬಂದಿವೆ. ಸಣ್ಣ ಮಕ್ಕಳು, ಮಹಿಳೆಯರು ಹಾಗೂ ವೃದ್ಧರನ್ನು ಕೂಡ ಉತ್ಸವಕ್ಕೆ ಕರೆತರುವ ಗುರಿಯೊಂದಿಗೆ ಇಲಾಖೆ ಕಾರ್ಯನಿರ್ವಹಿಸುತ್ತಿದೆ ಎಂಬ ಆರೋಪಗಳು ಇಲಾಖೆಯ ಗೌರವ ಮತ್ತು ಉದ್ದೇಶಗಳ ಮೇಲೆಯೇ ಪ್ರಶ್ನಾರ್ಥಕ ಚಿಹ್ನೆ ಮೂಡಿಸುತ್ತಿವೆ.

ಸಾರ್ವಜನಿಕ ಉತ್ಸವವೇ? ಅಥವಾ ರಾಜಕೀಯ ಪ್ರದರ್ಶನವೇ? ಈಗ ಜನರಲ್ಲಿ ಉಂಟಾಗಿರುವ ಗೊಂದಲ ಸ್ಪಷ್ಟವಾಗಿದೆ ಈ ಉತ್ಸವ ನಿಜವಾಗಿಯೂ ಸಾರ್ವಜನಿಕರಿಗಾಗಿ ಇದೆಯೇ? ಅಥವಾ ಕೆಲ ರಾಜಕೀಯ ನಾಯಕರು ತಮ್ಮ ಪ್ರಭಾವ ಪ್ರದರ್ಶನಕ್ಕೆ ಬಳಸಿಕೊಳ್ಳುತ್ತಿರುವ ಕಾರ್ಯಕ್ರಮವೇ? ಕೋಟಿ ಕೋಟಿ ಹಣ ಖರ್ಚು ಮಾಡುತ್ತಿರುವಾಗ, ಆಹ್ವಾನವೂ ಗೌರವಯುತವಾಗಿರಬೇಕು. ಆದರೆ ಇಲ್ಲಿನ ನಡೆಗಳು ಜನರನ್ನು ತಗ್ಗಿಸಿ ನೋಡುವಂತಿವೆ ಎಂದು ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

**ಕಂಪ್ಲಿ ಶಾಸಕ ಗಣೇಶ್ ವಿರುದ್ಧ ಸಾರ್ವಜನಿಕ ಆಕ್ರೋಶ**

ಈ ಎಲ್ಲಾ ಅವ್ಯವಸ್ಥೆಗಳ ಹಿಂದೆ ಕಂಪ್ಲಿ ಶಾಸಕ ಗಣೇಶ್ ಅವರ ರಾಜಕೀಯ ಒತ್ತಡವೇ ಕಾರಣ ಎಂಬ ಆರೋಪಗಳು ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿವೆ. ಸರ್ಕಾರದ ಉತ್ಸವವನ್ನು ವೈಯಕ್ತಿಕ ಅಥವಾ ಪಕ್ಷೀಯ ಪ್ರಚಾರಕ್ಕೆ ಬಳಸಿಕೊಳ್ಳುವ ಪ್ರಯತ್ನ ನಡೆಯುತ್ತಿದೆ ಎಂದು ಹಲವರು ಆರೋಪಿಸುತ್ತಿದ್ದಾರೆ. ಮಹಿಳಾ ಮತ್ತು ಮಕ್ಕಳ ಇಲಾಖೆಯ ಅಧಿಕಾರಿಗಳ ಮೌನ ಪ್ರಶ್ನಾರ್ಥಕ ಸರ್ಕಾರದ ಒಂದು ಮಹತ್ವದ ಇಲಾಖೆ ಇಂತಹ ರಾಜಕೀಯ ಆಟಕ್ಕೆ ಬಲಿಯಾಗುತ್ತಿರುವುದು ದುರಂತವೆಂದು ಸಾರ್ವಜನಿಕರು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ.

ಮಹಿಳಾ ಮತ್ತು ಮಕ್ಕಳ ಇಲಾಖೆಯ ಅಧಿಕಾರಿಗಳು ಈ ಒತ್ತಡಗಳಿಗೆ ಮೌನವಾಗಿ ತಲೆಬಾಗಿರುವುದು ಇಲಾಖೆಯ ಸ್ವಾಭಿಮಾನ ಮತ್ತು ಆಡಳಿತಾತ್ಮಕ ನೈತಿಕತೆಗೆ ಧಕ್ಕೆ ತರುತ್ತಿದೆ ಎಂಬ ಮಾತುಗಳು ಕೇಳಿಬರುತ್ತಿವೆ.

## ಕಾಯಕದಿಂದಲೇ ಕೈಲಾಸ ಕಂಡ ಶರಣರು: ಪೂಜಾರ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಮಾನವೀಯತೆಯಮೌಲ್ಯಗಳೊಂದಿಗೆ ಸತ್ಯ, ನಿಷ್ಠೆ ಕಾಯಕ ಮಾಡಿ ಕೈಲಾಸ ಕಂಡವರು 12ನೇ ಶತಮಾನದ ಶರಣರು ಎಂದು ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ ಹೇಳಿದರು.

ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಆಡಿಟೋ–ರಿಯಂ ಹಾಲ್‌ನಲ್ಲಿ ಮಂಗಳವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಹಮ್ಮಿಕೊಂಡ ಕಾಯಕ ಶರಣರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಾದಾರ ಚೆನ್ನಯ್ಯ, ಮಾದರ ಧೂಳಯ್ಯ ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ, ಉರಿಲಿಂಗ ಪೆದ್ದಿ ಎಂಬ ಶರಣರು ಕಾಯಕ ಜೀವಿಗಳಾಗಿದ್ದು, ಅವರು ಮಾಡುವ ಕಾಯಕ ನಿಷ್ಠೆಯಿಂದ ಮಾಡುವುದಲ್ಲದೇ ಬಸವಾದಿ ಶರಣರ ಪ್ರೀತಿಗೆ ಪಾತ್ರರಾಗಿದ್ದರು ಎಂದರು.

ಮೇಲು ಕೀಳುಗಳೆಂಬ ಅನಾಚಾರಗಳಿಂದ ಕೂಡಿದ ಅಂದಿನ ದಿನಗಳಲ್ಲಿ ಎಲ್ಲರನ್ನೂ ಭೇದ ಭಾವವಿಲ್ಲದೆ ವಿಶ್ವಾಸಕ್ಕೆ ಪಡೆದು ಎಲ್ಲರ ಪಾಲಿನ ಅಣ್ಣನಾಗಿದ್ದ ಬಸವಣ್ಣ ಇಂದು ವಿಶ್ವ ಮಾನವ ಸ್ಥಾನದಲ್ಲಿ ಇದ್ದಾನೆ. ಇಂಥ ಶರಣರು ನಮ್ಮ ನೆಲದಲ್ಲಿ ಆಗಿ ಹೋಗಿದ್ದು, ನಮ್ಮೆಲ್ಲರ ಭಾಗ್ಯ ಎಂದು ಪೂಜಾರ ಹೇಳಿದರು.

ಅತಿಥಿಗಳಾಗಿ ಆಗಮಿಸಿದ್ದ ಗ್ಯಾರಂಟಿ ಯೋಜನೆಯ ಜಿಲ್ಲಾಧ್ಯಕ್ಷ ಅನಿಲ್ ದಡ್ಡಿ ಮಾತನಾಡಿ, ಮೇಲು ಕೀಳು ಎಂಬ ಜಾತಿ ವ್ಯವಸ್ಥೆಯಲ್ಲಿ ತಮ್ಮ ಕಾಯಕ ನಿಷ್ಠೆ ತೋರಿದ ಶರಣರು ಆಡಿದ ಮಾತುಗಳು ವಚನಗಳಾಗಿ ದಾರಿದೀಪಗಳಾಗಿವೆ. ಅವರೆಲ್ಲರ ತತ್ವ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕಾದರೆ ಸಮುದಾಯದ ಪ್ರತಿಯೊಬ್ಬರು ವಿದ್ಯಾವಂತರಾಗಬೇಕು ಎಂದರು.

ಜಿಲ್ಲಾಧಿಕಾರಿ ಸಂಗಪ್ಪ ಮಾತನಾಡಿ, ಕಲ್ಯಾಣದಲ್ಲಿಯ ಮಹಾಮನೆ ಜಗತ್ತಿನಲ್ಲಿ ಅತಿ ಶ್ರೇಷ್ಠವಾದ ಪ್ರಜಾಪ್ರಭುತ್ವದ ಕೇಂದ್ರವಾಗಿತ್ತು. ಅಲ್ಲಿ ಅಸ್ಪೃಶ್ಯರೆನಿಸಿಕೊಂಡವರಲ್ಲದೇ ಅಕ್ಕಮಹಾದೇವಿಯಂತಹ ಮಹಿಳೆಯರಿಗೂ ಅವಕಾಶ ಒದಗಿಸಿ ಕೊಟ್ಟು ಎಲ್ಲರೂ ಸಮಾನರು ಎಂಬುದನ್ನು ತೋರಿಸಲಾಗಿತ್ತು. ಶರಣರು ಮೇಲು ಕೀಳು ಎಂಬ ಬೇಧಭಾವವಿಲ್ಲದೆ ತಮಗೊಲಿದು ಬಂದ ಕಾಯಕವನ್ನು ಸತ್ಯ ನಿಷ್ಠೆಯಿಂದ ಮಾಡಿದ್ದರು. ಅವರ ದೃಷ್ಟಿಯಲ್ಲಿ ಶ್ರಮವೆಂಬುದು ಭಕ್ತಿ ಕಾಯಕವೆಂಬುದು ಪೂಜೆಯಾಗಿತ್ತು ಎಂದು ಹೇಳಿದರು.

ಉಪನ್ಯಾಸಕರಾಗಿ ಆಗಮಿಸಿದ್ದ ಪರಶುರಾಮ, ಬಸವಣ್ಣ, ಶರಣ–ರು ಕನಿಷ್ಠವಾಗಿದ್ದ ಕಾಯಕವನ್ನು ಶ್ರೇಷ್ಠ ಕಾಯಕವೆಂದು ತಿಳಿದು, ನಿಷ್ಠೆ ಪ್ರಾಮಾಣಿಕತೆಯಿಂದ ದುಡಿದವರು. ಶರಣರ ತತ್ವಗಳು ಪ್ರಚಲಿತವಾಗಬೇಕಾದರೆ ಇಂತಹ ಕಾರ್ಯಕ್ರಮಗಳು ಶಾಲಾ–ಕಾಲೇಜುಗಳಲ್ಲಿ ನಡೆಯಬೇಕು ಎಂದರು. ಉಪನ್ಯಾಸಕ ಡಾ.ಚಂದ್ರಶೇಖರ ಕಾಳನ್ನವರ ಮಾತನಾಡಿ, ಕಾಯಕ ಶರಣರ ಜೀವನ ಚರಿತ್ರೆ ಹಾಗೂ ಕಾರ್ಯಕನಿಷ್ಠೆಯ ಸಮಗ್ರ ಮಾಹಿತಿಯನ್ನು ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್, ಸಮುದಾಯದ ಮುಖಂಡರಾದ ಮನೋಹರ ಕದಂ, ಯಲ್ಲಪ್ಪ ಸಂಖ್ಯಾನವರ್, ವಿವೇಕಾನಂದ ಗರಸಂಗಿ, ಅಡಿವೆಪ್ಪ ಚಂದಾವರಿ, ಚಂದ್ರಕಾಂತ ಕೇಸನೂರ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಜಾತ್ರೆಗಳು ಸಮಾಜಕ್ಕೆ ಉತ್ತಮ ಸಂದೇಶ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಜಾತ್ರಾ ಮಹೋತ್ಸವಗಳು ಸಮಾಜಕ್ಕೆ ಉತ್ತಮ ಸಂದೇಶಗಳನ್ನು ನೀಡುವ ವೇದಿಕೆಗಳಾಗಿದ್ದು, ಜನರಲ್ಲಿ ಧಾರ್ಮಿಕ ಭಾವನೆಗಳ ಜೊತೆಗೆ ಮಾನವೀಯತೆ ಬೆಳೆಸುವ ಕೆಲಸವನ್ನು ಮಾಡುತ್ತಿವೆ ಎಂದು ಗಂಗಾವತಿ ಕಲ್ಮಠದ ಡಾ. ಕೊಟ್ಟೂರು ಮಹಾಸ್ವಾಮಿಗಳು ಹೇಳಿದರು.

ಜಿಲ್ಲೆಯ ಹುನಗುಂದ ತಾಲೂಕಿನ ಕಮತಗಿ ಪಟ್ಟಣದ ಹುಚ್ಚೇಶ್ವರ ರಥಬೀದಿ ಆವರಣದಲ್ಲಿ ಹೊಳೆ ಹುಚ್ಚೇಶ್ವರ ಜಾತ್ರಾ ಮಹೋತ್ಸವ ನಿಮಿತ್ತ ಹಮ್ಮಿಕೊಂಡಿದ್ದ ಕಮತಪುರ ಉತ್ಸವಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಇಂದಿನ ದಿನಗಳಲ್ಲಿ ಮಾನವೀಯ ಮೌಲ್ಯಗಳು ಕುಸಿಯುತ್ತಿದ್ದು, ಶಿಕ್ಷಕರು, ಪಾಲಕರು ಮಕ್ಕಳಲ್ಲಿ ಆಚಾರ, ವಿಚಾರ, ಸಮಾಜಮುಖಿ ಕಾರ್ಯಗಳ ಬಗ್ಗೆ ಹಾಗೂ ಸಂಸ್ಕಾರಗಳ ಬಗ್ಗೆ ತಿಳಿಸಿಕೊಡುವುದು ಅವಶ್ಯಕ ಎಂದರು.

ರಾಜ್ಯದಲ್ಲಿ ವೀರಶೈವಲಿಂಗಾಯತ ಮಠಗಳು ಹಿಂದಿನಿಂದಲೂ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಮೂಲಕ ಅವರ ಪಾಲಿನ ಆಶಾ ದೀಪಗಳಾಗಿ ಪ್ರಜ್ವಲಿಸುತ್ತಿವೆ. ಜಾತ್ರೆಗಳು ಸಾಂಸ್ಕೃತಿಕ ಪರಂಪರೆಯ ಅವಿಭಾಜ್ಯ ಅಂಗಗಳಾಗಿದ್ದು, ಇವು ಸಾಮಾಜಿಕ ಸಮ್ಮಿಲನವಾಗಿಸಲು ಪ್ರೋತ್ಸಾಹಿಸುತ್ತವೆ. ಜಾತಿ, ಮತ ಮತ್ತು ಧರ್ಮದ ಬೇಲಿಗಳನ್ನು ಮೀರಿ ಜನರನ್ನು ಒಂದೆಡೆ ಸೇರಿಸುವ ಮೂಲಕ ಭಾರತದ ಸಾಂಸ್ಕೃತಿಕ ಭಾವೈಕ್ಯತೆಯ ಸಂಕೇತಗಳಾಗಿವೆ ಎಂದು ಶ್ರೀಗಳು ಹೇಳಿದರು.

ಉಪ್ಪಿನ ಬೆಟಗೇರಿಯ ಕುಮಾರ ವಿರೂಪಾಕ್ಷ ಶ್ರೀಗಳು, ಮುನವಳ್ಳಿ ಮುರುಘೇಂದ್ರ ಶ್ರೀಗಳು, ಹೊಸಹಳ್ಳಿ ಬೂದಿಶ್ವರ ಶ್ರೀಗಳು, ಕಮತಗಿ ಹೊಳೆ ಹುಚ್ಚೇಶ್ವರ ಶ್ರೀಗಳು, ಗುಳೇದಗುಡ್ಡ ಕಾಶೀನಾಥ ಶ್ರೀಗಳು, ಅಗಡಿ ಗುರುಲಿಂಗ ಶ್ರೀಗಳು, ಕಮತಗಿ ಶಿವಕುಮಾರ ಶಿವಾಚಾರ್ಯ ಶ್ರೀಗಳು, ಕುಂದರಗಿ ಅಮರಸಿದ್ದೇಶ್ವರ ಶ್ರೀಗಳು, ಕೋಟೆಕಲ್ ನೀಲಕಂಠ ಶಿವಾಚಾರ್ಯ ಶ್ರೀಗಳು, ಗುಳೇದಗುಡ್ಡ ಅಭಿನವ ಕಾಡಸಿದ್ದೇಶ್ವರ ಶ್ರೀಗಳು, ಮಾತೋಶ್ರೀ ಬಸವಣ್ಣೆಮ್ಮ ತಾಯಿ ಬಸರಕೋಡ ಇದ್ದರು.

## ಕಾಯಕ ನಂಬಿದ್ದ ಶರಣರು ಸಂಗ್ರಹ ಬುದ್ಧಿಯನ್ನು ವಿರೋಧಿಸಿದ್ದರು: ಅಮರೇಶ್ ಜಿ ಕೆ

• **ಮಲ್ಲಮ್ಮ ನುಡಿ ವಾರ್ತೆ ಕೊಟ್ಟೂರು**

ತಾಲೂಕು ಕಛೇರಿಯ ಮಹಾತ್ಮ ಗಾಂಧೀಜಿ ಸಭಾಂಗಣದಲ್ಲಿ ನಡೆದ "ಕಾಯಕ ಶರಣರ ಜಯಂತಿ" (ಮಾದರ ಚನ್ನಯ್ಯ, ಮಾದಾರ ಧೂಳಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ, ಉರಿಲಿಂಗ ಪೆದ್ದಿ) ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ತಹಶೀಲ್ದಾರರಾದ ಅಮರೇಶ್ ಜಿ ಕೆ ಇವರು ಶರಣರು ಕಾಯಕವನ್ನು ನಂಬಿದ್ದರು. ಸತ್ಯಶುದ್ಧ ಕಾಯಕದಿಂದ ಬಂದ್ದರಲ್ಲಿ ಅಂದಿಗೆ ಬೇಕಾದಷ್ಟನ್ನು ಉಳಿಸಿಕೊಂಡು ಮಿಕ್ಕದ್ದನ್ನು ಸಮಾಜಕ್ಕೆ ದಾಸೋಹದ ಮೂಲಕ ಹಂಚುತ್ತಿದ್ದರು.

"ಅಂಬಲಿ ಕಬಂಳಿ ಆಸ್ತಿ, ಮಿಕ್ಕಿದ್ದೆಲ್ಲಾ ಜಾಸ್ತಿ" ಎನ್ನುವ ಮಾದಾರ ಚನ್ನಯ್ಯನ ಮಾತು ಸಂಗ್ರಹ ಬುದ್ಧಿಯನ್ನು ವಿರೋದಿಸುತ್ತಿರುವುದು ಕಂಡುಬರುತ್ತದೆ. ಹೀಗೆ ಪ್ರತಿಯೊಬ್ಬ ಶರಣರು ಕೆಳವರ್ಗದವರಾದರೂ ಅವರ ಚಿಂತನೆಗಳಿಂದ, ಅವರು ರೂಢಿಸಿಕೊಂಡಿದ್ದ ಆದರ್ಶ ವ್ಯಕ್ತಿತ್ವದಿಂದ ಮಹಾನ್ ಶರಣ–ರಾಗಿ ಉಳಿದಿದ್ದಾರೆ. ಗುರುಕೊಟ್ಟ ಕಲ್ಲನ್ನೇ ಲಿಂಗವೆಂದು ಪೂಜಿಸಿದ ಪೆದ್ದಣ್ಣ ಕೊನೆಗೆ ಸಾಧನೆಯಿಂದ




ಉರಿಲಿಂಗ ಪೆದ್ದಿಯಾದ ಶರಣದ ಬದುಕು ರೋಚಕವಾಗಿದೆ. ಹೀಗೆ ಶರಣರ ಚಿಂತನೆಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಬದುಕು ಸಾರ್ಥಕವಾಗುತ್ತದೆ ಎಂದರು.

ಡಿಎಸ್ ಮುಖಂಡರಾದ ಬದ್ದಿ ಮರಿಸ್ವಾಮಿ ಇವರು ಯಾವುದೇ ಕಾಯಕವನ್ನು ಮಾಡಲಿ ಅದರಲ್ಲಿ ಶ್ರೇಷ್ಠತೆಯನ್ನು ಕಂಡುಕೊಂಡಿದ್ದರು. ಎಲ್ಲಾ ಕಾಯಕದ ಶರಣರನ್ನು ಒಂದೇ ವೇದಿಕೆಯಲ್ಲಿ ಒಂದಾಗಿ ಸೇರುವಂತೆ

ಬಸವಣ್ಣನವರು ಸಮಾಜ ಪರಿವರ್ತನೆ ಮಾಡಿದ್ದರು. ಅವರೆಲ್ಲಾ ತಮ್ಮ ಬದುಕಿಗಾಗಿ ಕಾಯಕ ಮಾಡುತ್ತಾ ಸಮಾಜದ ಅಭಿವೃದ್ಧಿಗೆ ಶ್ರಮಿಸಿದ್ದಾರೆ ಎಂದರು.

ಇನ್ನೋರ್ವ ಮುಖಂಡರಾದ ಟಿ ಹನುಮಂತಪ್ಪ ವಕೀಲರು ವಚನ ಸಾಹಿತ್ಯದಲ್ಲಿ ಅಪಾರವಾದ ಶಕ್ತಿ ಇದೆ. ಸಮ ಸಮಾಜದ ಕನಸು ಕಂಡ ಶರಣರ ಸಾಹಿತ್ಯವನ್ನು ಆಧರಿಸಿ ಸಂವಿಧಾನದಲ್ಲಿ ಅಳವಡಿಸಿಕೊಳ್ಳಲಾಗಿದೆ. ಸಂವಿಧಾನವಿಲ್ಲದ ಅಂದಿನ ಕಾಲದಲ್ಲಿ ವಚನಕಾರರ ಸಾಹಿತ್ಯವು ಒಂದು ರೀತಿ ಸಂವಿಧಾನದಂತೆ ಸಮಾಜವನ್ನು ಸನ್ಮಾರ್ಗದಲ್ಲಿ ಸಾಗುವಂತೆ ಮಾಡಿವೆ.

ಇಂದು ಮೌಲ್ಯಗಳ ಕೊರತೆ ಇದೆ. ಪ್ರತಿಯೊಬ್ಬರೂ ಪ್ರೀತಿಸುವುದನ್ನು ಕಲಿತರೆ ಯಾವುದೇ ಗೊಂದಲವಿಲ್ಲದೇ ಸಮಾಜದಲ್ಲಿ ಶಾಂತಿಯ ಬದುಕನ್ನು ಕಾಣಬಹುದಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಶಿರಸ್ತೇದಾರರಾದ ಹೆಚ್ ಎಂ ಕೊಟ್ರಮ್ಮ, ಚಂದ್ರನಾಯ್ಕ, ಕಂದಾಯ ನಿರೀಕ್ಷಕ ಡಿ ಶಿವಕುಮಾರ, ಹರೀಶ, ದೇವರಾಜ, ಮಂಜಮ್ಮ,

ಸಮಾಜ ಕಲ್ಯಾಣ ಇಲಾಖೆಯ ವೀರೇಶ ತುಪ್ಪದ, ಮುಖಂಡರಾದ ಮಂಜುನಾಥ, ಮಣಿಕಂಠ, ಕನ್ನಕಟ್ಟಿ ಶಿವರಾಜ ಮುಂತಾದವರು ಭಾಗವಹಿಸಿದ್ದರು. ಸಿ ಮ ಗುರುಬಸವರಾಜ ಸ್ವಾಗತಿಸಿ ನಿರೂಪಿಸಿದರು.

# ರಸ್ತೆ ಸುಧಾರಣೆಗೆ ಚಾಲನೆ



**ಭಾಲ್ಕಿ:** ತಾಲೂಕಿನ ಡೋಣಗಾಪುರ ಗ್ರಾಮದಿಂದ ಜಾಯಗಾವ್ ವಾಯಾ ಡೋಣೇಶ್ವರ ದೇವಸ್ಥಾನದವರೆಗೆ ರಸ್ತೆ ಸುಧಾರಣೆ ಕಾಮಗಾರಿಗೆ ಸುಮಾರು 2 ಕೋಟಿ ರೂ. ಅನುದಾನ ಒದಗಿಸಿ ಕಾಮಗಾರಿಗೆ ಚಾಲನೆ ಜಿಲ್ಲಾ ಉಸ್ತುವಾರಿ ಸಚಿವರು ಈಶ್ವರ್ ಖಂಡ್ರೆ ನೀಡಿದರು.

ಈ ರಸ್ತೆ ಅಭಿವೃದ್ಧಿಯಿಂದ ಗ್ರಾಮಸ್ಥರಿಗೆ ಸುಗಮ ಸಂಚಾರ ಸೌಲಭ್ಯ ದೊರೆಯುವುದರ ಜೊತೆಗೆ ಡೋಣೇಶ್ವರ ದೇವಸ್ಥಾನಕ್ಕೆ ತೆರಳುವ ಭಕ್ತರಿಗೆ ಹೆಚ್ಚಿನ ಅನುಕೂಲವಾಗಲಿದೆ.

ಈ ಸಂದರ್ಭದಲ್ಲಿ ಸುಮಾರು ₹14.65 ಲಕ್ಷ ರೂ. ಅನುದಾನದಡಿ ನೂತನವಾಗಿ ನಿರ್ಮಿಸಲಾದ ಬಸ್ ನಿಲ್ದಾಣವನ್ನು ಲೋಕಾರ್ಪಣೆಗೊಳಿಸಲಾಯಿತು. ಇದರಿಂದ ಗ್ರಾಮೀಣ ಭಾಗದ ಸಾರ್ವಜನಿಕ ಸಾರಿಗೆ ವ್ಯವಸ್ಥೆಗೆ ಇನ್ನಷ್ಟು ಬಲ ದೊರೆಯಲಿದೆ ಎಂದರು. ತಾಲೂಕ ಮಟ್ಟದ ಅಧಿಕಾರಿಗಳು, ಗ್ರಾಮದ ಮುಖ್ಯಸ್ಥರು ಉಪಸ್ಥಿತರಿದ್ದರು.

# ನಮಗಿನ್ನೂ ಅನುದಾನ ಸಿಕ್ಕಿಲ್ಲ




**ಹುಣಸೂರು:** ಸೂಫಿ ಸಂತರಿಗೆ ಹಾಗೂ ದುರ್ವೇಶ್ ಸರ್ಕಾರದಿಂದ ಯಾವುದೇ ಅನುದಾನಗಳು ನಮಗೆ ಇನ್ನೂವರೆಗೂ ನಮ್ಮ ಕೈಗೆ ತಲುಪುತ್ತಿಲ್ಲ ಎಂದು ಸರ್ಕಾರ ಬರುವ ಸೌಲತ್ತುಗಳು ಸಂಪೂರ್ಣ ನಮಗೆ ನಿರ್ಲಕ್ಷತೆ ಯನ್ನು ತೋರಿಸುತ್ತಿದ್ದಾರೆ ಎಂದು ಸೂಫಿ ಝುಂ ಸಂತರಿಗೆ ಕಮಿಟಿಯ ತಾಲೂಕು ಅಧ್ಯಕ್ಷರಾದ ಸುಮನ್. ಬಲೆನಹಳ್ಳಿ ನುಮನ್ನ Noman ತಿಳಿಸಿದ್ದಾರೆ.

ನಗರದ ಪತ್ರಕರ್ತರ ಸಂಘದ ಕಚೇರಿಯಲ್ಲಿ ಕರೆಯಲಾಗಿದೆ ಮಾತನಾಡಿ ನಮಗೆ ಸೂಫಿ ಝುಂ ಹಾಗೂ ದೃವೇಶ್ ಡಿ ದೇವರಾಜ ಅರಸು ರವರ ಕಾಲದಿಂದಲೂ ನಮಗೆ ಗುರುತಿಸಿ ಸರ್ಕಾರದಿಂದ ಒಂದು ನಮಗೆ ಗುರುತಿನ ಚೀಟಿ ನೀಡಿದ್ದರು ಅದರಲ್ಲಿ ಸರ್ಕಾರದ ಸವಲತ್ತುಗಳು ಸರ್ಕಾರದ ನಮಗೆ ಸಿಗುತ್ತಿತ್ತು ಆ ಸವಲತ್ತಿನಲ್ಲಿ ನಮ್ಮ ಮಕ್ಕಳಿಗೆ ಶಿಕ್ಷಣ ಆರೋಗ್ಯ ಬಸ್ ಪಾಸ್ ಇನ್ನಿತರ ಸೌಲತ್ತುಗಳು ಕೂಡ ನಾವು ಪಡಿತಿದ್ದೆ ಆದರೆ ನಂತರ ಬಿಜೆಪಿ ಸರ್ಕಾರ ಯಡಿಯೂರಪ್ಪ ಆಡಳಿತದ ಅವಧಿಯಲ್ಲಿ ಅದನ್ನು ಸಂಪೂರ್ಣ ರದ್ದುಪಡಿಸಿದ್ದಾರೆ ಅದ ನಂತರ ನಮಗೆ ಯಾವುದೇ ಸರ್ಕಾರ ಆಡಳಿತದಲ್ಲಿ ಇದ್ದರೂ ಕೂಡ ನಮಗೆ ಸೌಲತ್ತುಗಳು ನೀಡುವುದರಲ್ಲಿ ಸಂಪೂರ್ಣವಾಗಿ ವಿಫಲವರಾಗಿದ್ದಾರೆ. ರಾಜ್ಯ ಕಾಂಗ್ರೆಸ್ ಸರ್ಕಾರ ಆಡಳಿತದಲ್ಲಿ ಇರುವುದರಿಂದ ನಮಗೆ ಮುಂದಿನ ಬಜೆಟ್ಟಿನಲ್ಲಿ ಸವಲತ್ತುಗಳನ್ನು ಮಂಡಿಸುವುದರಲ್ಲಿ ಸರ್ಕಾರಕ್ಕೆ ನಾವು ಗಮನ ಸೆಳೆತಿದ್ದೇವೆ ಎಂದು ತಿಳಿಸಿದರು. ಉಪಾಧ್ಯಕ್ಷರಾದ ಸೈಯದ್ ಅಬ್ಬಾಸ್ ಮಾತನಾಡಿ ಹಿಂದೆಇದ್ದಂತ ಸರ್ಕಾರದಲ್ಲಿ ಶ್ರೀರಂಗಪಟ್ಟಣದಲ್ಲಿ ಮುಸ್ಲಿಮ್ಸ್ ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕೆಂದು ವಿರೋಧ ವ್ಯಕ್ತಪಡಿಸಿದ್ದರು ಈಗ ಆಡಳಿತ ಮಾಡುತ್ತಿರುವ ಸರ್ಕಾರಗಳು ಅದನ್ನು ಪುನ ವರ್ತನೆ ಮಾಡಿ ಮತ್ತೊಮ್ಮೆ ಶ್ರೀರಂಗಪಟ್ಟಣ ವಿಶ್ವವಿದ್ಯಾಲಯ ಸ್ಥಾಪಿಸಿ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರ ಹೆಸರನ್ನು ಇಡಬೇಕು ಎಂದು ನಾವು ಒತ್ತಾಯಿಸುತ್ತೇವೆ. ಸರ್ಕಾರಕ್ಕೆ ಬಂದಂತ ಸವಲತ್ತುಗಳು ಬಡವರ ಸೂರಿಗೆ ಫಲಾನುಭವಿಗಳಿಗೆ ಮನೆ ನಿರ್ಮಿಸಿ ಅನುದಾನ ಇನ್ನುವರೆಗೂ ಬರದೆ ಇರುವ ಕಾದು ಕುಳಿತಿರುವ ಫಲಾನುಭವಿಗಳಿಗೆ ತುರ್ತಾಗಿ ಸರ್ಕಾರ ಹಣ ತಡೆದಿರುವ ಅನುದಾನವನ್ನು ಬಿಡುಗಡೆ ಮಾಡಿಕೊಡಬೇಕು ಎಂದ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ರೋಷನ್ ಅಲಿ ಗಫರ್ ಮಾತನಾಡಿದ್ದಾರೆ ಕಾರ್ಯದರ್ಶಿ ಸನಾವುಲ್ಲ ಮುಖ್ಯಸ್ಥರಾದ ಕಲಂದರ್ ಹಾಗೂ ಇನ್ನಿತರ ಹಾಜರಿದ್ದರು.



**ಹುಮನಾಬಾದ್:** ಶ್ರೀ ಮಾಣಿಕ ವಿಹಾರ ಸಾಂಸ್ಕೃತಿಕ ಸಂಘದವತಿಯಿಂದ ಮಲ್ಲಮ್ಮ ನುಡಿ ಪತ್ರಿಕೆಯ ಸಂಪಾದಕರು ಆದ ರಮೇಶ ರೆಡ್ಡಿ ರವರ ಹುಟ್ಟು ಹಬ್ಬವನ್ನು ಆಚರಿಸಲಾಯಿತು, ಅಧ್ಯಕ್ಷ ಸುರೇಶ ಸೀಗಿ,ಸುಭಾಷ ಪಾಟೀಲ, ಗುರಪ್ಪಾ ಬಿಭೂತಿ, ಶ್ರಿನಾಥ ದೇವಣಿ, ಸಿದ್ದು ಸ್ವಾಮಿ, ಅಣ್ಣಪ್ಪ ಸಿಂಧನಕೇರಾ, ಭೀಮೇಶ ಪಂಚಾಳ, ಸೇರಿದಂತೆ ಇತರರಿದ್ದರು.



**ಹುಮನಾಬಾದ್:** ಮಲ್ಲಮ್ಮ ನುಡಿ ಪತ್ರಿಕೆಯ ಸಂಪಾದಕರಾದ ರಮೇಶ ರೆಡ್ಡಿ ರವರ ಹುಟ್ಟು ಹಬ್ಬವನ್ನು ಅವರ ಕಛೇರಿ ಯಲ್ಲಿ ಅತಿ ಸರಳ ರೀತಿಯಿಂದ ಮಾಡಲಾಯಿತು.

# ರೈತರಿಗೆ 112 ಪೊಲೀಸ್ ಎಮರ್ಜೆನ್ಸಿ ಸೇವೆ ಕುರಿತು ಜಾಗೃತಿ

• **ಮಲ್ಲಮ್ಮ ನುಡಿ ವಾರ್ತೆ ಕುಕನೂರ**



ಪಟ್ಟಣದ ಎಪಿಎಂಸಿ ಮಾರುಕಟ್ಟೆ ಆವರಣದಲ್ಲಿ ರೈತರು ಹಾಗೂ ವ್ಯಾಪಾರಸ್ಥರಿಗೆ 112 ಪೊಲೀಸ್ ಎಮರ್ಜೆನ್ಸಿ ಸೇವೆಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಯಲಬುರ್ಗಾ ಪೊಲೀಸ್ ಠಾಣೆಯ ಮಾರುತಿ ಎ. (ಹೆಡ್ ಕಾನ್ಸ್ಟೇಬಲ್) ಮಾತನಾಡಿ, ಸಾರ್ವಜನಿಕ ಸುರಕ್ಷತೆಯಲ್ಲಿ 112 ತುರ್ತು ಸೇವೆಯ ಮಹತ್ವವನ್ನು ವಿವರಿಸಿದರು.

ಅಗ್ನಿ ಅವಘಡ, ಕಳ್ಳತನ, ಅಪಘಾತ, ಗಲಾಟೆ ಸೇರಿದಂತೆ ಯಾವುದೇ ತರಹದ ತುರ್ತು ಪರಿಸ್ಥಿತಿ ಸಂಭವಿಸಿದಲ್ಲಿ ವಿಳಂಬ ಮಾಡದೇ 112ಕ್ಕೆ ಕರೆ ಮಾಡಿ ಪೊಲೀಸ್ ಸಹಾಯ ಪಡೆಯಬೇಕೆಂದು ಅವರು ಸಲಹೆ ನೀಡಿದರು.

112 ಸೇವೆಯ ಮೂಲಕ ತಕ್ಷಣ ಸ್ಪಂದನೆ ಲಭ್ಯವಾಗುತ್ತದೆ ಎಂಬುದನ್ನು ಅವರು ರೈತರಿಗೆ ಮನವರಿಕೆ ಮಾಡಿದರು.

ಇದೇ ಸಂದರ್ಭದಲ್ಲಿ ಅಕ್ರಮ ಗೋ ಸಾಗಾಣಿಕೆ, ಅಸ್ಪೃಶ್ಯತೆ, ಕೋಮು ಗಲಭೆ, ಮಾದಕ ದ್ರವ್ಯಗಳಾದ ಡ್ರಗ್ಸ್ ಹಾಗೂ ಆಫೀಮು ಮಾರಾಟ-ಸೇವನೆ, ಓಸಿ ಇಸ್ಪಿಟ್ ಜೂಜಾಟ, ಅಕ್ರಮ ಮದ್ಯ ಮಾರಾಟ, ಅಕ್ರಮ ಮರಳು ಸಾಗಣೆ ಸೇರಿದಂತೆ ಯಾವುದೇ ಕಾನೂನುಬಾಹಿರ ಚಟುವಟಿಕೆಗಳ ಬಗ್ಗೆ ಮಾಹಿತಿ ದೊರೆತಲ್ಲಿ ತಕ್ಷಣ 112ಕ್ಕೆ ಕರೆ ಮಾಡುವಂತೆ ತಿಳಿಸಲಾಯಿತು. ಇತ್ತೀಚೆಗೆ 5ಉ ಸೇವೆ ಆರಂಭವಾಗಿದೆ ಎಂದು ಹೇಳಿ, ಸಿಮ್ ಅನ್ನು 4ಉನಿಂದ 5ಉಗೆ ಅಪ್‌ಡೇಟ್ ಮಾಡುವುದಾಗಿ ಕರೆ ಮಾಡಿ ಮೊಬೈಲ್‌ಗೆ ಬರುವ ಔಖಿಕ ಕೇಳುವ ವಂಚನೆ ಪ್ರಕರಣಗಳು ಹೆಚ್ಚುತ್ತಿದ್ದು, ಯಾವುದೇ ಕಾರಣಕ್ಕೂ ಔಖಿಕ ನೀಡಬಾರದು ಎಂದು ಸಾರ್ವಜನಿಕರಿಗೆ ಎಚ್ಚರಿಕೆ ನೀಡಲಾಯಿತು.

ಅಲ್ಲದೆ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ಇನ್‌ಸ್ಟಾಗ್ರಾಂ ಹಾಗೂ ಟ್ವಿಟರ್‌ನಲ್ಲಿ 112 ಕೊಪ್ಪಳ ಪುಟವನ್ನು ಫಾಲೋ ಮಾಡಿ, ಲೈಕ್ ಹಾಗೂ ಶೇರ್ ಮಾಡುವಂತೆ ಸಲಹೆ ನೀಡಲಾಯಿತು. ಯಲಬುರ್ಗಾ-ಕುಕನೂರ ERSS112 ಪೊಲೀಸ್ ಸಿಬ್ಬಂದಿ ಮಾರುತಿ ಅವರ ನೇತೃತ್ವದಲ್ಲಿ ಈ ಜಾಗೃತಿ ಕಾರ್ಯ ನಡೆಸಲಾಯಿತು.

ಈ ಕಾರ್ಯಕ್ರಮದಲ್ಲಿ ಬೆಣಕಲ್ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಗವಿಸಿದ್ದಪ್ಪ ಲೇಬಗೇರಿ, ಪಾಲಕ್ಷಪ್ಪ ಬೆಣಕಲ್ ಸೇರಿದಂತೆ ಅನೇಕ ರೈತರು ಉಪಸ್ಥಿತರಿದ್ದು, ಜಾಗೃತಿ ಕಾರ್ಯಕ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

# ವಧು-ವರರ ಸಮಾವೇಶಕ್ಕೆ ಪೂರ್ಣ ಸಿದ್ಧತೆ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟ**



ಬರುವ ದಿನಾಂಕ 14ರಂದು ಚಲವಾದಿ ವಧು-ವರರ ಸಮಾವೇಶದ ಯಶಸ್ವಿಗೆ ಸರ್ವರೂ ಸಹಕಾರ ನೀಡಬೇಕೆಂದು ಚಲವಾದಿ ಸಮಾಜದ ಹಿರಿಯ ನಾಗರಿಕರ ಸಂಘದ ಅಧ್ಯಕ್ಷ ಅಶೋಕ ನಾರಾಯಣಿ ಕೋರಿದರು.

ಅವರು ಪೂರ್ವಭಾವಿ ಸಿದ್ದತಾ ಸಭೆಯಲ್ಲಿ ಮಾತನಾಡಿ ಬಾಗಲಕೋಟ ಜಿಲ್ಲಾ ಕೇಂದ್ರದಲ್ಲಿ ಪ್ರಪ್ರಥಮ ಸಮಾವೇಶ ಇದಾಗಿದ್ದು ಸಮಾಜದ ಹಿರಿಯರು ಯುವಜನರ ಜೊತೆಗೂಡಿ ಕಾರ್ಯಕ್ರಮದ ಯಶಸ್ಸುಗೊಳಿಸೋಣ ಎಂದು ಮನವಿ ಮಾಡಿದರು.

ಸಮಾಜದಲ್ಲಿ ಪರಸ್ಪರ ಸಂಪರ್ಕ ಕೊರತೆಯಿಂದ ಸರಿಯಾದ ಮಾಹಿತಿ ಸಿಗದೇ ಇರುವುದನ್ನು ಗಮನಿಸಿ ಸಂಘವು ಇಂತಹ ಸಮಾವೇಶ ಮಾಡಲು ಮುಂದಾಗಿದ್ದು ಇದು ಪ್ರತಿ ವರುಷ ನಿರಂತರವಾಗಿ ನಡೆಯಲಿದೆ ಎಂದು ಹೇಳಿದರು.

ಸಮಾವೇಶವನ್ನು ಚಿಕ್ಕೋಡಿಯ ಉದ್ದಿಮೆದಾರ ಅರವಿಂದ ಈ. ಘಟ್ಟಿ ಅವರು ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಮಾಜದ ಹಿರಿಯರಾದ ಶರಣಪ್ಪ ಅಮದಿಹಾಳ ಅವರು ಆಗಮಿಸಲಿದ್ದಾರೆ ಎಂದರು. ಸಮ್ಮೇಳನೆದ ಯಶಸ್ವಿಗೆ ಹಾಕಿಕೊಂಡಿರುವ ಪೂರ್ವಸಿದ್ಧತೆಗಳನ್ನು ಸಭೆಗೆ ವಿವರಿಸಿದರು.

ಸಭೆಯಲ್ಲಿ ಪಿ.ಡಿ.ಸರಿಕರ,ಎಸ್.ಡಿ.ಹೊಸಮನಿ ,ವಾಯ್.ಎನ್.ಚಲವಾದಿ,ಸಿದ್ದಣ್ಣ ಕಡಾಡಿ,ನಿಂಗಪ್ಪ ಧನ್ನೂರ,ಮುತ್ತುರಾಜ ಗರಸಂಗಿ,ವಿದ್ಯಾಸಾಗರ ತಳಿಕೇರಿ ಮೊದಲಾದವರು ಮಾತನಾಡಿ ಸಲಹೆ ಸೂಚನೆಗಳನ್ನು ನೀಡಿದರು.

ಸಭೆಯಲ್ಲಿ ವಿವಿದೆಡೆಯಿಂದ ಆಗಮಿಸಿದ ಸಮಾಜದ ಹಿರಿಯರಾದ ಎಂ.ಎಂ.ಚಬನೂರ,ವಾಯ್. ಎಸ್.ಕೊಪ್ಪದ,ಎಚ್.ವಾಯ್.ಘಂಟಿ, ಪಿ.ಎಸ್. ಮಲ್ಲಪ್ಪಗೋಳ, ಜಿ.ಎಚ್.ಬಡಿಗೇರ, ಹುಲಗಪ್ಪ ಹೊದ್ಲೂರ,ವಿರುಪಣ್ಣ ಅಳಿಗನೂರು,ಬೋಗಪ್ಪ ಕೆಡಗೆ ಉಪಸ್ಥಿತರಿದ್ದರು.

# ಉತ್ತಮ ಫಲಿತಾಂಶಕ್ಕೆ ಧನ್ವಂತರಿ ಕಾಲೇಜು ಆರಂಭ



• **ಮಲ್ಲಮ್ಮ ನುಡಿ ವಾರ್ತೆ ಪೀಣ್ಯ ದಾಸರಹಳ್ಳಿ**

ಉದ್ಯೋಗ ಮಾಡುವವರಿಗೆ, ಪ್ರತಿದಿನ ಬೆಳಗ್ಗೆ ಸಮಯದಲ್ಲಿ ಕಾಲೇಜಿಗೆ ಹೋಗಲು ಸಾಧ್ಯವಾಗದವರಿಗೆ ಪದವಿ ಪಡೆಯಲು ಆಸಕ್ತರಿಗೆ ಧನ್ವಂತರಿ ಸಂಜೆ ಪದವಿ ಕಾಲೇಜು ಆರಂಭ ಮಾಡಿದ್ದೇವೆ ಎಂದು ಕಾಲೇಜಿನ ಸಿಇಓ ಆಂತೋನಿ ಆರೋಗ್ಯಪ್ಪ ತಿಳಿಸಿದರು.

ಚಿಕ್ಕಬಾಣಾವರದ ಧನ್ವಂತರಿ ಸಂಜೆ ಪದವಿ ಕಾಲೇಜು ಉದ್ಘಾಟಿಸಿ ಅವರು ಮಾತನಾಡಿದರು. ನುರಿತ ಮತ್ತು ಅನುಭವವುಳ್ಳ ಪ್ರಾಧ್ಯಾಪಕರನ್ನು ಈಗಾಗಲೇ ನೇಮಿಸಿಕೊಳ್ಳಲಾಗಿದೆ. ಉತ್ತಮ ಗುಣಮಟ್ಟದ ಶಿಕ್ಷಣ ಮತ್ತು ಫಲಿತಾಂಶ ನೀಡಲು ನಮ್ಮ ಧನ್ವಂತರಿ ಕಾಲೇಜಿನ ಸಿಬ್ಬಂದಿ ಆಸಕ್ತರಾಗಿದ್ದಾರೆ. ಕಾಲೇಜಿಗೆ ಒಮ್ಮೆ ಭೇಟಿ ಕೊಟ್ಟು ತಾವು ಪ್ರವೇಶ ಮಾಡಲು ಈ ಮೂಲಕ ಕೋರಿಕೆ' ಎಂದರು.

ಪದವಿಯಲ್ಲಿ ಹೆಚ್‌ಇಪಿ, ಇ ಎಸ್‌ಪಿ ಮತ್ತು ವಾಣಿಜ್ಯ ವಿಭಾಗದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಅನುಮತಿ ಪಡೆದು ತರಗತಿ ಪ್ರಾರಂಭಿಸಲಾಗಿದೆ' ಎಂದು ಮಾಹಿತಿ ನೀಡಿದರು. ಪ್ರಾಂಶುಪಾಲ ಡಾ. ಕುಮಾರ್ ಮಾತನಾಡಿ,'ಚಿಕ್ಕಬಾಣಾವರ, ಹೆಸರುಘಟ್ಟ, ತಮ್ಮೇನಹಳ್ಳಿ, ಬಾಗಲಗುಂಟೆ, ದಾಸರಹಳ್ಳಿ ಮತ್ತು ಅಬ್ಬಿಗೆರೆ ಸುತ್ತಮುತ್ತಲ ಪ್ರದೇಶದ ವಿದ್ಯಾರ್ಥಿಗಳು ಮತ್ತು ಉದ್ಯೋಗಸ್ಥರು ಧನ್ವಂತರಿ ಸಂಜೆ ಕಾಲೇಜಿಗೆ ಪ್ರವೇಶ ಪಡೆದು ಉತ್ತಮ ಶಿಕ್ಷಣ ಪಡೆಯಲು ಮನವಿ ಮಾಡುತ್ತೇವೆ' ಎಂದರು.

# ಕತ್ತಲೆ ನಡುವೆ ಮಿಂಚಿದ ಕಿರಣ ಶಿವಾಜಿ: ಡಾ. ಸುಮನಬಾಯಿ

• **ಮಲ್ಲಮ್ಮ ನುಡಿ ವಾರ್ತೆ ಬೀದರ**




ಯುವ ಮನಸುಗಳಿಗೆ ಸಂಸ್ಕೃತಿಯ ದಿಕ್ಕು ತೋರಿದ ಧೀಮಂತ ನಾಯಕ ಛತ್ರಪತಿ ಶಿವಾಜಿ ಮಹಾರಾಜರು ಕತ್ತಲೆಯ ನಡುವೆ ಮಿಂಚಿದ ಕಿರಣವಾಗಿದ್ದಾರೆ ಎಂದು ಸ.ಪ್ರ.ದ.ಕಾಲೇಜು ನೌಬಾದನ ಇತಿಹಾಸ ವಿಭಾಗದ ಮುಖ್ಯಸ್ಥೆ ಡಾ. ಸುಮನಬಾಯಿ ಶಿಂಧೆ ತಿಳಿಸಿದರು.

ಕರ್ನಾಟಕ ಮರಾಠ ಸಮುದಾಯ ಅಭಿವೃದ್ಧಿ ನಿಗಮ ಬೆಂಗಳೂರು, ಕರ್ನಾಟಕ ಸಾಹಿತ್ಯ ಸಂಘ, ಕರ್ನಾಟಕ ಪಶುವೈದ್ಯಕೀಯ ಪಶು ಹಾಗೂ ಮೀನುಗಾರಿಕೆಗಳ ವಿಶ್ವವಿದ್ಯಾಲಯ ಬೀದರ ಹಾಗೂ ಕರ್ನಾಟಕ ಕಾಲೇಜಿ ಇತಿಹಾಸ ವಿಭಾಗದ ಸಂಯುಕ್ತಾಶ್ರಯದಲ್ಲಿ ಕರ್ನಾಟಕ ಕಾಲೇಜಿನ ಸಭಾಂಗಣದಲ್ಲಿ "ಯುವ ನಾಯಕತ್ವಕ್ಕೆ ಛತ್ರಪತಿ ಶಿವಾಜಿ ಮಹಾರಾಜರ ಜೀವನ ದರ್ಶನ" ಎಂಬ ವಿಷಯದ ಮೇಲೆ ಆಯೋಜಿಸಿದ ಬಹುಶಿಸ್ತೀಯ ರಾಷ್ಟ್ರೀಯ ವಿಚಾರ ಸಂಕಿರಣದ ಮೊದಲನೇ ಗೋಷ್ಠಿಯಲ್ಲಿ ಯುವಕರಿಗೆ ಶಿವಾಜಿ ಹೇಗೆ ಮಾದರಿ? ಕುರಿತು ಗೋಷ್ಠಿ-2 ರಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿದರು.

ಒಬ್ಬ ಅರಸನಿಗೆ ಇರಬೇಕಾದ ಧೈರ್ಯ ಸ್ಥೈರ್ಯ ಅವರಲ್ಲಿತ್ತು. ಸೈನಿಕರಲ್ಲಿ ಆತ್ಮವಿಶ್ವಾಸ ತುಂಬಿ ಯುದ್ಧಗಳನ್ನು ಗೆಲ್ಲುತಿದ್ದರು. ಇಂದಿನ ಕಾಲದಲ್ಲಿ ತಾಯಂದಿರು ಮಕ್ಕಳಿಗೆ ಧೈರ್ಯ ಶೌರ್ಯದ ಮತ್ತು ವ್ಯಕ್ತಿತ್ವ ವಿಕಸನವಾಗುವ ಕಥೆಗಳು ಹೇಳುತ್ತಿಲ್ಲ ಎಂದು ಕಳವಳ ವ್ಯಕ್ತಪಡಿಸಿದ್ದರು. ಅಲ್ಲದೆ ಸರಳ ಜೀವನ, ತೀಕ್ಷ್ಣಮತಿ, ಕ್ರಿಯಾಶೀಲ ವ್ಯಕ್ತಿತ್ವದಿಂದ ಶಿವಾಜಿ ಯುವಕರಿಗೆ ಮಾದರಿಯಾಗಿದ್ದರು ಎಂದರು.

ಕಲಬುರಗಿ ವಿ.ಜಿ. ಮಹಿಳಾ ಕಾಲೇಜಿನ ಪ್ರಾಧ್ಯಾಪಕ ಡಾ. ಸುಭಾಷಚಂದ್ರ ದೊಡಮನಿ ಉಪಸ್ಥಿತರಿದ್ದರು. ಬಿ.ವಿ.ಭೂಮರೆಡ್ಡಿ ಕಾಲೇಜಿನ ಪ್ರಾಧ್ಯಾಪಕ ಬಸವರಾಜ ಬಿರಾದಾರ ಸ್ವಾಗತಿಸಿ ನಿರೂಪಿಸಿದರು. ಡಾ. ಪದ್ಮಿನಿ ಕಾಜಿ ವಂದಿಸಿದರು.

# ಬರಪೀಡಿತ ಜಿಲ್ಲೆಗಳಿಗೆ ಕೃಷ್ಣಾ ನದಿ ನೆರೆ ನೀರು





• **ಮಲ್ಲಮ್ಮ ನುಡಿ ವಾರ್ತೆ ನವದೆಹಲಿ**

ತೀವ್ರ ಜಲಕ್ಷಾಮಕ್ಕೆ ತುತ್ತಾಗಿರುವ ಕೋಲಾರ, ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ಕುಡಿಯುವ ನೀರಿನ ಉದ್ದೇಶಕ್ಕಾಗಿ ಕೃಷ್ಣಾ ನದಿಯಿಂದ ಹೆಚ್ಚುವರಿ ನೆರೆ ನೀರು ಹರಿಸುವ ಬಗ್ಗೆ ಆಂಧ್ರ ಪ್ರದೇಶದ ಮುಖ್ಯಮಂತ್ರಿಗಳಾದ ಎನ್. ಚಂದ್ರಬಾಬು ನಾಯ್ಡು ಅವರಿಗೆ ಕೋಲಾರ ಸಂಸದ ಮಲ್ಲೇಶ್ ಬಾಬು ಅವರು ಮನವಿ ಸಲ್ಲಿಸಿದರು.

ನವದೆಹಲಿಯಲ್ಲಿ ಮಂಗಳವಾರ ಸಂಸತ್ ಭವನದಲ್ಲಿರುವ ಕೇಂದ್ರ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ ಅವರ ಕಚೇರಿಗೆ ತಮ್ಮ ರಾಜ್ಯ-ಕ್ಕೆ ಸಂಬಂಧಿಸಿದ ಅಭಿವೃದ್ಧಿ ವಿಚಾರಗಳ ಬಗ್ಗೆ ಚರ್ಚಿಸಲು ಆಂಧ್ರ ಪ್ರದೇಶದ ಮುಖ್ಯಮಂತ್ರಿಗಳು ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ಮಲ್ಲೇಶ್ ಬಾಬು ಅವರು ಮನವಿ ಪತ್ರ ಸಲ್ಲಿಸಿದರು.

ಕೃಷ್ಣಾ ನದಿಯಿಂದ ಸಮುದ್ರಕ್ಕೆ ಹರಿದು ಹೋಗುತ್ತಿರುವ ನೆರೆ ನೀರಿನಲ್ಲಿ ಸ್ವಲ್ಪ ಪ್ರಮಾಣವನ್ನು ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ಹರಿಸಬೇಕು. ಈ ನೀರನ್ನು ಕೇವಲ ಕುಡಿಯುವ ನೀರಿನ ಉದ್ದೇಶಕ್ಕೆ ಬಳಕೆ ಮಾಡಲಾಗುವುದು ಎಂದು ಅವರು ಮನವರಿಕೆ ಮಾಡಿಕೊಟ್ಟರು.

ಈಗಾಗಲೇ ಗಡಿಭಾಗದಲ್ಲಿ ಆಂಧ್ರ ಪ್ರದೇಶ ಸರ್ಕಾರವು 'ಹಂದ್ರಿ ಸುಜಲಾ ಶ್ರವಂತಿ ಯೋಜನೆ' (ಹೆಚ್.ಎನ್.ಎಸ್.ಎಸ್) ಯೋಜನೆಯ ಮೂಲಕ ಕರ್ನಾಟಕದ ಈ ಮೂರು ಜಿಲ್ಲೆಗಳಿಗೆ ಕುಡಿಯುವ ನೀರಿನ ಉದ್ದೇಶಕ್ಕಾಗಿ ಹೆಚ್ಚುವರಿ ನೆರೆ ನೀರನ್ನು ಕೊಡಬೇಕು. ಇದನ್ನು ಮಾನವೀಯ ನೆಲೆಗಟ್ಟಿನಲ್ಲಿ ಪರಿಶೀಲನೆ ನಡೆಸಬೇಕು ಎಂದು ಮಲ್ಲೇಶ್ ಬಾಬು ಅವರು ವಿನಂತಿಸಿದರು.

ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳು ಆಂಧ್ರಪ್ರದೇಶದ ಗಡಿಯನ್ನು ಹಂಚಿಕೊಂಡಿರುವ ಜಿಲ್ಲೆಗಳಾಗಿದ್ದು, ಪಾಲಾರ್ ಮತ್ತು ಪೆನ್ನಾರ್ ಜಲಾನಯನ ಪ್ರದೇಶದ ವ್ಯಾಪ್ತಿಗೆ ಬರುತ್ತವೆ. ಈ ಭಾಗದ ಜನರು ಅನೇಕ ದಶಕಗಳಿಂದ ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿದ್ದಾರೆ. ಅಲ್ಲದೆ, ಈ ಭಾಗದಲ್ಲಿ ಅಂತರ್ಜಲ ಮಟ್ಟ ಪಾತಾಳಕ್ಕೆ ಕುಸಿದಿದ್ದು, ಲಭ್ಯವಿರುವ ನೀರು ಕುಡಿಯಲು ಯೋಗ್ಯವಾಗಿಲ್ಲ. ಹೀಗಾಗಿ ಮಾನವೀಯ ದೃಷ್ಟಿಯಿಂದ ನಮ್ಮ ಮನವಿಯನ್ನು ಪರಿಗಣಿಸಬೇಕು ಎಂದು ಅವರು ಕೋರಿದರು.

ನಿಮ್ಮ ಮನವಿಯ ಬಗ್ಗೆ ಕೂಲಂಕಷವಾಗಿ ಪರಿಶೀಲಿಸುವ ಭರವಸೆ ನೀಡಿದ ಚಂದ್ರಬಾಬು ನಾಯ್ಡು ಅವರು; ಅಧಿಕಾರಿಗಳ ಜತೆ ಚರ್ಚೆ ನಡೆಸಲಾಗುವುದು. ನೀವು ಹೇಳಿದ ಮೂರು ಜಿಲ್ಲೆಗಳ ನೀರಿನ ಸಮಸ್ಯೆ ಬಗ್ಗೆ ನನಗೂ ಮಾಹಿತಿ ಇದೆ ಎಂದರು.

ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ರಾಜ್ಯ ಸಚಿವ ಭೂಪತಿರಾಜು ಶ್ರೀನಿವಾಸ ವರ್ಮ ಸೇರಿದಂತೆ ಆಂಧ್ರಪ್ರದೇಶದ ತೆಲುಗುದೇಶಂ, ಜನಸೇನ ಹಾಗೂ ಬಿಜೆಪಿ ಪಕ್ಷಗಳ ಎಲ್ಲಾ ಸಂಸದರು, ರಾಜ್ಯಸಭೆ ಸದಸ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)